Editor: NITYANANDASWAMI Publisher: U. BASAVARAJA RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ದುಡಿಯುವ ಜನರ ಪ್ರಾಣಮಿತ್ರ

ಸಂಪುಟ–17 ಸಂಚಿಕೆ–2 ಜನವರಿ 9–15, 2023 ಪುಟ 16 ರೂ. 10/–

Volume-17 Issue-2 January 9-15, 2023 Pages:16 Price Rs 10/-



ಮೀಸಲಾತಿ: ಸಮುದಾಯಗಳ ಬಿಕ್ಕಟ್ಟುಗಳಿಗೆ ಪರಿಹಾರವೇ?



ಮಂಡ್ಯಕ್ಕೆ ಅಮಿತ್ ಷಾ: ಕಾಮಧೇನುವಿನ ಕುತ್ತಿಗೆಗೆ ಕತ್ತಿ

ಕನ್ನಡ ಪರಂಪರೆ ಪ್ರತಿನಿಧಿಸದ ಸಾಹಿತ್ಯ ಸಮ್ಮೇಳನ






ಕೃಷಿ ಬಿಕ್ಕಟ್ಟು ಇಷ್ಟಪಡುವ ಸಾಮ್ರಾಜ್ಯಶಾಹಿ

ಅಂಗನವಾಡಿ: ಮುಷ್ಕರಕ್ಕೆ ಸಿದ್ಧತೆ

‘ವೀರ’ ಸಾವರ್ಕರ್–ಏಳು ಮಿಥ್ಯೆಗಳು

ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಡಾ.ಶಮ್ಸುಲ್ ಇಸ್ಲಾಮ್ ರವರ ‘ಸಾವರ್ಕರ್ ಅನ್‌ಮಾಸ್ಕ್ಡ್’ ಸಾವರ್ಕರ್‌ರವರನ್ನು ಕುರಿತ ಏಳು ಮಿಥ್ಯೆಗಳನ್ನು ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸುತ್ತದೆ.



ಭಾಗ–11

ಡಾ.ಶಮ್ಸುಲ್ ಇಸ್ಲಾಂ
ಅನು: ಟಿ.ಸುರೇಂದ್ರರಾವ್

ಮಿಥ್ಯೆ 1 –‘ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ’!

ಇದುವರೆಗೆ...

ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ.. ಸಾವರ್ಕರ್ ಅಸಾಧಾರಣ ಧೈರ್ಯ ಪ್ರದರ್ಶಿಸಿದರು. ಬ್ರಿಟಿಷ್ ಆಳರಸರೊಂದಿಗೆ ಅವರು ಎಂದೂ ಶಾಮೀಲಾಗಲಿಲ್ಲ ಎನ್ನುವ ಹಿಂದುತ್ವ ಪ್ರಚಾರಕರ ಮಿಥ್ಯೆಯನ್ನು ಪರಿಶೀಲಿಸುತ್ತ ಕಾಲಾಪಾನಿ ಅಥವಾ ಕರಿನೀರು ಎಂದು ಕರೆಯಲ್ಪಡುವ ಅಂಡಮಾನಿನ ಭಯಂಕರ ಸೆಲ್ಯುಲರ್ ಜೈಲಿನಲ್ಲಿ ಗೂಡಿನಂತಿರುವ ಸಣ್ಣಕೋಣೆಯಲ್ಲಿ ಭೀಕರ ಕ್ರೌರ್ಯಗಳಿಗೆ ಒಳಗಾದವರು ಸಾವರ್ಕರ್ ಒಬ್ಬರೇ ಎಂದು ಬಿಂಬಿಸುವ ಪ್ರಯತ್ನ ನಡೆಯುತ್ತಿದೆ ಎನ್ನುವ ಲೇಖಕರು, ಸೆಲ್ಯುಲರ್ ಜೈಲು ಅಂದರೆ ಕೇವಲ ಸಾವರ್ಕರ್ ಕತೆ ಅಲ್ಲ ಎನ್ನುತ್ತಾರೆ. ಸ್ವತಃ ಸಾವರ್ಕರ್ ತಮ್ಮ ರಾಜಕೀಯ ಜೀವನದ ಮೊದಲ ಘಟ್ಟದಲ್ಲಿ, ಭಾರತವು ಹಿಂದೂ ಮತ್ತು ಮುಸ್ಲಿಮರ ನಡುವಿನ ಘರ್ಷಣೆಯ ಕಣವಾಗಿತ್ತು ಎಂಬ ವಾದವನ್ನಾಗಲೀ ಅಥವಾ ಹಿಂದೂಗಳು ಮಾತ್ರ ಭಾರತದ ಸಹಜ ದೇಶಪ್ರೇಮಿಗಳು ಎಂಬ ನಂಬಿಕೆಯನ್ನಾಗಲೀ ಹೊಂದಿರಲಿಲ್ಲ. ಆದರೆ ಸೆಲ್ಯುಲರ್ ಜೈಲಿನಲ್ಲಿನ ಕಾರಾಗೃಹವಾಸ ಮತ್ತು ಅವರು ಅಲ್ಲಿ ಪಡಬೇಕಾದ ಘೋರ ಯಾತನೆಯಿಂದ ಸಂಪೂರ್ಣವಾಗಿ ಕುಗ್ಗಿದ ಅವರು ಕೋಮು ಸಾಮರಸ್ಯದ ಸ್ವತಂತ್ರ ಭಾರತದ ಆದರ್ಶಕ್ಕಾಗಿ ತುಡಿಯುತ್ತಿದ್ದ ಕ್ರಾಂತಿಕಾರಿಯಾಗಿ ಈಗ ಉಳಿಯಲಿಲ್ಲ. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿನ ಹಿಂದೂ–ಮುಸ್ಲಿಂ ಐಕ್ಯತೆಯಿಂದ ಆತಂಕಿತರಾಗಿದ್ದ ಬ್ರಿಟಿಷ್ ದೊರೆಗಳಿಗೆ ಕ್ಷಮಾಯಾಚನೆಯ ಅರ್ಜಿಯೊಂದಿಗೆ ತಮ್ಮ ರಾಜಕೀಯ ಬದುಕಿನ ಎರಡನೇ ಘಟ್ಟ ಆರಂಭಿಸಿದ ಸಾವರ್ಕರ್ ರಂತವರ ಸಹಾಯ ಬೇಕಿತ್ತು, ಅದಕ್ಕಾಗಿ ಅವರನ್ನು ಬಿಡುಗಡೆ ಮಾಡಿದರು ಎನ್ನುವುದನ್ನು ಯಾರೂ ಅರ್ಥಮಾಡಿಕೊಳ್ಳಬಲ್ಲರು. ಸಾವರ್ಕರ್ ಅವರ ಆವಶ್ಯಕತೆಯನ್ನು ಈಡೇರಿಸಿದರು. ಸಾವರ್ಕರ್ ಮತ್ತು ಹಿಂದೂ ಮಹಾಸಭಾ ಎಷ್ಟು ಪ್ರಬಲವಾಗಿ ಬ್ರಿಟಿಷರ ಬಾಲಬಡುಕರಾಗಿದ್ದರು ಎನ್ನುವುದನ್ನು ಹಿಂದೂ ಮಹಾಸಭಾವು ಸ್ವಾತಂತ್ರ್ಯ ಪೂರ್ವದಲ್ಲಿ ಹೊರತಂದ ಪುಸ್ತಕವನ್ನು ಇಣುಕಿ ನೋಡಿದರೆ ತಿಳಿಯುತ್ತದೆ. 1929ರಲ್ಲಿ ವಿದೇಶಿ ದೊರೆಗಳಿಂದ ಸಾವರ್ಕರ್ ಅವರಿಗೆ ನಿವೃತ್ತಿ ವೇತನ ಮಂಜೂರು ಮಾಡಿರುವುದು ಅವರ ಒಡೆದು ಆಳುವ ಯೋಜನೆಯಲ್ಲಿ ಸಾವರ್ಕರ್ ಅವರು ಎಷ್ಟು ಮುಖ್ಯವಾಗಿದ್ದರು ಎಂಬುದನ್ನೂ ತೋರಿಸುತ್ತದೆ.

ಮುಂದೆ ಓದಿ...

ಸಾವರ್ಕರ್ ಮಾದರಿ ‘ದೇಶಾತೀತ ಸ್ವಾಮಿನಿಷ್ಠೆ’: ಭಾರತವನ್ನು ನೇಪಾಳದ ರಾಜ ಆಳಬೇಕೆಂಬ ಬಯಕೆ!

ಭಾರತೀಯ ಮುಸ್ಲಿಮರದ್ದು ‘ದೇಶಾತೀತ ನಿಷ್ಠೆ’ ಎಂದು ಸಾವರ್ಕರ್ ತೀವ್ರ ಟೀಕೆ ಮಾಡುತ್ತಿದ್ದರು. 1937 ರಲ್ಲಿ ಹಿಂದೂ ಮಹಾಸಭಾದ 19 ನೇ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತಾ, ಅವರು ಹೇಳುತ್ತಾರೆ:

ಒಬ್ಬ ಮೊಹಮ್ಮದನು ಅನೇಕ ವೇಳೆ ದೇಶಾತೀತ ಸ್ವಾಮಿನಿಷ್ಠೆಗೆ ಮಾನ್ಯತೆ ನೀಡುವುದನ್ನು ಕಾಣುತ್ತೇವೆ, ಒಂದು ದೇಶವಾಗಿ ಭಾರತದ ಬಗ್ಗೆ ಕಾಳಜಿ ವಹಿಸುವುದಕ್ಕಿಂತ, ಪ್ಯಾಲೆಸ್ತೀನಿನಲ್ಲಿನ ವಿದ್ಯಮಾನಗಳ ಬಗ್ಗೆ ಹೆಚ್ಚು ಅನುಕಂಪ ತೋರುತ್ತಾನೆ, ಭಾರತದ ನೆರೆಹೊರೆಯ ಹಿಂದೂಗಳ ಹಾಗೂ ದೇಶವಾಸಿಗಳ ಯೋಗಕ್ಷೇಮಕ್ಕಿಂತ ಅರಬರ ಯೋಗಕ್ಷೇಮದ ಬಗ್ಗೆ ಹೆಚ್ಚು ಚಡಪಡಿಸುತ್ತಾನೆ.

ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರ ‘ಪವಿತ್ರ ಭೂಮಿ’ಗಳು ಭಾರತದಿಂದ ಬಹಳ ದೂರದಲ್ಲಿರುವುದರಿಂದ ಅವರನ್ನು ಭಾರತೀಯ ಪ್ರಜೆಗಳೆಂದು ಒಪ್ಪಲು ಸಾವರ್ಕರ್ ನಿರಾಕರಿಸುತ್ತಾರೆ.

ಆದರೆ, ಅದೇ ಸಾವರ್ಕರ್ ಅವರಿಗೆ, ನೇಪಾಳದ ರಾಜನನ್ನು ಭಾರತದ ಹಾಗೂ ಜಗತ್ತಿನ ಹಿಂದೂಗಳ ರಾಜ ಎಂದು ಘೋಷಿಸಲು ಯಾವುದೇ ಧರ್ಮಶಂಕೆ ಅಥವಾ ಅಳುಕು ಇಲ್ಲ. ಇತರ ಹಿಂದುತ್ವ ಮುಖಂಡರುಗಳ ರೀತಿಯಲ್ಲಿ ಜಗತ್ತಿನ ಎಲ್ಲೆಡೆಯ ಹಿಂದೂಗಳು ನೇಪಾಳದ ರಾಜನ ಸಾರ್ವಭೌಮತ್ವದ ಅಡಿಯಲ್ಲಿ ಇದ್ದಾರೆ ಎಂದು ಸಾವರ್ಕರ್ ನಂಬುತ್ತಾರೆ. ಪ್ರತಿಯೊಂದು ಹಿಂದೂ ಮಹಾಸಭಾ ಅಧಿವೇಶನಗಳಲ್ಲಿ ನೇಪಾಳದ ರಾಜನ ಚಿತ್ರಪಟವನ್ನು ಎದ್ದುಕಾಣುವಂತೆ ಪ್ರದರ್ಶಿಸುವುದು ಕಡ್ಡಾಯವಾಗಿತ್ತು. ಪ್ರತಿಯೊಂದು ಅಧಿವೇಶನವು ನೇಪಾಳದ ರಾಜನನ್ನು ಕೊಂಡಾಡುವುದರೊಂದಿಗೆ ಪ್ರಾರಂಭವಾಗುತ್ತಿತ್ತು ಮತ್ತು ಅವನಿಗೆ ತಮ್ಮ ನಿಷ್ಠೆಯನ್ನು ಸಾರಿ ಹೇಳುವ ಮೂಲಕ ಕೊನೆಯಾಗುತ್ತಿತ್ತು.

ಅಹಮದಾಬಾದಿನಲ್ಲಿ ಡಿಸೆಂಬರ್ 30, 1937 ರಂದು ನಡೆದ ಹಿಂದೂ ಮಹಾಸಭಾದ 19 ನೇ ಅಧಿವೇಶನದಲ್ಲಿ ಸಾವರ್ಕರ್ ಅವರು ಅಧ್ಯಕ್ಷರಾಗಿ ಆಯ್ಕೆಯಾಗುತ್ತಾರೆ. ಹಿಂದೂ ಮಹಾಸಭಾವು ಪ್ರಕಟಿಸಿದ ಆ ಅಧಿವೇಶನದ ಕಾರ್ಯಕಲಾಪಗಳ ಪ್ರಕಾರ ಅಧ್ಯಕ್ಷೀಯ ಭಾಷಣವನ್ನು ಮಾಡುವಾಗ ಸಾವರ್ಕರ್ ಅವರು ಮೊದಲು ನೇಪಾಳದ ರಾಜನಿಗೆ ತಮ್ಮ ಗೌರವಗಳನ್ನು ಈ ರೀತಿಯಲ್ಲಿ ಸಲ್ಲಿಸುತ್ತಾರೆ:

ಮಹಾಪ್ರಭುಗಳಾದ ನೇಪಾಳದ ಮಹಾರಾಜ, ಘನತೆವೆತ್ತ ಶ್ರೀ ಯುದ್ಧ್ ಸಂಶೇರ್ ರಾಣಾಜಿ – ನೇಪಾಳದ ಪ್ರಧಾನ ಮಂತ್ರಿಗಳು ಹಾಗೂ ಅಲ್ಲಿನ ನಮ್ಮ ಸಹ ಧರ್ಮೀಯರು ಮತ್ತು ದೇಶವಾಸಿಗಳಿಗೆ ಎಲ್ಲಾ ಹಿಂದೂಗಳ ಪರವಾಗಿ ನಮ್ಮ ನಿಷ್ಠಾವಂತ ಹಾಗೂ ಪ್ರೀತಿಪೂರ್ವಕ ಶುಭಾಶಯಗಳನ್ನು ಮುನ್ನವೇ ಕಳಿಸುವುದು ನಾನು ಮಾಡಲೇಬೇಕಾದ ಕರ್ತವ್ಯವೆಂದು ನಾನು ಭಾವಿಸುತ್ತೇನೆ; ಏಕೆಂದರೆ ಅವರು ನಮ್ಮ ಇತಿಹಾಸದ ಕರಾಳ ಸಮಯದಲ್ಲಿ ಕೂಡ ಹಿಂದೂ ಅಧಿಕಾರವನ್ನು ಪಟ್ಟಾಗಿ ಹಿಡಿದಿಟ್ಟುಕೊಂಡಿದ್ದಾರೆ, ಹಿಂದೂ ಸ್ವಾತಂತ್ರ್ಯದ ಬಾವುಟವನ್ನು ಕಳಂಕಿತವಾಗದಂತೆ ಹಿಮಾಲಯದ ಪರ್ವತ ಶ್ರೇಣಿಯಲ್ಲಿ ಹಾರುತ್ತಿರುವಂತೆ ನೋಡಿಕೊಂಡಿದ್ದಾರೆ . . . ಈ ತಲೆಮಾರಿನ ಸರಿ ಸುಮಾರು ಇಪ್ಪತ್ತೈದು ಕೋಟಿ ನಮ್ಮ ಹಿಂದೂಗಳ ನಡುವೆ ಮಹಾಪ್ರಭುಗಳಾದ ನೇಪಾಳದ ಮಹಾರಾಜರು ಇವತ್ತು ಮೊಟ್ಟಮೊದಲಿಗರಾದ ಮತ್ತು ಒಬ್ಬರೇ ಹಿಂದೂಗಳಾದ ರಾಜರಾಗಿ ರಾಜರುಗಳ, ಚಕ್ರವರ್ತಿಗಳ ಹಾಗೂ ಜಗತ್ತಿನ ಎಲ್ಲಾ ಸ್ವತಂತ್ರ ದೇಶಗಳ ಅಧ್ಯಕ್ಷರ ಕೂಟದೊಳಗಡೆ ತಲೆಎತ್ತಿ ಬಗ್ಗಿರದೆ, ಸಮಾನರಲ್ಲಿ ಸಮಾನರಾಗಿ ಪ್ರವೇಶ ಮಾಡಬಲ್ಲವರಾಗಿದ್ದಾರೆ . . . ಪರಂಪರಾಗತವಾಗಿ ನಮ್ಮ ಸಮಾನ ತಾಯ್ನಾಡು, ಮತ್ತು ನಮ್ಮ ಸಮಾನ ಪವಿತ್ರ ನಾಡು ಮತ್ತು ಅತ್ಯಂತ ಪ್ರಿಯವಾದ ಸಮಾನ ಜನಾಂಗ ಹಾಗೂ ಧರ್ಮ ಮತ್ತು ಭಾಷೆ ಹಾಗೂ ಸಂಸ್ಕೃತಿಯ ಮೂಲಕ ನೇಪಾಳವು ಇಡಿಯಾಗಿ ಹಿಂದೂರಾಜ್ಯಕ್ಕೆ ಬದ್ಧವಾಗಿರುತ್ತದೆ. ನಮ್ಮ ಬದುಕು ಒಂದೇ.

ಭಿಡೆಯವರ ಪುಸ್ತಕದ ಪ್ರಕಾರ, ನೇಪಾಳದ ರಾಜನನ್ನು “ಸ್ವತಂತ್ರ ಹಿಂದೂಸ್ತಾನದ ಭಾವಿ ಚಕ್ರವರ್ತಿ”ಯಾಗಿ ಹೊಂದುವುದು ನ್ಯಾಯಸಮ್ಮತವಾದುದು ಎಂದು ಕೂಡ ಸಾವರ್ಕರ್ ಅವರು ಪ್ರಚಾರ ಮಾಡಿದರು. ಸಾವರ್ಕರ್ ಅವರನ್ನು ಉಲ್ಲೇಖಿಸುವುದಾದರೆ:

ನಿಜಾಮರ ಆಳ್ವಿಕೆಯು ಹಾಗೆ ಕಾಣಬಹುದಾದರೆ ನೇಪಾಳದ ಹಿಂದೂರಾಜರ ಪರಮಾಧಿಕಾರವುಳ್ಳ ಆಳ್ವಿಕೆಯು ಕೊನೇ ಪಕ್ಷ ‘ನೂರಕ್ಕೆ ನೂರರಷ್ಟು ಸ್ವದೇಶದ ಆಳ್ವಿಕೆಯಾಗುತ್ತದೆ, ಒಂದು ನಿಜವಾದ ಪ್ರಜಾಡಳಿತವಾಗುತ್ತದೆ’ ಎನ್ನುವುದನ್ನು ಗಾಂಧೀಜಿಯವರು ಕೂಡ ನಿರಾಕರಿಸುವ ಧೈರ್ಯಮಾಡುವುದಿಲ್ಲ! ಒಣ ತರ್ಕದ ಸಂಭವದ ಆಧಾರದಲ್ಲಿ ಇವತ್ತು ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡರೆ, ನೇಪಾಳದ ಸಾರ್ವಭೌಮ ರಾಜ, ಶಿಸೋಡಿಯಾದ ಮಹಾರಾಜ ಮಾತ್ರವೇ ಭಾರತದ ಚಕ್ರವರ್ತಿಯ ಕಿರೀಟವನ್ನು ಗೆಲ್ಲುವ ಅತ್ಯುತ್ತಮ ಸಾಧ್ಯತೆಯನ್ನು ಹೊಂದಿದ್ದಾರೆ. ಸೋಜಿಗವೆನಿಸಬಹುದಾದರೂ, ಹಿಂದೂಗಳಿಗಿಂತ ಬ್ರಿಟಿಷರಿಗೆ ಅದು ಚೆನ್ನಾಗಿ ಗೊತ್ತು.

ತನ್ನ ವಾದಕ್ಕೆ ಪೂರಕವಾಗಿ ಪರ್ಸಿವಾ ಲ್ಯಾಂಗ್‌ಡನ್ ಎಂಬೊಬ್ಬ ಪ್ರಖ್ಯಾತ ಬ್ರಿಟಿಷ್ ಸಂಪ್ರದಾಯವಾದಿ ಇತಿಹಾಸಕಾರನ ಮಾತುಗಳನ್ನು ಉಲ್ಲೇಖಿಸುತ್ತಾ, ಸಾವರ್ಕರ್ ಅವರು ಹೇಳುತ್ತಾರೆ:

ಭಾರತದ ಒಂದು ತುದಿಯಿಂದ ಮತ್ತೊಂದು ತುದಿಯವರೆಗಿರುವ ಕೋಮು ಗಲಭೆಗಳು ನೇಪಾಳಕ್ಕೆ ಒಂದು ಪ್ರಾಮುಖ್ಯತೆ ನೀಡುವುದನ್ನು ಕಡೆಗಣಿಸುವುದು ಮೂರ್ಖತನವಾದೀತು. ದಕ್ಷಿಣ ಏಶಿಯಾದ ಅನಿಶ್ಚಿತತೆಯಲ್ಲಿ ನೇಪಾಳವು ಹೊಂದಿರುವ ಉನ್ನತ ಸ್ಥಾನವನ್ನು ಮತ್ತು ಭಾರತವನ್ನು ಇಂದು ಆವರಿಸಿರುವ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಅದು ಭವಿಷ್ಯದಲ್ಲಿ ಹೊಂದಬಹುದಾದ ಪ್ರಧಾನ ಹಾಗೂ ಬಹುಮುಖ್ಯ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳಲು ಇಂಗ್ಲಿಷರು ಪ್ರಯತ್ನ ಮಾಡಬೇಕು. ನೇಪಾಳವು ಇಂದು ಹೊಸ ಚೈತನ್ಯದ ಹೊಸ್ತಿಲಲ್ಲಿ ನಿಂತಿದೆ. ಅದರ ಭವಿಷ್ಯವು ಅದನ್ನು ಒಂದೇ ದಿಕ್ಕಿನತ್ತ ಕೊಂಡೊಯ್ಯುತ್ತಿದೆ. ಭಾರತದ ಹಣೆಬರಹವನ್ನು ನಿರ್ಧರಿಸಲು ಕೂಡ ನೇಪಾಳವನ್ನು ನೆಚ್ಚಿಕೊಂಡರೆ, ಅದು ಅಸಾಧ್ಯವೇನಲ್ಲ.

ತಮ್ಮ ಕೈಯಿಂದ ಜಾರಿ ಹೋಗುವ ಮೊದಲೇ ಭಾರತವನ್ನು ತಮ್ಮ ಮಿತ್ರರಾಷ್ಟ್ರ ನೇಪಾಳದ ರಾಜನ ಕೈಗೆ ಒಪ್ಪಿಸಿಬಿಡಿ ಎಂದು ಇಂಗ್ಲೆಂಡಿನ ರಾಣಿಯನ್ನು ಕೋರುವ ಮಟ್ಟಕ್ಕೂ ಹೋದರು ಸಾವರ್ಕರ್. ಭಾರತದ ಸ್ವಾತಂತ್ರ್ಯದ ಸಮಸ್ಯೆಗೆ ಅಸಾಧಾರಣವಾದ ‘ಹಿಂದೂ’ ಪರಿಹಾರವಾಗಿ, ಭಾರತ ರಾಷ್ಟ್ರವು ತಮ್ಮ ಕಪಿಮುಷ್ಠಿಯಿಂದ ಕೈಜಾರುವ ಮೊದಲೇ ಅದನ್ನು “ಬ್ರಿಟನ್ನಿನ ಸಮಾನ ಹಾಗೂ ಸ್ವತಂತ್ರ ಮಿತ್ರರಾಷ್ಟ್ರವಾದ ನೇಪಾಳದ ರಾಜನಂಥವರಿಗೆ ಒಪ್ಪಿಸಬೇಕು” ಎಂದು ಬ್ರಿಟಿಷ್ ರಾಣಿಯ ಮುಂದೆ ಸಾವರ್ಕರ್ ತಮ್ಮ ವಾದ ಮಂಡಿಸುತ್ತಾರೆ.

ಹೀಗೆ ಸಾವರ್ಕರ್ ಅವರು ಭಾರತವು ಹಿಂದೂರಾಷ್ಟ್ರವಾದ ನೇಪಾಳದ ದೊರೆಗಳ ಅಧೀನವಾಗಬೇಕೆಂದು ಸಾವರ್ಕರ್ ಬಯಸಿದ್ದರು. ಇದೇ ದೊರೆಗಳು 1857 ರ ವಿಮೋಚನಾ ಸಮರದ ಸಮಯದಲ್ಲಿ ಬ್ರಿಟಿಷರ ಜತೆ ಕೈಗೂಡಿಸಿದ್ದರು ಮತ್ತು ವಿಮೋಚನಾ ಸಮರವು ವಿಫಲವಾಗುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ‘ದಂಗೆ’ ಕುರಿತ ಸಮಕಾಲೀನ ಬ್ರಿಟಿಷ್ ದಾಖಲೆಗಳು ಈ ಬಗ್ಗೆ ಸಾಕಷ್ಟು ಪುರಾವೆಗಳನ್ನು ಒದಗಿಸುತ್ತವೆ. ಅದರ ಪ್ರಕಾರ ದೆಹಲಿ, ರೋಹಿಲ್ ಖಂಡ ಮತ್ತು ಅವಧ ಪ್ರದೇಶಗಳನ್ನು ಬ್ರಿಟಿಷರು ಗೆಲ್ಲಲು ದಂಗೆಯ ವಿರುದ್ಧ ನೇಪಾಳದ ರಾಜ ಜಂಗ್ ಬಹಾದೂರ್ 50 ಸಾವಿರ ಗೂರ್ಖಾ ಸಿಪಾಯಿಗಳನ್ನು ಬ್ರಿಟಿಷ್ ಸೇನೆಯ ಸಹಾಯಕ್ಕಾಗಿ ಕಳಿಸಿದ್ದರು. ಆ ಅವಧಿಯ ಬ್ರಿಟಿಷ್ ಗೆಜೆಟ್ ಪ್ರಕಾರ ಈ ಗೂರ್ಖಾ ಸೈನ್ಯವು ದೆಹಲಿ, ಅಜಂಗರ್, ಬಾರಬಂಕಿ, ಗೋರಖ್ ಪುರ್, ಬಸ್ತಿ, ಬರಾಯ್ಕ್, ಬುಲಂದ್ ಶಹರ್, ಬದೌನ್ ಮುಂತಾದ ಪ್ರದೇಶಗಳಲ್ಲಿ ದೇಶೀಯ ಕ್ರಾಂತಿಕಾರಿಗಳನ್ನು ಸೋಲಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ. ಬ್ರಿಟಿಷ್ ಗೆಜೆಟ್ ಪ್ರಕಾರ “ನೂರಾರು ದಂಗೆಕೋರರು ನೇಪಾಳದ ಸೇನೆಯಿಂದ ಹತರಾದರು.”ಮತ್ತೊಂದು ಸಮಕಾಲೀನ ಬ್ರಿಟಿಷ್ ದಾಖಲೆಗಳ ಪ್ರಕಾರ ದಂಗೆಯನ್ನು ಬಗ್ಗುಬಡಿದ ನಂತರ ಜಂಗ್ ಬಹಾದೂರ್ ನೇತೃತ್ವದ ನೇಪಾಳದ ಸೇನೆಯು ಅಯೋಧ್ಯಾ ಮತ್ತು ಗೋರಖ್ ಪುರ್ ಮೂಲಕ ನೇಪಾಳಕ್ಕೆ ಹಿಂತಿರುಗುವಾಗ ಆ ಪ್ರಯಾಣವು ಬಹಳ ನಿಧಾನವಾಗಿ ಚಲಿಸುತ್ತಿತ್ತು. ಕಾರಣವೇನೆಂದರೆ, ಭಾರತದಿಂದ ಲೂಟಿ ಮಾಡಿದ ಸಂಪತ್ತಿನಿಂದ ತುಂಬಿ ತುಳುಕುತ್ತಿದ್ದ ಅಸಂಖ್ಯಾತ ಗಾಡಿಗಳು ಅಲ್ಲಿದ್ದವು. 1857 ರ ವಿಮೋಚನಾ ಸಮರವನ್ನು ಹತ್ತಿಕ್ಕುವಲ್ಲಿ ಸೇವೆ ಸಲ್ಲಿಸಿದ ಕಾರಣಕ್ಕಾಗಿ ನೇಪಾಳದ ರಾಜನಿಗೆ ಭಾರತದ ಬಹು ದೊಡ್ಡ ತರಿಜಮೀನನ್ನು ಬ್ರಿಟಿಷ್ ದೊರೆಗಳು ಬಹುಮಾನವಾಗಿ ನೀಡಿದ್ದರು ಎಂಬ ವಿವರಗಳೂ ಸಹ ಆ ಸಮಕಾಲೀನ ಬ್ರಿಟಿಷ್ ದಾಖಲೆಗಳಿಂದ ನಮಗೆ ತಿಳಿಯುತ್ತದೆ. ಈ ವಾಸ್ತವಾಂಶಗಳನ್ನು ತಿಳಿದಿದ್ದ ಭಾರತೀಯ ದಂಗೆಕೋರರ ಪ್ರಮುಖ ಅಧಿಪತಿಯಾಗಿದ್ದ ಬಿತೂರಿನ ನಾನಾ ಸಾಹೇಬ್ ಅವರು ದೇಶದ ಜನರಿಗೆ ಬರೆದ ತಮ್ಮ ಅಂತಿಮ ಪತ್ರದಲ್ಲಿ ಬಹಳ ಸ್ಪಷ್ಟವಾಗಿ ಬರೆದಿದ್ದರು: ದಂಗೆಯನ್ನು ಸೆದೆಬಡಿಯಲು ಬ್ರಿಟಿಷರು ಸಮರ್ಥರಾಗಿರಲಿಲ್ಲ, ಆದರೆ ಗೂರ್ಖಾಗಳು ಮತ್ತು ದೇಶೀಯ ರಾಜರುಗಳ ಸಹಾಯದಿಂದಾಗಿ ಬ್ರಿಟಿಷರು ಜಯಶಾಲಿಗಳಾದರು.

ನೇಪಾಳದ ರಾಜನನ್ನು ಜಗತ್ತಿನ ಹಿಂದೂಗಳ ಚಕ್ರವರ್ತಿ ಎಂದು ಪರಿಗಣಿಸುವ ತಂತ್ರದಲ್ಲಿ ಹಿಂದುತ್ವ ಪಡೆಯು ಈಗಲೂ ಕೂಡ ಆಸಕ್ತಿ ಕಳೆದುಕೊಂಡಿಲ್ಲ. ವಿಶ್ವ ಹಿಂದೂ ಮಹಾಸಂಘವು (ವರ್ಲ್ಡ್ ಹಿಂದೂ ಫೆಡರೇಷನ್) ಜನವರಿ 23, 2004 ರಂದು ಕಟ್ಮಂಡುವಿನಲ್ಲಿ ಸಂಘಟಿಸಿದ್ದ ಕಾರ್ಯಕ್ರಮವೊಂದರಲ್ಲಿ ನೇಪಾಳದ ರಾಜ ಗ್ಯಾನೇಂದ್ರ ವೀರ ವಿಕ್ರಮ ಶಾ ಅವರನ್ನು ವಿಶ್ವದ ಎಲ್ಲೆಡೆಯ ಹಿಂದೂಗಳ ಏಕೈಕ ಚಕ್ರವರ್ತಿ ಎಂದು ದೈವೀಕರಿಸಿ ಕೊಂಡಾಡಿದರು. ಗೀತೆ ಮತ್ತು ಪುರಾಣಗಳಲ್ಲಿ ಹೇಳಿದಂತೆ ಅವರನ್ನು ದೇವತಾ ಸ್ವರೂಪ ಎಂದು ವೈಭವೀಕರಿಸಲಾಗಿದೆ. ಆಗಿನ ವಿಶ್ವ ಹಿಂದೂ ಪರಿಷತ್ತಿನ ಕಾರ್ಯಾಧ್ಯಕ್ಷ ಅಶೋಕ ಸಿಂಘಾಲ್ ಅವರನ್ನೂ ಒಳಗೊಂಡಂತೆ ಆರ್.ಎಸ್.ಎಸ್. ಮುಖಂಡರುಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ದೈವೀಕರಣದ ಆ ಸಮಾರಂಭವನ್ನು ಉದ್ದೇಶಿಸಿ ಮಾತನಾಡುತ್ತಾ ಸಿಂಘಾಲ್ ಹೀಗೆ ಹೇಳಿದರು:

ಹಿಂದೂ ಸಾಮ್ರಾಟನನ್ನು ರಕ್ಷಿಸುವುದು ವಿಶ್ವದೆಲ್ಲೆಡೆ ಇರುವ 900 ಮಿಲಿಯನ್ ಹಿಂದೂಗಳ ಜವಾಬ್ದಾರಿಯಾಗಿದೆ. . .ಧರ್ಮವನ್ನು ರಕ್ಷಿಸಲು ದೇವರು ಅವರನ್ನು ಸೃಷ್ಟಿಸಿದ್ದಾರೆ.

ಹಿಂದೂಗಳ ಹಿತಕ್ಕಾಗಿ ಸೇವೆ ಸಲ್ಲಿಸುತ್ತಿರುವ ಸಿಂಘಾಲ್ ಅವರನ್ನು ಹಿಂದೂ ಸಾಮ್ರಾಟರು ಸನ್ಮಾನಿಸುವುದರೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

(ಮುಂದುವರೆಯುವುದು)

ಸಂಪಾದಕೀಯ

ಕನ್ನಡ ಪರಂಪರೆ ಪ್ರತಿನಿಧಿಸದ ಸಾಹಿತ್ಯ ಸಮ್ಮೇಳನ

ಹಾವೇರಿಯಲ್ಲಿನ 86ನೆಯ ಕನ್ನಡ ಸಾಹಿತ್ಯ ಸಮ್ಮೇಳನ ತೀವ್ರತರ ಟೀಕೆ, ವಿವಾದಗಳಿಗೆ ಕಾರಣವಾಗಿದೆ. ಕನ್ನಡದ ಪ್ರಾತಿನಿಧಿಕ ಸಂಸ್ಥೆ ಎಂದು ಒಂದು ಕಾಲಕ್ಕೆ ಹೆಗ್ಗಳಿಕೆ ಇದ್ದ ಸಾಹಿತ್ಯ ಪರಿಷತ್ತು ಜನದನಿಗೆ ಇಂಬು ಕೊಡದೇ ಆಳುವವರ ಮರ್ಜಿ ಮತ್ತು ಅಣತಿಗಳಂತೆ ವರ್ತಿಸುವ, ಅನುದಾನ ಕೊಟ್ಟವರ ಸಾಕು ಸಂಸ್ಥೆಯಾಗಿ ಮಾರ್ಪಾಡಾಗಿರುವುದು ದುರಂತವೇ ಸರಿ. ಕನ್ನಡದ ಭಾಷೆ ಬದುಕಿಗಿಂತ ಇಲ್ಲಿ ಸಿಗುವ ಪ್ರತಿಷ್ಠೆ, ಹೆಚ್ಚುಗಾರಿಕೆಯ ಪ್ರಭಾವ, ಸಮಾರಂಭಗಳಲ್ಲಿ ಮಿಂಚುವ ಬಯಕೆ ಮುಂತಾದವುಗಳಿಗೆ ಹಂಬಲಿಸುವವರು ಅಧ್ಯಕ್ಷರಾಗಲು ನಡೆಸುವ 'ಬಹುಮುಖಿ ಹೋರಾಟಗಳು' ಇಂದಿನ ದಿನಮಾನಗಳಲ್ಲಿ ಮಾನದಂಡಗಳಾಗುತ್ತಿವೆ. ಅಧಿಕಾರ ಗದ್ದುಗೆಯ ಯಾವ ಚುನಾವಣೆಗಳಿಗೂ ಕಡಿಮೆ ಇಲ್ಲದಂತೆ ಹಣ, ಆಮಿಷ, ಜಾತಿ ಗಳು ಪ್ರಾಧಾನ್ಯತೆಯನ್ನು ಪಡೆಯುತ್ತಿವೆ. ಸರ್ಕಾರಕ್ಕೆ ಕಿವಿ ಹಿಂಡಿ ನಾಡು, ನುಡಿ, ಬದುಕಿನ ರಕ್ಷಣೆಗೆ ಬದ್ಧವಾಗಿ ಅಗತ್ಯ ಬಂದಾಗ ಚಾಟಿ ಬೀಸಿ ಸರಿ ದಾರಿಗೆ ತರಬೇಕಿದ್ದ ಕ.ಸಾ.ಪ. ಅಧಿಕಾರಸ್ಥರ ಮುಂದೆ ಮಂಡಿಯೂರುವುದು ಸಮಸ್ತ ಕರ್ನಾಟಕದ ಜನತೆಗೆ ಮಾಡುವ ಅವಮಾನ. ಈ ದೃಷ್ಟಿಯಲ್ಲಿ ಈ ಸಂಸ್ಥೆ ಸಮಸ್ತ ಕನ್ನಡಿಗರ ಪ್ರಾತಿನಿಧಿಕವಾಗೇನೂ ಉಳಿದಿಲ್ಲ.

ಸಮ್ಮೇಳನ ನಡೆಯುತ್ತಿರುವ ಹಾವೇರಿ ಹಲವು ದೃಷ್ಟಿಯಿಂದ ವೈಶಿಷ್ಟ್ಯಗಳನ್ನು ಹೊಂದಿರುವ ಜಿಲ್ಲೆಯಾಗಿದೆ. ಶಿಶುನಾಳ ಶರೀಫಜ್ಜ, ಗುರು ಗೋವಿಂದಭಟ್ಟ, ಕಾಗಿನೆಲೆಯ ಕನಕದಾಸರು ಮುಂತಾದವರ ಚಿಂತನೆ ಹಾಗೂ ಕರ್ಮಭೂಮಿ ಇದು. ಸಮಾಜ ವ್ಯವಸ್ಥೆಯಲ್ಲಿನ ತರತಮಗಳನ್ನು ನಿರ್ದಾಕ್ಷಿಣ್ಯವಾಗಿ ಬಯಲಿಗೆಳೆದು, ಖಂಡಿಸಿ ವಿವೇಕವನ್ನು ಸಾರಿದ, ಎಲ್ಲ ಮಾನವರನ್ನೂ ಒಂದು ಎಂದು ಒಳಗೊಳಿಸಿದ ದಾರ್ಶನಿಕರು, ಸಂತರು ಬದುಕಿ ಬಾಳಿದ ನೆಲ. ಆದರೆ ಇಂತಹ ಕನ್ನಡದ ಪರಂಪರೆಯ ನಾಡಿನಲ್ಲಿ ಜರುಗುತ್ತಿರುವ ಸಾಹಿತ್ಯ ಸಮ್ಮೇಳನದಲ್ಲಿ ಭಿನ್ನ ವೈಚಾರಿಕತೆ ಮತ್ತು ದಲಿತ, ಮುಸ್ಲಿಂ ಅಲ್ಪಸಂಖ್ಯಾತ ರೆಂಬ ಕಾರಣಕ್ಕೆ ಸಾಹಿತ್ಯಿಕ ವಲಯದ ಸಾಧಕರನ್ನು, ನವ ಪೀಳಿಗೆಯನ್ನು ದೂರ ಇರಿಸಿದ್ದು ಖಂಡಿತಕ್ಕೂ ಅಕ್ಷಮ್ಯ. ಇದು ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ರಂಗದಲ್ಲಿ ಆದ ಒಂದು ಕಪ್ಪು ಕಲೆ. ಇಂತಹ ಕ್ರಮಗಳ ಮೂಲಕ ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರದ ಸೈದ್ಧಾಂತಿಕ ಧೋರಣೆ ಮತ್ತು ರಾಜಕೀಯ ತಂತ್ರಗಾರಿಕೆಗೆ ಪರೋಕ್ಷವಾಗಿ ಬೆಂಗಾವಲಾಗಿ ನಿಂತು ಸಮರ್ಥಿಸಿರುವುದು ಎದ್ದು ಕಾಣುತ್ತಿದೆ. ಇದು ಕನ್ನಡ ಸಾಹಿತ್ಯ ಪರಂಪರೆಗೆ ಮಾಡಿದ ಅವಮಾನ.

ಇನ್ನು ಎರಡನೆಯದಾಗಿ, ಕನ್ನಡ ಸಾಹಿತ್ಯ ಸಮ್ಮೇಳನ ನಾಡಿನ ಜ್ವಲಂತ ಪ್ರಶ್ನೆಗಳತ್ತ ಗಮನಹರಿಸಬೇಕಿತ್ತು. ನಾಡು ನುಡಿ ರಕ್ಷಣೆಗೆ ಜನತೆಯನ್ನು ಜಾಗೃತಗೊಳಿಸಿ ಆಳುವವರ ಎದುರಿನಲ್ಲಿ ಆಗ್ರಹದ ದನಿ ಆಗಬೇಕಿತ್ತು. ಈಗಾಗಲೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆರ್ಥಿಕ ನೀತಿಗಳು ಕನ್ನಡ ನಾಡಿನ ಮಣ್ಣಿನ ಮಕ್ಕಳು ಮತ್ತು ಶ್ರಮಿಕರನ್ನು, ಬಹುತೇಕ ಜನಸಾಮಾನ್ಯರನ್ನು ಸಂಕಷ್ಟಕ್ಕೆ ದೂಡಿದೆ. ಬದುಕು ಕಂಡುಕೊಳ್ಳಲಾಗದ ಭವಿಷ್ಯಕ್ಕೆ ಅಂಧಾಕಾರ ಕವಿಯುವ ಆತಂಕ ಸ್ಥಿತಿ ಎಲ್ಲೆಡೆಗಳಲ್ಲೂ ವಿಸ್ತರಿಸುತ್ತಿದೆ. ಉದಾರೀಕರಣ ಒಡ್ಡಿದ ಬೆದರಿಕೆಯೊಟ್ಟಿಗೆ ಭಾರತ ಸರ್ಕಾರದ ಭಾಷಾ ನೀತಿ ಮತ್ತು ಹಿಂದಿ, ಸಂಸ್ಕೃತ ಗಳ ಏಕಸ್ವಾಮ್ಯತೆ ಸೃಷ್ಟಿಗೆ ಅವನ್ನು ಕನ್ನಡದ ಮೇಲೆ ಹೇರುವುದರ ಮೂಲಕ ಕನ್ನಡ ಭಾಷೆಯ ಅಸ್ತಿತ್ವಕ್ಕೆ ಆತಂಕ ಹುಟ್ಟಿಸಿರುವುದು ಎದ್ದು ಕಾಣುತ್ತಿದೆ. ಕನ್ನಡ ನಾಡಿನಲ್ಲಿಯೇ ಹುಟ್ಟಿ ಬೆಳೆದ ಬ್ಯಾಂಕ್ ಗಳಂತಹ ಹಣಕಾಸು ಸಂಸ್ಥೆಗಳ ವಿಲೀನ ಒಳಗೊಂಡು ಕರ್ನಾಟಕದ ಅಸ್ಮಿತತೆಯನ್ನು ಅಳಿಸಿ ಹಾಕುವ ಪ್ರಾದೇಶಿಕ ವೈಶಿಷ್ಟತೆಗಳನ್ನು ಇಲ್ಲವಾಗಿಸುವ, ಮಾತ್ರವಲ್ಲ ಕನ್ನಡ ನಾಡಿನ ಇತಿಹಾಸ ಪರಂಪರೆಗೆ ಮಸಿ ಬಳೆಯುವ ಪ್ರಯತ್ನಗಳು ನಿತ್ಯ ನಿರಂತರವಾಗಿವೆ. ಒಕ್ಕೂಟದ ವ್ಯವಸ್ಥೆಯಲ್ಲಿ ರಾಜ್ಯಗಳ ಸ್ಥಾನಮಾನ ಕುಸಿತವಾಗುತ್ತಿದೆ. ಕೇಂದ್ರದ ಏಕಸ್ವಾಮ್ಯತೆಯ ಹಿಡಿತದಿಂದ ರಾಜ್ಯಗಳು ಆರ್ಥಿಕ ಸಂಪನ್ಮೂಲಗಳ ಕೊರತೆ ಮತ್ತು ಅಧಿಕಾರ ಹೀನತೆಯಿಂದ ನಿರ್ಜೀವವಾಗುತ್ತಿವೆ. ಅಲ್ಲದೆ ಏಕಸ್ವಾಮ್ಯ ಬಂಡವಾಳಗಾರರ, ಕಾರ್ಪೊರೇಟ್ ಕಂಪನಿಗಳಿಗೆ ನಾಡಿನ ನೈಸರ್ಗಿಕ ಸಂಪನ್ಮೂಲಗಳನ್ನು ಉದ್ಯಮಗಳನ್ನು ಪರಭಾರೆ ಮಾಡಲಾಗುತ್ತಿದೆ. ಆರ್ಥಿಕ ಸ್ವಾಯತ್ತತೆ ಉಳಿಯದೇ ಭಾಷೆ ಮತ್ತು ಸಾಂಸ್ಕೃತಿಕ ಸ್ವಾಯುಕ್ತತೆಗಳು, ಜನರ ಬದುಕು ಉಳಿಯುವುದಿಲ್ಲ. ಮಾತ್ರವಲ್ಲ, ಜನತೆಯನ್ನು ಕೋಮುವಾದ, ಜಾತಿಯತೆಗಳನ್ನು ಬಳಸಿ ವಿಭಜಿಸಲಾಗುತ್ತಿದೆ. ಇಂತಹ ವಿಭಜಕ ಪ್ರಯತ್ನಗಳ ಎದುರಿನಲ್ಲಿ ದನಿಯೆತ್ತಿ ಇಡೀ ಕನ್ನಡದ–ಕರ್ನಾಟಕದ ಎಲ್ಲಾ ಜನತೆಯನ್ನು ಒಗ್ಗೂಡಿಸಿ ಒಳಗೊಳ್ಳುವ ಕ್ರಮಗಳು ಸಾಹಿತ್ಯ ಸಮ್ಮೇಳನದ ಹೃದಯ ವಸ್ತುವಾಗಬೇಕಿತ್ತು. ಅದಃಪತನಕ್ಕೆ ಕೊಂಡೊಯ್ಯಲಾದ ಕುರುಡು ಕಾಂಚಾಣದ ಕುಣಿತದ ದುಷ್ಟ ರಾಜಕಾರಣಕ್ಕೆ ಎಚ್ಚರಿಕೆಯ ಡಿಂಡಿಮ ಬಾರಿಸಬೇಕಿತ್ತು. ಬದಲಾಗಿ, ಆಳುವ ಬಿಜೆಪಿಯ ರಾಜಕೀಯ ಉದ್ದೇಶಗಳಿಗೆ ಅದರಲ್ಲೂ ಮುಂಬರುವ ಚುನಾವಣೆಯನ್ನು ಗಮನದಲ್ಲಿರಿಸಿ ಅದಕ್ಕೆ ಹೊಂದಿಕೊಳ್ಳುವಂತೆ ವಿಷಯಗಳು, ಅತಿಥಿಗಳು ಮತ್ತು ಚಿಂತಕರುಗಳನ್ನು ಆಯ್ಕೆಯ ದೃಷ್ಟಿಯಲ್ಲಿಯೂ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಿರುವುದು ವಿಷಾಧಕರ.

ಸಮ್ಮೇಳನದ ಸರ್ವಾಧ್ಯಕ್ಷರಾಗಿರುವ ಪ್ರೊ. ದೊಡ್ಡರಂಗೇಗೌಡರು ಹಿರಿಯ ಸಾಹಿತಿಗಳು ನಿಜ. ಆದರೆ ಸಂಘ ಪರಿವಾರದ ಸೈದ್ಧಾಂತಿಕತೆಯ ಪ್ರತಿಪಾದಕರು ಎನ್ನುವುದು ಗೊತ್ತಿರುವ ಸಂಗತಿ. ಈ ಮಿತಿಗಳಲ್ಲೂ ಅವರು ನಾಡಿನ ಹಲವು ಮಹತ್ವದ ಪ್ರಶ್ನೆಗಳನ್ನು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ ಮತ್ತು ಜನತೆಯನ್ನು ಆಳುವವರನ್ನು ಎಚ್ಚರಿಸಲು ಪ್ರಯತ್ನಿಸಿದ್ದಾರೆ ಎನ್ನುವುದು ಸಹ ನಿಜ. ಆದರೆ ಆಳುವವರೆದು ಆಗ್ರಹದ ಧ್ವನಿಯಾಗಲಿಲ್ಲ. ಕೋಮುವಾದಿ ನೆಲೆಯಲ್ಲಿ ಜನತೆಯನ್ನು ವಿಭಜಿಸುವ ವರ್ತಮಾನದ ರಾಜಕಾರಣ ಮತ್ತು ಅದರ ದೀರ್ಘಾವಧಿ ಪರಿಣಾಮಗಳನ್ನು ಮನವರಿಕೆ ಮಾಡಿ ಪ್ರತಿಭಟಿಸಿ ಸಾಮರಸ್ಯ ಮತ್ತು ಸೌಹಾರ್ದದ ಕನ್ನಡದ ಪರಂಪರೆಯನ್ನು ಪ್ರತಿಪಾದಿಸದೆ ಹೋಗಿರುವುದು ಎದ್ದು ಕಾಣುವ ಲೋಪ. ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಅಧ್ಯಕ್ಷ ಮಹೇಶ್ ಜೋಶಿಯವರ ನಡೆ ನುಡಿ ವರ್ತನೆಗಳು ಬಾಲಿಶಃ ಮಾತ್ರವಲ್ಲ, ಕನ್ನಡ ಸಾಹಿತ್ಯ ಪರಿಷತ್ತನ್ನು ಸರಕಾರದ ಮುಂದೆ ಜೀತದಾಳನ್ನಾಗಿಸಿದ ಸಂಕುಚಿತ ಹಿತಾಸಕ್ತಿ, ಸ್ವಾಭಿಮಾನ್ಯ ಶೂನ್ಯತೆ ಅಳಿಸಲಾಗದ ಕಲೆ. ಈ ಬಾರಿಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಚುನಾವಣೆಯಲ್ಲಿ ನೇರವಾಗಿ ಸಂಘ ಪರಿವಾರ ಧುಮುಕಿ ಮಹಾನ್ ಸಂಸ್ಥೆಯನ್ನು ಸಹ ತನ್ನ ತೆಕ್ಕೆಗೆ ತೆಗೆದುಕೊಂಡಿದ್ದು ಅತ್ಯಂತ ಅಪಾಯಕಾರಿ ಸೂಚನೆ ಎನ್ನುವುದನ್ನು ಮತ್ತೊಮ್ಮೆ ಈ ಸಾಹಿತ್ಯ ಸಮ್ಮೇಳನದ ಸಂದರ್ಭ ಸಾಬೀತುಪಡಿಸಿದೆ.

ಈ ಸಾಹಿತ್ಯ ಸಮ್ಮೇಳನವನ್ನು ವಿನ್ಯಾಸಗೊಳಿಸಿದ ಬಗ್ಗೆ ಕನ್ನಡ ನಾಡಿನ ಅನೇಕ ಕಿರಿಯ ಸಾಹಿತಿಗಳು ಮತ್ತು ಪ್ರಗತಿಪರರ ತೀವ್ರ ಆಕ್ಷೇಪ ಕಾರಣವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ಜನರ ನೋವಿಗೆ, ವರ್ತಮಾನದ ಸವಾಲುಗಳಿಗೆ ಬೆನ್ನು ತೋರಿಸಿ ಆಳುವವರ ಆಡೊಂಭೋಲವಾದ ಸಂದರ್ಭಗಳಲ್ಲಿ ಸಿಡಿದೆದ್ದು ಬಂಡಾಯ ಸಾಹಿತ್ಯ ಚಳುವಳಿ ಯಾಗಿ ಹೊರ ಹೊಮ್ಮಿದ್ದು, ಆಳವಾಗಿ ಬೇರೂರಿ ಬೆಳೆದ ಐತಿಹಾಸಿಕತೆಯನ್ನು ಮರೆಯುವಂತಿಲ್ಲ. ಹಾವೇರಿಯಲ್ಲಿನ ಸಾಹಿತ್ಯ ಸಮ್ಮೇಳನಕ್ಕೆ ಸಾಹಿತ್ಯಿಕ, ಸಾಂಸ್ಕೃತಿಕ ಪ್ರತಿಕ್ರಿಯೆ ಪ್ರತಿರೋಧಗಳು ವ್ಯಕ್ತಗೊಂಡಿರುವುದು ಕನ್ನಡದ ಬಂಡಾಯ ಚಳುವಳಿಯ ಪ್ರಜ್ಞೆ ಜೀವಂತವಿರುವ ಲಕ್ಷಣ. ಅಂತಹ ಎಲ್ಲ ಪ್ರಯತ್ನಗಳು ಒಗ್ಗೂಡಿ ಪ್ರತಿರೋಧಧ ಅಲೆಯಾಗಲಿ. ಮತ್ತೊಮ್ಮೆ ನಾಡು ನುಡಿಯ ರಕ್ಷಣೆಗೆ ಮತ್ತು ಆದಃಪತನದ, ಭ್ರಷ್ಟ, ಮತೀಯ ದ್ವೇಷದ ರಾಜಕಾರಣಕ್ಕೆ ಅಂತ್ಯ ಹಾಡುವ ಶಕ್ತಿಯಾಗಿ ನಿಲ್ಲಲಿ.

ಕೇಂದ್ರೀಯ ವಿಶ್ವವಿದ್ಯಾಲಯ ಉಪಕುಲಪತಿಗಳ ನಿಷ್ಟೆ ಯಾವುದಕ್ಕೆ?
ಮನುಸ್ಮೃತಿಗೋ ಅಥವಾ ಸಂವಿಧಾನಕ್ಕೋ?
ಗಣ ವೇಶಧಾರಿ ಅಧ್ಯಾಪಕರ ಮೇಲೆ ಕ್ರಮ ಅಗತ್ಯ

ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಕಡಗಂಚಿಯಲ್ಲಿ ಇರುವ ಕೇಂದ್ರೀಯ ವಿಶ್ವವಿದ್ಯಾಲಯ ಮತ್ತೀಗ ಸುದ್ದಿ ಮಾಡಿದೆ. ಅದು ಆರ್. ಎಸ್. ಎಸ್. ಪ್ರಣೀತ ಉಪಕುಲಪತಿಯವರ ಪೂರ್ಣ ಬೆಂಬಲದೊಂದಿಗೆ ಅಲ್ಲಿನ ಸಿಬ್ಬಂದಿಗಳು ಅನಾವರಣವಾಗಿದ್ದಾರೆ ಎಂದೇ ಭಾವಿಸಬೇಕಾಗುತ್ತದೆ. ಮೂವರು ಸಿಬ್ಬಂದಿಗಳು ಸಂಘದ ಗಣವೇಷಧಾರಿಗಳಾಗಿ ಸಾಮಾಜಿಕ ಜಾಲತಾಣದಲ್ಲಿ ಕಾಣಿಸಿಕೊಂಡಿದ್ದಾರೆ. ವಿಶ್ವವಿದ್ಯಾಲಯದ ನಿಯಮದ ಪ್ರಕಾರ ನೌಕರರು ಯಾವುದೇ ಸಂಘ ಸಂಸ್ಥೆಗಳಿಗೆ ಸದಸ್ಯರು ಸಹ ಆಗಬಾರದು. ಆದರೆ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಅತ್ಯಂತ ನಿರ್ಭಯದಿಂದ ಸರಕಾರಿ ನಿಯಮ ಉಲ್ಲಂಘನೆ ಮಾಡಲಾಗುತ್ತಿದೆ. ಇದಕ್ಕೆ ಪೂರ್ಣ ಕುಮ್ಮಕ್ಕು ವಿ.ಸಿ.ಯವರದ್ದಾಗಿದೆ. ಆರ್.ಎಸ್.ಎಸ್. ಬ್ಯಾನ್ ಆದ ಸಂಘಟನೆಯಲ್ಲವಲ್ಲ ಎಂಬುದು ಸ್ವತಃ ವಿ.ಸಿ.ಯವರ ಉವಾಚವಾಗಿದೆ. ಹಾಗಾದರೆ ಆರ್ ಎಸ್ ಎಸ್ ಶಾಖೆಗಳನ್ನು ತೆರೆದು ನಡೆಸುವಲ್ಲಿ ವಿಶ್ವವಿದ್ಯಾಲಯ ಆಡಳಿತವೇ ಆಸಕ್ತಿ ಹೊಂದಿದೆ ಎಂಬುದು ರುಜುವಾದಂತೆ.

ಒಂದು ವಿಶ್ವವಿದ್ಯಾಲಯವು ವಿದ್ಯಾರ್ಥಿಗಳಿಗೆ ಸಾಂವಿಧಾನಿಕ ಮೌಲ್ಯಕ್ಕನುಸರಿಸಿ ಶೈಕ್ಷಣಿಕ ವಾತಾವರಣ ಕಲ್ಪಿಸಬೇಕೆ ಹೊರತು ಮತೀಯ ನೆಲೆಗಟ್ಟಿನ ಚಿಂತನೆಗಳನ್ನಲ್ಲ. ಈ ಹಿಂದೆಯೂ ಈ ಕೇಂದ್ರೀಯ ವಿ.ವಿ.ಯು ಕೋಮು ಚಟುವಟಿಕೆ ನಡೆಸುವುದಕ್ಕಾಗಿಯೇ ವಿರೋಧ ಎದುರಿಸಿತ್ತು.

ವಿ.ವಿ.ಯಲ್ಲಿ ಸಂಶೋಧನಾತ್ಮಕ, ಶೈಕ್ಷಣಿಕ ಚಟುವಟಿಕೆ ಕುಸಿದು ಹೋಗುತ್ತಿದ್ದು ಪ್ರಶ್ನಿಸುವ ವಿದ್ಯಾರ್ಥಿಗಳನ್ನು ಮೂಲೆಗುಂಪು ಮಾಡುವ ಅಥವಾ ಅವರನ್ನು ಪೊಲೀಸ್ ಮೂಲಕ ಹಣಿಯುವ ಷಡ್ಯಂತ್ರ ಮಾಡಲಾಗುತ್ತಿದೆ. ಒಟ್ಟಾರೆ ವಿ.ವಿಯಲ್ಲಿ ಭಾರತೀಯ ಸಂವಿಧಾನವನ್ನು ಬದಿಗೊತ್ತಿ ಜಾತಿ, ಲಿಂಗ ತಾರತಮ್ಯಗಳನ್ನು ಭೋಧಿಸುವ ಮನುಸ್ಮೃತಿ ಜಾರಿಗೊಳಿಸುವ ಹುನ್ನಾರಗಳು ಹರಿಗೊಳ್ಳುತ್ತಿರುವುದು ಸ್ಪಷ್ಟವಾಗಿದೆ. ಮತ್ತು ಕೇಂದ್ರೀಯ ವಿಶ್ವವಿದ್ಯಾಲಯವೊಂದು ನಮ್ಮ ನಾಡಿನ ಸೌಹಾರ್ದ ಪರಂಪರೆಯನ್ನು ನಾಶ ಮಾಡುವ ಷಡ್ಯಂತ್ರಕ್ಕೆ ಕೈ ಹಾಕಿರುವುದು ಆತಂಕಕಾರಿಯಾಗಿದೆ. ಶೈಕ್ಷಣಿಕ ಕೇಂದ್ರದ ಈ ಕೋಮುವಾದಿ ಕ್ರಮ ತೀವ್ರ ಖಂಡನೀಯ.

ರಾಷ್ಟ್ರೀಯ ಸ್ವಯಂ ಸೇವಕ (ಆರ್.ಎಸ್.ಎಸ್.) ಸಂಘವು ಮೂರು ಬಾರಿ ನಿಷೇಧಿಸಲ್ಪಟ್ಟಿರಿವುದನ್ನು ಜನತೆಯು ಮರೆತಿಲ್ಲ. ಮಹಾತ್ಮಾ ಗಾಂಧಿಯವರನ್ನು ಹತ್ಯೆ ಮಾಡಿದ ನಾಥೂರಾಂ ಗೋಡ್ಸೆ ಯಾರು? ಆರ್ ಎಸ್ ಎಸ್ ಗೆ ಸಂವಿಧಾನದ ಮೇಲೆ ನಂಬಿಕೆ ಇಲ್ಲ. ಮನುಸ್ಮೃತಿಯ ಮೌಲ್ಯ ಭಾರತದ ಸಂವಿಧಾನದಲ್ಲಿ ಇಲ್ಲವೆಂದು ಗೋಳ್ವಾಳ್ಕರ್ ತನ್ನ 'ಆರ್ಗನೈಜರ್' ಪತ್ರಿಕೆಯಲ್ಲಿ ಬರೆದು ದಾಖಲಿಸಿದ್ದಿದೆ. ಸಂವಿಧಾನದಲ್ಲಿ ನಂಬಿಕೆಯೇ ಇಲ್ಲದ ಇಂತಹ ಸಂವಿಧಾನ ವಿರೋಧಿ ಸಂಘಟನೆ ಮತ್ತು ಅದರ ಚಟುವಟಿಕೆಗಳಿಗೆ ವಿಶ್ವವಿದ್ಯಾಲಯದಲ್ಲಿ ಆಸ್ಪದ ಕೊಡಬೇಕೆ? ಪ್ರಜಾಪ್ರಭುತ್ವ ಬಲಪಡಿಸುವ ದಿಕ್ಕಿನಲ್ಲಿ ಸಾಂವಿಧಾನಿಕ ಮೌಲ್ಯದ ಆಧಾರದಲ್ಲಿ ವಿಶ್ವವಿದ್ಯಾಲಯ ಮುನ್ನಡೆಯಬೇಕು. ಆದರೆ ವಿ.ವಿ.ಯ ಉಪಕುಲಪತಿಗಳಿಗೆ ಸಂವಿಧಾನದ ಮೇಲಿನ ನಂಬಿಕೆಗಿಂತಲೂ ಮನುಸ್ಮೃತಿ ಮತ್ತು ಆರ್ ಎಸ್ ಎಸ್ ಮೇಲೆಯೇ ಪೂರ್ಣ ನಂಬಿಕೆ ಇದ್ದಂತೆ ಕಾಣುತ್ತದೆ. ಹಾಗಿದ್ದ ಪಕ್ಷದಲ್ಲಿ ಕೆಲಸಕ್ಕೆ ರಾಜಿನಾಮೆ ಕೊಟ್ಟು ಅವರು ಆರ್ ಎಸ್ ಎಸ್ ಶಾಖೆ ಸೇರಿಕೊಳ್ಳಬಹುದು. ಅದು ಅವರ ವ್ಯಕ್ತಿಗತವಾದ ನಿರ್ಧಾರ ಹಾಗೂ ಅಂತಹ ತೀರ್ಮಾನವನ್ನು ಕೈಗೊಂಡ ಬಳಿಕ ಏನೂ ಮಾಡಲು ಸ್ವತಂತ್ರರು. ಆದರೆ ಸರಕಾರದ ಸಂಬಳ ಪಡೆದು ಸಂವಿಧಾನ ವಿರೋಧಿ ಕೃತ್ಯದಲ್ಲಿ ತೊಡಗಲಿಕ್ಕೆ ಅವರಿಗೆ ಅಧಿಕಾರವಿಲ್ಲ.

ವಿಶ್ವವಿದ್ಯಾಲಯ ಇರುವುದು ನಾಡಿನ ಬಹುತ್ವದ ಪ್ರತೀಕವಾಗಿ. ಎಲ್ಲ ಸಮುದಾಯದ ವಿದ್ಯಾರ್ಥಿಗಳು ನಿರ್ಭಯದಿಂದ ವ್ಯಾಸಂಗ ಮಾಡಲು ಸಾಧ್ಯವಾಗಬೇಕು. ಅಂತಹ ವಾತಾವರಣ ಸೃಷ್ಟಿಸಬೇಕಾದ ವಿಸಿಯವರೇ ಮತೀಯ ಚಟುವಟಿಕೆ ಕುಮ್ಮಕ್ಕು ಕೊಡುತ್ತಿರುವುದು ಸ್ಪಷ್ಟವಾಗಿದೆ. ಏಕೆಂದರೆ ಸೆಂಟ್ರಲ್ ಸಿವಿಲ್ ಸರ್ವಿಸ್ ರೂಲ್ಸ್ (2966) ಪ್ರಕಾರ ಕೇಂದ್ರ ಸರಕಾರಿ ನೌಕರರು ಯಾವುದೇ ರಾಜಕೀಯ ಪಕ್ಷದ ಸದಸ್ಯರಾಗುವುದಾಗಲಿ ಅಥವಾ ರಾಜಕೀಯ ಪಕ್ಷದೊಂದಿಗೆ ಸಂಬಂಧವಿರಿಸಿಕೊಂಡ ಸಂಘ ಸಂಸ್ಥೆಗಳ ಸದಸ್ಯರಾಗುವುದನ್ನಾಗಲೀ ನಿರ್ಬಂಧಿಸಿದೆ. ಅಲ್ಲದೆ ನಿರ್ದಿಷ್ಟವಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ಜಮಾತ್ ಎ ಇಸ್ಲಾಮಿ ಹಿಂದ್ ನಂತಹ ಸಂಘಟನೆಗಳ ಸದಸ್ಯರಾಗುವುದನ್ನು ಸ್ಪಷ್ಟವಾಗಿ ನಿರ್ಬಂಧಿಸಿದೆ. ಇದನ್ನು ಉಲ್ಲಂಘಿಸಿದವರ ಮೇಲೆ ದಂಡನಾರ್ಹ ಕಾನೂನು ಕ್ರಮ ಕೈಗೊಳುಬೇಕು ಎಂದು ನಿರ್ದೇಶಿಸಿದೆ. ಈ ಕಾನೂನು ಜಾರಿ ಮಾಡಬೇಕಾಗಿರುವುದು ವಿ.ಸಿ.ಯವರೇ ಅಲ್ಲವೇನು? ಆದ್ದರಿಂದ, ಈ ಕಾನೂನಿನ ಅಡಿಯಲ್ಲಿ ಕ್ರಮ ಕೈಗೊಂಡು ಆರ್ ಎಸ್ ಎಸ್ ಗಣವೇಷಧಾರಿಗಳಾಗಿ ಪರೇಡ್ ಮಾಡುತ್ತಿರುವ ಸಾರ್ವಜನಿಕ ಆಡಳಿತ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಅಲೋಕಕುಮಾರ ಗೌರವ್, ಮನಶಾಸ್ತ್ರ ವಿಭಾಗದ ಡಾ.ವಿಜಯೇಂದ್ರ ಪಾಂಡೆ ಮತ್ತು ಜೀವ ವಿಜ್ಞಾನ ವಿಭಾಗದ ಡಾ.ರಾಕೇಶ ಕುಮಾರ ಈ ಮೂವರು ಪ್ರಾಧ್ಯಾಪಕರನ್ನು ವಜಾ ಮಾಡಬೇಕು. ಮತ್ತು ಇಂತಹ ಮತೀಯತೆಗೆ ಮತ್ತೆ ಮತ್ತೆ ಆಸ್ಪದ ಕೊಟ್ಟು ವಿ.ವಿಯ ವಾತಾವರಣವನ್ನೇ ಆತಂಕಕ್ಕೆ ದೂಡುತ್ತಿರುವ ವಿಶ್ವವಿದ್ಯಾಲಯದ ಉಪಕುಲಪತಿಗಳ ಮೇಲೂ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ಮಾನ್ಯ ರಾಷ್ಟ್ರಪತಿಗಳಲ್ಲಿ ವಿನಂತಿಸುತ್ತೇವೆ. ಮತೀಯ ಚಟುವಟಿಕೆಗಳನ್ನು ತಡೆದು ಎಲ್ಲ ಸಮುದಾಯಗಳ ವಿದ್ಯಾರ್ಥಿ ಹಾಗೂ ಸಿಬ್ಬಂದಿಗಳು ಪರಸ್ಪರ ಸೌಹಾರ್ದತೆಯಿಂದ ಶೈಕ್ಷಣಿಕ ಜ್ಞಾನ ವರ್ಧನೆಯಲ್ಲಿ ತೊಡಗಲು ಸಾಧ್ಯವಾಗಿಸಬೇಕೆಂದು ಕಲಬುರ್ಗಿ ಜಿಲ್ಲಾ ಸಿಪಿಐ(ಎಂ) ಪಕ್ಷವು ಆಗ್ರಹಿಸಿದೆ.

–ಕೆ.ನೀಲಾ

2023 ಜನವರಿ 23 ರಿಂದ ಅಂಗನವಾಡಿ ನೌಕರರ ಅನಿರ್ಧಿಷ್ಟಾವಧಿ ಮುಷ್ಕರಕ್ಕೆ ಕರೆ:



ಈ ಮುಷ್ಕರ ಯಾಕೆ?

ಸುನಂದ ಹೆಚ್.ಎಸ್.

ಅಂಗನವಾಡಿ ನೌಕರರು ಮತ್ತೊಮ್ಮೆ ಮುಷ್ಕರಕ್ಕೆ ಮುಂದಾಗಿದ್ದಾರೆ. ಇವರು ಜನವರಿ 23 ರಿಂದ ರಾಜ್ಯಾದ್ಯಂತ ಅನಿರ್ಧಿಷ್ಠ ಮುಷ್ಕರ ನಡೆಸಲು ನಿರ್ಧರಿಸಿದ್ದಾರೆ. ಯಾಕಾಗಿ ಈ ಮುಷ್ಕರ? ಅಂಗನವಾಡಿ ನೌಕರರ ಬೇಡಿಕೆಗಳೇನು? ಈ ಎಲ್ಲಾ ಪ್ರಶ್ನೆಗಳಿಗೆ ಅಂಗನವಾಡಿ ನೌಕರರ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಸುನಂದಾ ಹೆಚ್. ಎಸ್. ಅವರು ಇಲ್ಲಿ ವಿವರವಾಗಿ ಉತ್ತರಿಸಿದ್ದಾರೆ.

ಅಂಗನವಾಡಿ ಎಂದರೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಒಂದು ಕೇಂದ್ರ. ಮಕ್ಕಳಿಗೆ ಉತ್ತಮ ಭವಿಷ್ಯವೇ ಭಾರತದ ಭವಿಷ್ಯ ಎಂಬ ದೂರ ದೃಷ್ಟಿಯ ಹಿನ್ನೆಲೆಯಲ್ಲಿ ಇದರ ಅನುಷ್ಠಾನ ಮಾಡಲಾಗಿದೆ. ಅಂಗನವಾಡಿ ಕಾರ್ಯಕರ್ತೆಯರದು 6 ತಿಂಗಳಿಂದ 6 ವರ್ಷದೊಳಗಿನ ಮಕ್ಕಳ ಪಾಲನಾ ಕೇಂದ್ರದ ಕಾರ್ಯಕರ್ತೆ ಕೆಲಸ ಮಾತ್ರವೇ ಅಲ್ಲ. ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರಿಗೆ ಆಹಾರ ಭದ್ರತೆ ಒದಗಿಸುವ ಕೆಲಸ ಸೇರಿದಂತೆ ಯೋಜನೆಗೆ ಸಂಬಂಧಿಸಿದ 6 ಕೆಲಸಗಳನ್ನು ಮಾಡಬೇಕು. ಇದಕ್ಕಾಗಿ ಇವರಿಗೆ ಅತ್ಯಲ್ಪ ಗೌರವಧನ ಸಿಗುತ್ತದೆ.

ದೇಶದಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆ **(ICDS)** ಪ್ರಾರಂಭವಾಗಿ 48 ವರ್ಷಗಳಾದವು. ಯೋಜನೆಯ ಮೂಲ ಉದ್ದೇಶಕ್ಕಾಗಿ ಅಂಗನವಾಡಿ ನೌಕರರು ಯೋಜನೆಗೆ ಸಂಬಂಧಿಸಿದ 6 ಸೇವೆಗಳನ್ನು ನಿರಂತರವಾಗಿ ಮಾಡುತ್ತಾ ಬಂದಿದ್ದಾರೆ. ನೂತನ ರಾಷ್ಟ್ರೀಯ ಶಿಕ್ಷಣ ನೀತಿ 2020 ನ್ನು ಜಾರಿಗೆ ತರುವ ಮೂಲಕ ಸರ್ಕಾರ ಇಂದು ICDS ಯೋಜನೆಯನ್ನು ದುರ್ಬಲಗೊಳಿಸಲು ಮುಂದಾಗಿದೆ. ಆ ಮೂಲಕ ಬಾಲ್ಯಾವಸ್ಥೆಯ ಮಕ್ಕಳ ಶಿಕ್ಷಣದ ಹಕ್ಕುಗಳನ್ನು ಕಸಿಯಲು ಸರ್ಕಾರ ಮುಂದಾಗಿದೆ.

ಅಂಗನವಾಡಿ ಕೇಂದ್ರಗಳನ್ನು ದುರ್ಬಲಗೊಳಿಸುವ ನೂತನ ರಾಷ್ಟ್ರೀಯ ಶಿಕ್ಷಣ ನೀತಿ:

ಕೇಂದ್ರ ಸರ್ಕಾರ ನೂತನ ರಾಷ್ಟ್ರೀಯ ಶಿಕ್ಷಣ ನೀತಿ(NEP) 2020 ನ್ನು ಜಾರಿಗೆ ತಂದಿದೆ, ಈ ನೀತಿಯನ್ನು ರಾಜ್ಯದಲ್ಲಿ ಜಾರಿಗೆ ತರುವ ವಿಷಯದಲ್ಲಿ ರಾಜ್ಯ ಸರ್ಕಾರ ಸಂಬಂಧಿಸಿದ ಸಂಘಟನೆಗಳೊಂದಿಗೆ ಚರ್ಚಿಸಲಿಲ್ಲ. ಅದು ಟಾಸ್ಕ್ ಪೋರ್ಸ್ ಕಮಿಟಿಯನ್ನು ನೇಮಕ ಮಾಡಿತು. ಕಮಿಟಿಯ ವರದಿಯೂ ಬಂದಿದೆ. ನೂತನ ಶಿಕ್ಷಣ ನೀತಿಯ ಶಿಫಾರಸ್ಸಿನಂತೆ 4 ವರ್ಷ ಮೇಲ್ಪಟ್ಟ ಮಕ್ಕಳನ್ನು ಸರ್ಕಾರಿ ಶಾಲೆಗೆ ದಾಖಲಿಸಲು ಮುಂದಾಗುತ್ತಿದೆ. ನಮ್ಮ ರಾಜ್ಯದ ಶಿಕ್ಷಣ ಸಚಿವರು ರಾಜ್ಯದಲ್ಲಿಯೂ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತರಲು ಶಿಫಾರಸ್ಸಿಗೆ ಮುಂದಾಗಿದ್ದಾರೆ. ಈ ಶಿಕ್ಷಣ ನೀತಿ ಅಧಿಕೃತವಾಗಿ ಜಾರಿಯಾದರೆ, 62,580 ಅಂಗನವಾಡಿ ಕೇಂದ್ರಗಳು ಮತ್ತು 3,331 ಮಿನಿ ಅಂಗನವಾಡಿ ಕೇಂದ್ರಗಳು ಸಂಪೂರ್ಣ ದುರ್ಬಲಗೊಳ್ಳುವ ಪರಿಸ್ಥಿತಿಗೆ ಬರಲಿದೆ. ಅಂಗನವಾಡಿ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಬೇಕೆಂದು ನಮ್ಮ ಸಂಘಟನೆ ಕೇಳುತ್ತಲೇ ಬಂದಿದೆ. ಸರ್ಕಾರ ಅನ್ನದೊಟ್ಟಿಗೆ ಅಕ್ಷರ ಕೇಂದ್ರವಾಗಿ ಅಂಗನವಾಡಿ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಿ ಬಲಿಷ್ಠ ಪಡಿಸಬೇಕು. ICDS ನ ಮಾರ್ಗದರ್ಶಿ ಸೂಚಿಗಳ ಪ್ರಕಾರ, ಇರುವ 6 ಸೇವೆಗಳಿಗೆ ಮಾತ್ರ ಅಂಗನವಾಡಿ ನೌಕರರನ್ನು ಬಳಸಬೇಕು. ಆದರೆ ಸರ್ಕಾರ ಕಾರ್ಯಕರ್ತೆಯರಿಗೆ ಹಲವು ರೀತಿಯ ಕೆಲಸದ ಒತ್ತಡ ಹೇರುತ್ತಿದೆ. ಇದರಿಂದ ಯೋಜನೆಯ ಮೂಲ ಕೆಲಸಕ್ಕೆ ದಕ್ಕೆ ಆಗುತ್ತಿದೆ.

ಅಂಗನವಾಡಿ ಕಾರ್ಯಕರ್ತೆ "ಒಂದು ಮಗುವನ್ನು ಸತ್ಪ್ರಜೆಯಾಗಿ ಮಾಡುವ ಬೆಳಕಿನ ಶಕ್ತಿ". ಆ ಶಕ್ತಿಯನ್ನು ಅನುಚಿತವಾಗಿ ಬಳಸದೇ ಎಲ್ಲಾ ಅಂಗನವಾಡಿ ಕೇಂದ್ರಗಳಲ್ಲಿ ಹೊಸ ಶಿಕ್ಷಣ ನೀತಿ ಪರಿಣಾಮಕಾರಿಯಾಗಿ ಜಾರಿ ಮಾಡಲು ಬಳಸಬೇಕು. ಮಕ್ಕಳಿಗೆ ಶಿಕ್ಷಣ ಸಿಗಬೇಕಾದರೆ ಹೆಚ್ಚುವರಿ ಕೆಲಸ ನಿರ್ಬಂಧಿಸಿ 9.30 ರಿಂದ 2 ಗಂಟೆಯವರೆಗೆ ಮಕ್ಕಳ ಶಿಕ್ಷಣಕ್ಕೆ ಸಮಯ ಮಿಸಲಿಟ್ಟು ಅಂಗನವಾಡಿ ಕೇಂದ್ರಗಳನ್ನು ಶಿಕ್ಷಣ ಕೇಂದ್ರಗಳಾಗಿಸಬೇಕು, ಅಂಗನವಾಡಿ ಕಾರ್ಯಕರ್ತೆಗೆ ಶಿಕ್ಷಕಿಯರ ಸ್ಥಾನಮಾನ ನೀಡಬೇಕು.

ಗ್ರಾಚ್ಯುಟಿ ಪಾವತಿಸಲು ಕೂಡಲೇ ಸರ್ಕಾರ ಮುಂದಾಗಬೇಕು:

ಮಾನವ ಸಂಪನ್ಮೂಲ ಬೆಳವಣಿಗೆಗೆ ಪೂರಕವಾಗಿ ಕೆಲಸ ಮಾಡುವ ಅಂಗನವಾಡಿ ಕಾರ್ಯಕರ್ತೆಯರು ಗ್ರಾಚ್ಯುಟಿ ಪಡೆಯಲು ಅರ್ಹರು. "1972 ರ ಗ್ರಾಚ್ಯುಟಿ ಕಾಯ್ದೆಯ ಪ್ರಕಾರ ಅಂಗನವಾಡಿ ನೌಕರರು ಗ್ರಾಚ್ಯುಟಿ ಪಡೆಯಲು ಅರ್ಹರು ಎಂಬ ಐತಿಹಾಸಿಕ ತೀರ್ಪನ್ನು 25 ಏಪ್ರಿಲ್ 2022 ರಂದು ಮಾನ್ಯ ಸುಪ್ರಿಂ ಕೋರ್ಟ್ ನೀಡಿದೆ". ಇದರ ಪ್ರಕಾರ ಗ್ರಾಚ್ಯುಟಿ ಪಡೆಯಲು ರಾಜ್ಯಾದ್ಯಂತ ಸಾವಿರಾರು ನಿವೃತ್ತಿ ನೌಕರರು ಶಿಶು ಅಭಿವೃದ್ಧಿ ಯೋಜನಾಧಿಕಾರಿ(CDPO) ಮತ್ತು ಉಪ ನಿರ್ದೇಶಕರಿಗೆ, ಕಾರ್ಮಿಕ ಇಲಾಖೆಗೆ ಅರ್ಜಿಗಳನ್ನು ನೇರವಾಗಿ ಹಾಗೂ ಅಂಚೆ ಮೂಲಕ ಸಲ್ಲಿಸುತ್ತಿದ್ದಾರೆ. 48 ವರ್ಷಗಳ ಇತಿಹಾಸದಲ್ಲಿ ಮೊದಲ ಬಾರಿಗೆ ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಸಹಾಯಕಿಯರಿಗೆ ಈ ಒಂದು ಸವಲತ್ತು ಬಂದಿದೆ. ಗ್ರಾಚ್ಯುಟಿಗಾಗಿ ಅರ್ಜಿ ಸಲ್ಲಿಸಿರುವವರಿಗೆ ಪರಿಹಾರ ನೀಡಲು 'ರಾಜ್ಯ ಸಚಿವ ಸಂಪುಟ ತೀರ್ಮಾನಿಸಿ' ಜಾರಿ ಮಾಡಿ ಆದೇಶವಾಗಿ ತರಬೇಕು. ಮಾತ್ರವಲ್ಲ ಹಲವಾರು ನೌಕರರಿಗೆ ಅರ್ಜಿ ಸಲ್ಲಿಸಲು ಬೇಕಾದ ನೇಮಕಾತಿ, ನಿವೃತ್ತಿ ಆದೇಶಗಳನ್ನು ಒದಗಿಸಿಕೊಡಬೇಕು.

ಕೇಂದ್ರ ಸರ್ಕಾರ ಅನುಧಾನ ಹೆಚ್ಚಿಸಬೇಕು:

ಕೇಂದ್ರ ಸರ್ಕಾರ ICDS ಯೋಜನೆಯನ್ನು ಬಲಿಷ್ಠಗೊಳಿಸಲು ಅಗತ್ಯವಿರುವ ಅನುಧಾನ ಹೆಚ್ಚಿಸಬೇಕಾಗಿತ್ತು. ಜೊತೆಗೆ, ಅಗತ್ಯ ವಸ್ತುಗಳ ಬೆಲೆ ಏರಿಕೆ ಆಧಾರದಲ್ಲಿ ಬಜೆಟ್‌ನಲ್ಲಿ ಅನುದಾನ ಹೆಚ್ಚಿಸುವ ಅಗತ್ಯವೂ ಇತ್ತು. ಆದರೆ, ಅದು ಈ ಯೋಜನೆಗೆ ನೀಡುತ್ತಿದ್ದ ತನ್ನ ಪಾಲಿನ ಶೇ. 60ರ ಅನುದಾನವನ್ನು ಶೇ. 40 ಕ್ಕೆ ಇಳಿಸಿದೆ. ಈ ನಿರ್ಧಾರ ಮೂಲಕ ರಾಜ್ಯ ಸರ್ಕಾರಗಳ ಮೇಲೆ ಹೊರೆ ಹೊರಿಸಲಾಗಿದೆ. 2022–23 ರಲ್ಲಿ ಬೆಲೆ ಏರಿಕೆ ಆಧಾರದಲ್ಲಿ ಅನುಧಾನ ಹೆಚ್ಚಳ ನೀಡದೇ ರೂ. 20,26,307 ಕೋಟಿಯನ್ನು ಮಾತ್ರ ಬಜೆಟ್‌ನಲ್ಲಿ ಕೊಡಲಾಗಿದೆ. ರಾಜ್ಯಕ್ಕೆ ನೀಡಬೇಕಾದ ನಿಗದಿತ ಪಾಲನ್ನು ಸಮಯಕ್ಕೆ ಸರಿಯಾಗಿ ನೀಡುವ ಮೂಲಕ ICDS ನ್ನು ಬಲಿಷ್ಠ ಗೊಳಿಸಬೇಕಿದೆ.

ಹೆಚ್ಚುತ್ತಿರುವ ಶಿಸ್ತು ಕ್ರಮಗಳು:

48 ವರ್ಷಗಳಿಂದ ಅಂಗನವಾಡಿ ಮಹಿಳೆಯರಿಗೆ ಗೌರವಧನ ಮಾತ್ರ ಕೊಟ್ಟು ಸರ್ಕಾರಗಳು ದುಡಿಸಿಕೊಳ್ಳುತ್ತಿದೆ. ಸಮಯಕ್ಕೆ ಸರಿಯಾಗಿ ಗೌರವಧನ ಕೊಡುತ್ತಿಲ್ಲ. ಅಂಗನವಾಡಿ ಕೇಂದ್ರದ ಬಾಡಿಗೆ ಹಣ, ಮಕ್ಕಳಿಗೆ ಕೊಡುವ ಮತ್ತು ಆಹಾರ ತಯ್ಯಾರಿಕೆಗೆ ಖರೀದಿಸುವ ಮೊಟ್ಟೆ, ತರಕಾರಿ, ಗ್ಯಾಸ್ ಹಣವನ್ನು ಸರಿಯಾದ ಸಮಯಕ್ಕೆ ಕೊಡುತ್ತಿಲ್ಲ. ಆದರೆ ಕೆಲಸ ಮಾತ್ರ ಮಾಡಬೇಕು ಎಂಬ ಧೋರಣೆ ಅವಾಸ್ತವಿಕ. ಇತ್ತೀಚೆಗೆ ಅಂಗನವಾಡಿ ಕಾರ್ಯಕರ್ತೆ, ಸಹಾಯಕಿ ಸಣ್ಣ ತಪ್ಪು ಮಾಡಿದ ಕೂಡಲೇ ನೈಸರ್ಗಿಕ ನ್ಯಾಯವನ್ನು ಒದಗಿಸದೇ ಏಕಾ ಏಕಿ ಕೆಲಸದಿಂದ ವಜಾ ಮಾಡಲಾಗುತ್ತಿದೆ. ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಆಯ್ಕೆ ಕುರಿತು 15–06–2012 ರ ಪರಿಷ್ಕೃತ ಆದೇಶದಲ್ಲಿರುವ ಜಿಲ್ಲಾದಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾದಿಕಾರಿಗಳು, ಉಪನಿರ್ದೇಶಕರು ಮಹಿಳಾ & ಮಕ್ಕಳ ಅಭಿವೃದ್ಧಿ ಇಲಾಖೆ ಸಮಿತಿ ಅಂಗನವಾಡಿ ಕೇಂದ್ರಗಳಿಗೆ ಬರುವ ಸವಲತ್ತುಗಳನ್ನು ಜಾರಿ ಮಾಡಲು & ನೌಕರರ ಸಮಸ್ಯೆಗಳನ್ನು ಬಗೆ ಹರಿಸಲು ಸಾದ್ಯವಾಗಬೇಕು. ಇಲ್ಲದಿದ್ದಲ್ಲಿ ಈ ಸಮಿತಿಯನ್ನು ವಿಸರ್ಜಿಸಬೇಕು & ಅಂಗನವಾಡಿ ನೌಕರರಿಗೆ ಸೇವಾ ನಿಯಮಾವಳಿ ಜಾರಿ ಮಾಡಬೇಕು,

ಸಮಯಕ್ಕೆ ಸರಿಯಾಗಿ ಪಾವತಿಯಾಗದ ವೇತನ

ಅಂಗನವಾಡಿ ನೌಕರರಿಗೆ ತಿಂಗಳ ಸಂಬಳ, ಮೊಟ್ಟೆ ಹಣ, ಬಾಡಿಗೆ ಹಣ, ಅಡುಗೆ ಅನಿಲದ ಹಣ, ಫ್ಲೆಕ್ಸಿಫಂಡ್, ಇಂಡೆಂಟ್, ಇಕ್ರಿಮೆಂಟ್ ನೀಡುವುದರಲ್ಲಿ ವಿಳಂಬ ಮಾಡಲಾಗುತ್ತದೆ. ಮೊಟ್ಟೆ ಹಣ, ಬಾಡಿಗೆ, ಗ್ಯಾಸ್, ಆರು ತಿಂಗಳಾದರೂ ಬಿಡುಗಡೆ ಮಾಡುವುದಿಲ್ಲ. ಕಾರ್ಯಕರ್ತೆಯರು ಅಮ್ಮ ಹಣದಿಂದ ಭರಿಸುವ ಸ್ಥಿತಿ ಇದೆ. ಅಲ್ಲದೇ ಗೌರವಧನ ಎಂದೂ ತಿಂಗಳ 10 ನೇ ತಾರೀಖು ಒಳಗೆ ಸಿಗುವುದೇ ಇಲ್ಲ. 3 ತಿಂಗಳಾದರೂ ಬಿಡುಗಡೆ ಮಾಡುವುದಿಲ್ಲ. ಎಎಪಿ ಸಭೆಯಲ್ಲಿ ಅನುಮೋದನೆ ಸಿಕ್ಕಿಲ್ಲ ಎಂಬ ನೆಪಗಳೇ ಇರುತ್ತದೆ. ಯಾವುದೇ ಕಾರಣ ಇಲ್ಲದೇ ತಿಂಗಳಿಗೆ ಸರಿಯಾಗಿ ಮುಂಗಡ ಆಗಬೇಕು, ಸಂಬಳ ನೀಡಬೇಕು. ನಿವೃತ್ತಿ ಆದವರಿಗೆ ತಕ್ಷಣ ಇಡುಗಂಟು ಹಣ ಬಿಡುಗಡೆ ಮಾಡಬೇಕು. ವರ್ಷಾನುಗಟ್ಟಲೇ ಬಾಕಿ ಉಳಿಸಿಕೊಳ್ಳಬಾರದು.

ಕೆಲಸದ ಒತ್ತಡ:

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಂದ ಸಮಗ್ರ ಶಿಶು ಅಭಿವೃದ್ಧಿ (ICDS) ಯೋಜನೆಗೆ ಸಂಬಂಧಪಡದ ಇತರೆ ಇಲಾಖೆಗಳ ಕೆಲಸಗಳನ್ನೂ ಮಾಡಿಸಲಾಗುತ್ತದೆ. ಸರ್ಕಾರ ಇವರ ಮೇಲೆ ಹಲವು ರೀತಿಯ ಕೆಲಸದ ಒತ್ತಡ ಹೇರುತ್ತಿದೆ. ಇದರಿಂದ ಯೋಜನೆಯ ಮೂಲ ಕೆಲಸಕ್ಕೆ ದಕ್ಕೆ ಆಗುತ್ತಿದೆ. ಮೂಲ ಕೆಲಸ ಬಿಟ್ಟು ಯೋಜನೇತರ ಕೆಲಸಗಳಾದ ವಿವಿಧ ಬಗೆಯ ಸರ್ವೆ ಮಾಡಲು, ಸ್ತ್ರಿ ಶಕ್ತಿ, ಮಾತೃವಂದನಾ, ಭಾಗ್ಯಲಕ್ಷ್ಮಿ ಇಂತಹ ಯೋಜನೆಗಳ ಜಾರಿಗಾಗಿ, ಚುನಾವಣೆ ಸಂದರ್ಭದಲ್ಲಿ ಬೂತ್ ಮಟ್ಟದ ಕೆಲಸ ಮತ್ತು ಸಾರ್ವಜನಿಕ ಹಬ್ಬಗಳು, ಕಾರ್ಯಕ್ರಮಗಳಲ್ಲಿ ತೊಡಗಿಸುವುದು, ಕಾರ್ಯಕ್ರಮಗಳಿಗೆ ಕುಂಭ, ಕಲಶಗಳನ್ನ ಹೊರಿಸುವ ಕಾರ್ಯಕ್ರಮಗಳಿಗೆ ಅಂಗನವಾಡಿ ಕಾರ್‍ಯಕರ್ತೆಯರನ್ನು ಬಳಸಿಕೊಳ್ಳುವುದು ನಡೆಯುತ್ತಿದೆ. ಮಹಿಳೆಯರು ಎಂದು ಪರಿಗಣಿಸದೇ ಇಂತಹ ಕೆಲಸಗಳಿಗೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದು ನಿಲ್ಲಬೇಕು. ಐಸಿಡಿಎಸ್ ಗೆ ಸಂಬಂಧಿಸಿದ ಕೆಲಸಗಳಿಗೆ ಮಾತ್ರ ಕಾರ್ಯಕರ್ತೆಯರ ಬಳಕೆಯಾಗಬೇಕು.

ಮಕ್ಕಳ ಹಾಜರಾತಿಯನ್ನು ದಾಖಲು ಮಾಡಲು ದಿನವೂ ಬರೆದಿಡಬೇಕು ಎಂಬುದೇನೋ ಸರಿ. ಇದನ್ನು ಮೊಬೈಲ್ ನಲ್ಲಿ ಮೂರು ಬಾರಿ ಮತ್ತು ಪುಸ್ತಕದಲ್ಲಿ ಎರಡು ಬಾರಿ ಬರೆಯುವ ಅವಶ್ಯಕತೆ ಏನಿದೆ? ಇದರಿಂದ ಬರೆಯುವ ಕೆಲಸಕ್ಕೆ ಸಮಯ ವ್ಯರ್ಥವಾಗುತ್ತದಷ್ಟೆ. ಮೊಬೈಲ್ ಅಥವಾ ಪುಸ್ತಕ ಯಾವುದಾದರೂ ಒಂದರಲ್ಲಿ ಹಾಜರಾತಿ ಬರೆಯುವಂತಾಗಬೇಕು. ಮೊಬೈಲ್ ನಲ್ಲಿ ಬರೆಯುವುದಾದರೆ ಉತ್ತಮ ಗುಣಮಟ್ಟದ ಮೊಬೈಲ್ ಅವಶ್ಯಕತೆ ಇದೆಯಲ್ಲವೇ? ಕಡಿಮೆ ವೇತನ ಪಡೆಯುತ್ತಿರುವ ಅಂಗನವಾಡಿ ನೌಕರರಿಗೆ ಗುಣಮಟ್ಟದ ಮೊಬೈಲ್ ಖರೀದಿಸಲು ಸಾಧ್ಯವಿಲ್ಲ. ಇದನ್ನು ಸರ್ಕಾರವೇ ಖರೀದಿಮಾಡಿ ನೌಕರರಿಗೆ ಕೊಡಬೇಕು. ಜೊತೆಗೆ ಪುಸ್ತಕದಲ್ಲಿ 42 ದಾಖಲೆ ಬರೆಯಬೇಕಾಗಿದೆ. ಇದನ್ನೂ ಕಡಿಮೆ ಮಾಡಬೇಕು. ಮುಖ್ಯ ದಾಖಲೆ ಪುಸ್ತಕಗಳನ್ನು ಸರ್ಕಾರವೇ ಒದಗಿಸಬೇಕು.

ಅಂಗನವಾಡಿ ಕೇಂದ್ರದ ವೇಳಾಪಟ್ಟಿ ಬದಲಾಗಬೇಕು:

ಬೆಳಗ್ಗೆ 9.30 ಗಂಟೆಯಿಂದ 1.30 ಗಂಟೆಯ ತನಕ ಪೂರ್ವ ಪ್ರಾಥಮಿಕ ಶಾಲಾ ಪೂರ್ವ ಶಿಕ್ಷಣ ನೀಡಲು ಸಮಯ ನಿಗಧಿ ಮಾಡಬೇಕು. ಆ ಸಮಯದಲ್ಲಿ ಸಾರ್ವಜನಿಕರು ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಲು ಅವಕಾಶವಿಲ್ಲ ಎಂಬುದನ್ನು ಖಚಿತ ಪಡಿಸಬೇಕು. ಇಲ್ಲದಿದ್ದರೆ ಬೆಳಗ್ಗೆಯೇ ಇತರೆ ಕೆಲಸಗಳಿಗೆ ಸಾರ್ವಜನಿಕರು ಕೇಂದ್ರಕ್ಕೆ ಬಂದರೆ ಕಾರ್ಯಕರ್ತೆ ಪಾಠ ಮಾಡುವ ಏಕಾಗ್ರತೆಗೆ ತೊಂದರೆ ಆಗುತ್ತದೆ.

'ಹೊಸದಾಗಿ ತೆರೆಯುತ್ತಿರುವ 4,204 ಅಂಗನವಾಡಿ ಕೇಂದ್ರಗಳು:

ಕಳೆದ ಬಜೆಟ್‌ನಲ್ಲಿ ಘೋಷಣೆ ಆದಂತೆ ರಾಜ್ಯ ಸರ್ಕಾರ ಹೆಚ್ಚುವರಿಯಾಗಿ ತೆರೆಯಲಿರುವ 4,204 ಅಂಗನವಾಡಿ ಕೇಂದ್ರಗಳನ್ನು ಈಗಾಗಲೇ ಇರುವ 3,331 ಮಿನಿ ಅಂಗನವಾಡಿ ಕೇಂದ್ರಗಳನ್ನು ಪೂರ್ಣ ಕೇಂದ್ರಗಳಾಗಿ ಪರಿವರ್ತಿಸಬೇಕು. ಒಬ್ಬರ ಮೇಲೆಯೇ ಕಾರ್ಯಕರ್ತೆ, ಸಹಾಯಕಿ ಎರಡು ಕೆಲಸದ ಹೊರೆ ನಿಲ್ಲಬೇಕು.

ಮಿನಿ ಹಾಗೂ ಸಹಾಯಕಿ ಮುಂಬಡ್ತಿ ನೀಡುವ ಆದೇಶ ಮುಂದುವರೆಸುವುದು:

ಎಸ್.ಎಸ್.ಎಲ್.ಸಿ ಪಾಸಾದ ಮಿನಿ ಕಾರ್ಯಕರ್ತೆ ಹಾಗೂ ಸಹಾಯಕಿಯರು 3

ಪುಟ 7 ಕ್ಕೆ

ಫೆಬ್ರವರಿ 27 ರಿಂದ ಮಾರ್ಚ್ 27ರ ವರೆಗೆ ಬೀಡಿ ಕಾರ್ಮಿಕರ ಹಕ್ಕೊತ್ತಾಯ ಮಾಸಾಚರಣೆಗೆ ಕರೆ

2022ರ ಡಿಸೆಂಬರ್ 28, 29 ಎರಡು ದಿನ ಕೇರಳದ ಕಣ್ಣೂರಿನಲ್ಲಿ ನಡೆದ ಬೀಡಿ ಕಾರ್ಮಿಕರ ಎಂಟನೇ ರಾಷ್ಟ್ರೀಯ ಸಮ್ಮೇಳನವು ಫೆಬ್ರವರಿ 27 ರಿಂದ ಮಾರ್ಚ್ 27ರ ವರೆಗೆ ಒಂದು ತಿಂಗಳ ಕಾಲ ದೇಶಾದ್ಯಂತ 'ಬೀಡಿ ಕಾರ್ಮಿಕರ ಹಕ್ಕೊತ್ತಾಯ ಮಾಸಾಚರಣೆ'ಗೆ ಕರೆ ನೀಡಿದೆ.

ಬೀಡಿ ಕಾರ್ಮಿಕರಿಗೆ ರಾಷ್ಟ್ರೀಯ ಸಮಾನ ಕನಿಷ್ಟ ಕೂಲಿ 1000 ಬೀಡಿಗೆ 395 ರೂಪಾಯಿ, ಅಂಕ ಒಂದಕ್ಕೆ 5 ಪೈಸೆ ತುಟ್ಟಿ ಭತ್ಯೆ, ಸುಪ್ರೀಂ ಕೋರ್ಟಿನ ತೀರ್ಪಿನಂತೆ ಶೇ. 25 ಹೆಚ್ಚುವರಿ ಮೊತ್ತ ಒಳಗೊಂಡು ಕನಿಷ್ಟ ಕೂಲಿ ನಿಗಧಿ ಮಾಡಬೇಕು. ಬೀಡಿ ಕಾರ್ಮಿಕರ ನ್ಯೆಜ ಬೇಡಿಕೆಗಳಿಗೆ ಸರ್ಕಾರ ಸ್ಪಂಧಿಸಿ ಪರಿಹಾರ ಕಾಣಬೇಕು. ಪರ್ಯಾಯ ಉದ್ಯೋಗಕ್ಕೆ ಯೋಜನೆ ರೂಪಿಸಬೇಕು. ಕಾನೂನುಬಾಹಿರ ಬೀಡಿ ಉತ್ಪಾದನೆಯನ್ನು ನಿಲ್ಲಿಸಿ ಕಾರ್ಮಿಕರ ಕಾನೂನುಗಳ ಜಾರಿಗೆ ಕಠಿಣ ಕ್ರಮ ವಹಿಸಬೇಕು. ಎಲ್ಲಾ ಬೀಡಿ ಕಾರ್ಮಿಕರಿಗೆ ಗುರುತಿನ ಚೀಟಿ, ಲಾಗ್ ಪುಸ್ತಕ, ಬೋನಸ್, ಪಿ.ಎಫ್ ಸಿಗುವಂತೆ ಮಾಡಬೇಕು. ಗುತ್ತಿಗೆ ಪದ್ದತಿ ರದ್ದುಮಾಡಬೇಕು. ಬೀಡಿ ಕಾರ್ಮಿಕರ ಆರೋಗ್ಯದ ವಿಷಯದಲ್ಲಿ ಸರ್ಕಾರ ಜವಾದ್ದಾರಿ ವಹಿಸಿಕೊಳ್ಳಬೇಕು, ಇನ್ನಿತರೆ ಬೇಡಿಕೆಗಳ ಅಧಾರದಲ್ಲಿ ಅಖಿಲ ಭಾರತ ಬೀಡಿ ಕಾರ್ಮಿಕರ ಫೇಡರೆಷನ್ ಸಿಐಟಿಯು ಈ ಕರೆ ನೀಡಿದೆ. ಇದರ ಭಾಗವಾಗಿ ವ್ಯಾಪಕವಾಗಿ ಮನೆ ಮನೆ ಪ್ರಚಾರ ನಡೆಸಬೇಕು. ತಳ ಮಟ್ಟದ ಪ್ರಚಾರ ಸಭೆಗಳು, ಜಾಥ ನಡೆಸಿ ಸರ್ಕಾರದ ಮೇಲೆ ಒತ್ತಡ ಉಂಟುಮಾಡಲು ಮಾರ್ಚ 27, 2023 ರಂದು ತಾಲ್ಲುಕು/ಜಿಲ್ಲಾ ಕೇಂದ್ರಗಳಲ್ಲಿ ಬೀಡಿ ಕಾರ್ಮಿಕರ ಪ್ರತಿಭಟನೆ ನಡೆಸಲು ಕರೆ ನೀಡಿದೆ.



ಸಂಕಷ್ಟಕ್ಕೆ ಸಿಲುಕಿರುವ ಬೀಡಿ ಕಾರ್ಮಿಕರು:

ಸರ್ಕಾರದ ನೀತಿಗಳಿಂದಾಗಿ ಸಮಸ್ಯೆಗೆ ಒಳಗಾಗಿರುವ ಬೀಡಿ ಉದ್ಯಮ ಮತ್ತು ಇದರಿಂದಾಗಿ ಸಂಕಷ್ಟಕ್ಕೆ ಸಿಲುಕಿರುವ ಬೀಡಿ ಕಾರ್ಮಿಕರ ಬದುಕಿನ ಬಗ್ಗೆ, ಇದಕ್ಕೆ ಪರ್ಯಾಯ ಏನು ಎಂಬುದರ ಕರಿತು ಸಮ್ಮೇಳನದಲ್ಲಿ ವಿವರವಾದ ಚರ್ಚೆಯನ್ನು ನಡೆಸಲಾಯಿತು. ಶತಮಾನ ಕಾಲ ಹಳೆಯದಾದ ಬೀಡಿ ಉದ್ಯಮವು ಸರಿಸುಮಾರು 80 ಲಕ್ಷ ಜನರಿಗೆ ನೇರ ಉದ್ಯೋಗ ಮತ್ತು ಸರಿ ಸುಮಾರು 3 ಕೋಟಿ ಜನರಿಗೆ ಅನ್ನದ ದಾರಿಯಾಗಿತ್ತು. ಸರ್ಕಾರದ ನೀತಿಗಳಿಂದಾಗಿ ಮತ್ತು ಜನತೆಯಲ್ಲಿ ಬೆಳೆಯುತ್ತಿರುವ ಆರೋಗ್ಯ ಕಾಳಜಿಗಳ ಪರಿಣಾಮವಾಗಿ ಬೀಡಿ ಉದ್ಯಮ ತೀವ್ರ ಸಮಸ್ಯೆಗಳಲ್ಲಿ ಸಿಲುಕಿದೆ. ಒಂದೆಡೆ ಬೀಡಿ ಕಾರ್ಮಿಕರಿಗೆ ಹತ್ತಾರು ವರ್ಷಗಳಿಂದ ಇದ್ದ ಕಲ್ಯಾಣ ಸೌಲಭ್ಯಗಳನ್ನು ಸರ್ಕಾರ ಕಿತ್ತೆಸೆಯುತ್ತಿದೆ. ಇದ್ದ ಕಾನೂನು ರಕ್ಷಣೆಯು ಇಲ್ಲದಂತಾಗುತ್ತಿದೆ. ಹೋರಾಟಗಳ ಫಲವಾಗಿ ರೂಪಿಸಲಾಗಿದ್ದ "ಬೀಡಿ ಮತ್ತು ಸೀಗಾರ್ ಕಾರ್ಮಿಕರ ಸೇವಾ ಷರತ್ತುಗಳ ಕಾಯಿದೆ–1966" ಸಂಹಿತೆಗಳ ಹೆಸರಲ್ಲಿ ಇಲ್ಲದಂತೆ ಮಾಡಲಾಗುತ್ತಿದೆ.

"ಬೀಡಿ ಕಾರ್ಮಿಕರ ಕಲ್ಯಾಣ ಕಾಯಿದೆ–1976, "ಬೀಡಿ ಕಾರ್ಮಿಕರ ಸೆಸ್ ಕಾಯಿದೆ–1970" ಗಳನ್ನು ಸಹ ಸಂಹಿತೆಯ ಹೆಸರಲ್ಲಿ ಇಲ್ಲದಂತೆ ಮಾಡಲಾಗಿದೆ, ಬೀಡಿ ಕಾರ್ಮಿಕರಿಗೆ ಮತ್ತು ಅವಲಂಬಿತರಿಗೆ ಇದ್ದ ಹಲವು ಸೌಲಭ್ಯಗಳಿಗೆ ಅಗತ್ಯ ಹಣಕಾಸು ಲಭ್ಯತೆ ಇಲ್ಲದೆ ನಿಲ್ಲಿಸಲಾಗುತ್ತಿದೆ. ಅದರೆ ಸರ್ಕಾರ ಮಾತ್ರ ಬೀಡಿ ಕಚ್ಚಾ ವಸ್ತುಗಳಾದ ಬೀಡಿ ಎಲೆ, ತಂಬಾಕು ಇವುಗಳ ಮೇಲೆ ಪ್ರತ್ಯೇಕ ಪ್ರತ್ಯೇಕವಾಗಿ ಜಿ.ಎಸ್.ಟಿಯನ್ನು ಗರಿಷ್ಟ ಪ್ರಮಾಣದಲಿ ವಿಧಿಸಿ, ತನ್ನ ಖಜಾನೆ ಭರ್ತಿ ಮಾಡುತ್ತಿದೆ. ಬೀಡಿ ಕೈಗಾರಿಕೆಯಿಂದ ತಮ್ಮ ತುತ್ತಿನ ಚೀಲ ತುಂಬವ ಕೋಟಿ ಜನರಿಗೆ ಕೆಲಸ ಇಲ್ಲದೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಜನರ ದುಡಿಮೆಯಿಂದ ಹತ್ತಾರು ವರ್ಷಗಳಿಂದ ಸಾವಿರಾರು ಕೋಟಿ ತೆರಿಗೆ ಪಡೆದ ಸರ್ಕಾರ ಬಡ ಬೀಡಿ ಕಾರ್ಮಿಕರಿಗೆ ಪರ್ಯಾಯ



ರೂಪಿಸಬೇಕಾದ ಹೊಣೆಗಾರಿಕೆಯೂ ಇದೆ. ಎಂದು ಸಮ್ಮೇಳನ ಹೇಳಿದೆ.

ನಿರುದ್ಯೋಗಿಗಳಾಗುತ್ತಿರುವ ಬೀಡಿ ಕಾರ್ಮಿಕರು:

ಕೇರಳ ರಾಜ್ಯದ ಬೀಡಿ ಕಾರ್ಮಿಕರ ಚಳುವಳಿಯ ತವರು ಜಿಲ್ಲೆಯಾದ ಕಣ್ಣೂರಿನಲ್ಲಿ ನಡೆದ ಸಮ್ಮೇಳನದಲ್ಲಿ ಕರಡು ವರದಿಯನ್ನು ಮಂಡಿಸಿ ಮಾತನಾಡಿದ ಸಂಘದ ಪ್ರಧಾನ ಕಾರ್ಯಧರ್ಶಿ ಕಾಂ. ದೇಬಶಿಶ್ ರಾಯ್ ಅವರು 'ದೇಶದಲ್ಲಿ ಬೀಡಿ ಕೈಗಾರಿಕೆಯಲ್ಲಿನ ಇಂದಿನ ಸಮಸ್ಯೆಗಳಿಗೆ ಸರ್ಕಾರದ ನೀತಿಗಳು ಪ್ರಮುಖ ಕಾರಣವಾಗಿವೆ. ಅದರೆ ಬೀಡಿ ಉದ್ಯೋಗವನ್ನು ಅವಲಂಬಿಸಿರುವ ಕಾರ್ಮಿಕರಿಗೆ ಸರ್ಕಾರ ಪರ್ಯಾಯ ನೀಡಲಿಲ್ಲ. ಈ ಪರಿಸ್ಥಿತಿಯ ಲಾಭ ಪಡೆದು ಬೀಡಿ ಮಾಲೀಕರು ಮತ್ತು ಮಧ್ಯವರ್ತಿಗಳು ಕಾರ್ಮಿಕರನ್ನು ಶೋಷಣೆ ಮಾಡುತ್ತಿದ್ದಾರೆ. ಬೀಡಿ ಬಳಕೆ ಇಳಿಕೆಯಾಗಿದೆ, ತಂಬಾಕು ಬಳಕೆಗೆ ಸರ್ಕಾರದಿಂದ ನಿಷೇದವಿದೆ ಇತ್ಯಾದಿಗಳ ಬಗ್ಗೆ ಹೇಳಲಾಗುತ್ತಿದೆ. ಅದರೆ ಬೀಡಿ ಮಾಲೀಕರು ಮತ್ತು ಮಧ್ಯವರ್ತಿಗಳು ತಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಮತ್ತೊಂದೆಡೆ ಬೀಡಿ ಕಾರ್ಮಿಕರು ಬಡವರಾಗಿದ್ದಾರೆ. ನಿರುದ್ಯೋಗಿಗಳಾಗುತ್ತಿದ್ದಾರೆ' ಎಂದು ಹೇಳಿದರು. ಬಹುಸಂಖ್ಯಾತ ಬೀಡಿ ಕಾರ್ಮಿಕರಿಗೆ ಕಾನೂನುಬದ್ಧವಾದ ಸೌಲಭ್ಯಗಳು, ಭವಿಷ್ಯನಿಧಿ, ಗುರುತಿನ ಚೀಟಿ ನೀಡದೆ ವಂಚಿಸಲಾಗುತ್ತಿದೆ. ಸರ್ಕಾರಗಳು ಯಾವುದೇ ಕ್ರಮವಹಿಸಿದೆ ಇರುವುದನ್ನು ಅವರು ಕಟುವಾಗಿ ಖಂಡಿಸಿದರು. ದೇಶದ 237 ಬೀಡಿ ಕಾರ್ಮಿಕರ ಚಿಕಿತ್ಸಾಲಯಗಳನ್ನು ಇ.ಎಸ್.ಐ ಗೆ ವರ್ಗಾಯಿಸುವ ಪ್ರಕ್ರಿಯೆ ನಡೆಯುತ್ತಿದೆ ಎಂಬ ಮಾಹಿತಿಯನ್ನು ಅವರು ನೀಡಿದರು.

ಪಶ್ಚಿಮ ಬಂಗಾಳ, ತ್ರಿಪುರ, ಮಧ್ಯಪದೇಶ, ಕರ್ನಾಟಕ, ಕೇರಳ, ತಮಿಳುನಾಡು, ಅಂಧ್ರಪ್ರದೇಶ, ತೆಲಂಗಾಣ, ಛತ್ತಿಸ್‌ಘಡ, ಮಹಾರಾಷ್ಟ, ರಾಜಸ್ಥಾನ, ಬಿಹಾರ, ಒರಿಸ್ಸಾ ರಾಜ್ಯಗಳ ಬೀಡಿ ಕಾರ್ಮಿಕರ ಚಳುವಳಿಗಳ 267 ಪ್ರತಿನಿಧಿಗಳು ಈ ಎರಡು ದಿನಗಳ ಸಮ್ಮೆಳನದಲ್ಲಿ ಭಾಗಿಯಾಗಿದ್ದರು.

ಬೀಡಿ ಕಾರ್ಮಿಕರ ಫೇಡರೆಷನ್ ರಾಷ್ಟ್ರೀಯ ಅಧ್ಯಕ್ಷರಾದ ಸಂಗಾತಿ ಸಹದೇವನ್ ಧ್ವಜಾರೊಹಣ ಮಾಡಿದರು. ನಂತರ ಸಮ್ಮೇಳನದ ಸಭಾಂಗಣಕ್ಕೆ ಮೆರವಣಿಗೆಯಲ್ಲಿ ತೆರಳಿ ಹುತಾತ್ಮ ಸಂಗಾತಿಗಳಿಗೆ ಶ್ರದ್ಧಾಂಜಲಿ ಮತ್ತು ಗೌರವಾರ್ಪಣೆ ಸಲ್ಲಿಸಲಾಯಿತು. ಸಿಐಟಿಯು ರಾಷ್ಟ್ರೀಯ ಹಿರಿಯ ಉಪಾಧ್ಯಕ್ಷರಾದ ಸಂಗಾತಿ. ಎ.ಕೆ. ಪದ್ಮನಾಭನ್ ಅವರು ಸಮ್ಮೇಳನವನ್ನು ಉಧ್ಘಾಟಿಸಿ ಮಾತನಾಡುತ್ತ, ಬೀಡಿ ಕಾರ್ಮಿಕರಿಗೆ ಪರ್ಯಾಯ ಉದ್ಯೋಗ, ಪರಿಹಾರ ನಿಡಲು ಕಾರ್ಯಕ್ರಮ ರೂಪಿಸಿಬೆಕಾದ ಸರ್ಕಾರದ ನಿರ್ಲಕ್ಷತನವನ್ನು ತೀವ್ರವಾಗಿ ತರಾಟೆಗೆ ತೆಗೆದು ಕೊಂಡರು.

ಉಧ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಂ; ಸಹದೇವನ್ ಅವರು ಮಾತನಾಡಿ, 29 ವರ್ಷಗಳ ಹಿಂದೆ ಕಣ್ಣೂರಿನಲ್ಲಿ ನಡೆದ ಅಖಿಲ ಭಾರತ ಬೀಡಿ ವರ್ಕರ್ಸ್ ಫೆಡರ್ೇಶನ್ ತನ್ನ ಮೊದಲ ಸಮ್ಮೇಳನವನ್ನು ನಡೆಸಿದ್ದನ್ನು ಸ್ಮರಿಸಿದರು. ದೇಶದ ಜಾತ್ಯತೀತತೆಯ ಪರಂಪರೆಯನ್ನು ಪ್ರಶ್ನಿಸಲಾಗುತ್ತಿದೆ. ಜನತೆ ಧರ್ಮ, ಜಾತಿ, ಭಾಷೆ, ಉಡುಗೆ–ತೊಡುಗೆ, ಆಹಾರದ ಹೆಸರಲ್ಲಿ ಜನತೆಯನ್ನು ವಿಭಜಿಸುತ್ತಿರುವ ಕೇಂದ್ರ ಸರ್ಕಾರದ ಧೋರಣೆಗಳನ್ನು ಜನತೆ ಹಿಮ್ಮೆಟ್ಟಿಸಲು ಕರೆ ನೀಡಿದರು. ಕೇರಳದ ಕಮ್ಯುನಿಸ್ಟ್ ನೇತೃತ್ವದ ಎಡರಂಗ ಸರ್ಕಾರವು ಪರ್ಯಾಯ ನೀತಿಗಳೊಂದಿಗೆ ಬೀಡಿ ಕಾರ್ಮಿಕರು ಸೇರಿದಂತೆ 60 ಲಕ್ಷ ಕಾರ್ಮಿಕರಿಗೆ ಮಾಸಿಕ 1,600 ರೂ ಪಿಂಚಣಿ ನೀಡುತ್ತಿದೆ. ವಸತಿ ಇಲ್ಲದ ಕುಟುಂಬಗಳಿಗೆ ಮನೆ ನಿರ್ಮಿಸಿ ಕೊಡಲಾಗುತ್ತಿದೆ ಎಂದರು.

ಪ್ರತಿನಿಧಿ ಆಧಿವೇಶನವನ್ನು ಕಾಂ. ಸಿ.ಕಣ್ಣನ್ ಮಂಚ್ ನಲ್ಲಿ ಸಿಐಟಿಯು ರಾಷ್ಟ್ರೀಯ ಅಧ್ಯಕ್ಷರಾದ ಡಾ. ಕೆ. ಹೇಮಲತ ಅವರು ಉಧ್ಘಾಟಿಸಿ ಮಾತನಾಡಿದರು. ಬೀಡಿ ಉದ್ಯಮದಲ್ಲಿ ಬಹುಸಂಖ್ಯಾತರು ಮಹಿಳಾ ಕಾರ್ಮಿಕರು. ಅವರಲ್ಲಿಯೂ ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರು ಇದ್ದಾರೆ. ಈ ಕಾರ್ಮಿಕರು ಸಂಕಷ್ಟದ ಬದಕು ಸಾಗಿಸುವಂತಾಗಿದೆ. ಸರ್ಕಾರ ಬೀಡಿ ಕಾರ್ಮಿಕರ ಹಕ್ಕೋತ್ತಾಯಗಳನ್ನು ಪರಿಗಣಿಸುವಂತೆ ಮಾಡಲು ಒತ್ತಡ ಹೆಚ್ಚಿಸುವ ಚಳುವಳಿಗಳು ಮತ್ತಷ್ಟು ಪ್ರಬಲಗೊಳಿಸುವುದೊಂದೆ ಬೀಡಿ ಕಾರ್ಮಿಕರಿಗೆ ಇರುವ ದಾರಿ ಎಂದರು. ಬೀಡಿ ಕಾರ್ಮಿಕರು ಇತರೆ ಕಾರ್ಮಿಕರ ಪರಿಸ್ಥಿತಿ ಸಂಕಟಗಳ ಸರಮಾಲೆಯಿಂದ ಕೂಡಿದೆ. ಎಲ್ಲಾ ಕಾರ್ಮಿಕರ ಸಂಕಷ್ಟಗಳಿಗೆ ಸರ್ಕಾರ ಪುಟ 12 ಕ್ಕೆ

ಬೀಡಿ ಕಾರ್ಮಿಕರಿಗಾಗಿ ಜೀವ ತೇದ ಕಾಮ್ರೇಡ್ ಸಿ.ಕಣ್ಣನ್

ಅವರದು ನಿಸ್ವಾರ್ಥವಾದ ತ್ಯಾಗಮಯ ಜೀವನ. ಅವರು ಎಂದಿಗೂ ಅವರಿಗಾಗಿ ಬದುಕಿದವರಲ್ಲ. ಬೇರೆಯವರಿಗಾಗಿಯೇ ಬದುಕಿದವರು. ಅವರು ಅತ್ಯಂತ ನಿಕೃಷ್ಟ ಜೀವನ ನಡೆಸುತ್ತಿದ್ದ ಬಡ ಬೀಡಿ ಕಾರ್ಮಿಕರಿಗಾಗಿಯೇ ಜೀವ ತೇದವರು. ಬೀಡಿಯಿಂದಲೇ ಬದುಕು ಸಾಗಿಸುತ್ತಿರುವ ದೇಶದ ಹನ್ನೆರಡು ರಾಜ್ಯಗಳಿಂದ ಬಂದ ಪ್ರತಿನಿಧಿಗಳಿಗೆ ಅಧಿವೇಶನ ಸೇರಲು ಸ್ಥಳಾವಕಾಶ ಒದಗಿಸಿಕೊಟ್ಟ ಆ ಸುಂದರವಾದ ಸಭಾಂಗಣವೇ ಸಿ. ಕಣ್ಣನ್ ರವರ ನೆನಪಿಗಾಗಿ ಬೀಡಿ ಕಾರ್ಮಿಕರೇ ಕಟ್ಟಿಸಿರುವ ಭವನ. ಅದರಲ್ಲಿ ಬೀಡಿ ಮಜೂರರ ತ್ಯಾಗದ ಮುದ್ರೆಯಿದೆ. ಅವರೆಲ್ಲರ ಅಪಾರ ಶ್ರಮವಿದೆ.

"ತಮ್ಮ ದುಡಿಮೆಯ ಪಾಲನ್ನು ಉಳಿಸಿ ತಮಗಾಗಿ ತೇದುಹೋದ ಸಂಗಾತಿ ಸಿ.ಕಣ್ಣನ್ ರವರನ್ನು ಸದಾ ನೆನಪಿಸಿ ಕೊಳ್ಳಲು ತಮ್ಮದೇ ಶ್ರಮದ ಭವನವೊಂದನ್ನು ತಾವೇ ನಿರ್ಮಿಸುತ್ತೇವೆ" ಎಂದು ಶಪಥದಂತೆ ಶ್ರಮಿಸಿದ ಕೇರಳ ರಾಜ್ಯದ ಬೀಡಿ ಕಾರ್ಮಿಕರ ಭವ್ಯಕನಸಿನ ಭವನದ ಸಾಕಾರದ ಬಗ್ಗೆ ಹೇಳಿದವರು ಡಾ॥ ಕೆ. ಹೇಮಲತಾ ಅವರು.

2022 ಡಿಸೆಂಬರ್ 28–29ರಂದು ಕಣ್ಣೂರಿನಲ್ಲಿ ಸೇರಿದ ಬೀಡಿ ಕಾರ್ಮಿಕರ ಅಖಿಲ ಭಾರತ ಎಂಟನೇ ಸಮ್ಮೇಳನವನ್ನು ಸಮಾರೋಪಣ ಗೊಳಿಸುತ್ತಾ ಮಾತನಾಡಿದಾಗ "ಸಿ. ಕಣ್ಣನ್ ಸ್ಮಾರಕ ಭವನ" ದ ಮಹತ್ವವನ್ನು ವಿವರಿಸಿದರು.

ಹೌದು...ಅದು ಕಾಮ್ರೇಡ್ ಸಿ. ಕಣ್ಣನ್ ರವರ ನೆನಪಿಗಾಗಿ ಕಣ್ಣೂರಿನಲ್ಲೇ ಕಟ್ಟಿಸಿದ ಸುಂದರವಾದ ಭವನವಾಗಿತ್ತು. ಅವರ ಭಾವ ಚಿತ್ರದೊಂದಿಗೆ "ಸಿ. ಕಣ್ಣನ್ ಸ್ಮಾರಕ ಭವನ" ಎಂಬುದಾಗಿ ಮಲಯಾಳಿ ಅಕ್ಷರಗಳಲ್ಲಿ ಕೆತ್ತಲ್ಪಟ್ಟ ಬರಹಗಳು ಅವರನ್ನು ಸದಾ ಸ್ಮರಿಸುವಂತೆ ಮಾಡಿದೆ.

1934ರಲ್ಲಿ ಕೇರಳದ ಕಣ್ಣೂರು ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಬೀಡಿ ಕಾರ್ಮಿಕರನ್ನು ಪ್ರಥಮಬಾರಿಗೆ ಸಂಘಟಿಸಿ ಮುನ್ನಡೆಸಿದವರು ಸಂಗಾತಿ ಸಿ.ಕಣ್ಣನ್ ಅವರು. ತಾನೋರ್ವ ಬೀಡಿ ಮಜೂರನಾಗಿದ್ದು ಕಾರ್ಮಿಕರ ಭವಣೆಯನ್ನು ಆಳವಾಗಿ ಅರಿತವರಾಗಿದ್ದರು. ಯಾವತ್ತು ಸಂಘಟನೆಯನ್ನು ಆರಂಭಿಸಿದ್ದರೋ ಆವತ್ತಿನಿಂದ ತನ್ನ ಜೀವಿತದ ಕೊನೆಯವರೆಗೂ ಬೀಡಿ ಕಾರ್ಮಿಕರ ಏಳಿಗೆಗಾಗಿಯೇ ಶ್ರಮಿಸಿದವರು. ಬೀಡಿ ಫೆಡರೇಶನ್ ಅಧ್ಯಕ್ಷರಾಗಿ ರಾಜ್ಯಾದ್ಯಂತ ಸಂಘಟನೆಯನ್ನು ವಿಸ್ತರಿಸಿದ್ದಾರೆ.

ಕಣ್ಣನ್ ಎಂದರೆ ನಮ್ಮೆರಡು ಕಣ್ಣುಗಳಿದ್ದಂತೆ. ಅವನ್ನು ರಕ್ಷಿಸುವ ಜವಾಬ್ದಾರಿ ನಮ್ಮ ಮೇಲಿದೆಯೆಂದು ಸ್ವತಃ ಬೀಡಿ ಕಾರ್ಮಿಕರೇ ಅಭಿಮಾನಿಸಿದವರು. ಅವರಿಗೆ ತಮ್ಮ ಹೃದಯಗಳಲ್ಲೇ ಸಂಗಾತಿ ಪ್ರೀತಿಯ ನೆಲೆ ಒದಗಿಸಿ ಕೊಟ್ಟಂತಹ ಕಾರ್ಮಿಕರು? ಅವರ ಸ್ಮಾರಕವಾಗಿ ಕಟ್ಟಿಸಿದ ಈ ಕಟ್ಟಡವನ್ನು ಸಿಐಟಿಯು ಸಂಘಟನೆಗೆ ಹಸ್ತಾಂತರಿಸಿದ್ದಾರೆ.

ಕಮ್ಯೂನಿಸ್ಟ್ ಪಕ್ಷವು ಇಬ್ಭಾಗವಾಗಿ ಕೆಲ ವರ್ಷ ಬೀಡಿ ಸಂಘಟನೆಯು ಅತಂತ್ರ ಸ್ಥಿತಿಯಲ್ಲಿದ್ದ ಸಂದರ್ಭದಲ್ಲಿ ಮಂಗಳೂರಿಗೆ ಬಂದು ಇಲ್ಲಿನ ಬೀಡಿ ಕಾರ್ಮಿಕ ಸಂಘಟಕರಾಗಿದ್ದ ಸಂಗಾತಿ ಯು.ಬಿ. ಲೋಕಯ್ಯರನ್ನು ಭೇಟಿಯಾಗಿ ಹೇಳಿದ ಮಾತುಗಳು? ಕಣ್ಣನ್ ರವರ ಅಂತರಾಳವು ಬೀಡಿ ಕಾರ್ಮಿಕರಿಗಾಗಿ ಎಷ್ಟೊಂದು ತುಡಿದಿತ್ತೆಂಬುದನ್ನು ಅರ್ಥ ಮಾಡಬಹುದಾಗಿದೆ.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರ ಹೋರಾಟಗಳು ನಡೆದಾಗಲೆಲ್ಲಾ ಯು.ಬಿ. ಲೋಕಯ್ಯರನ್ನು ಕರೆದು ಪ್ರಶಂಸಿಸುತ್ತಿದ್ದರು. ನೆರೆಯ ಎರಡು ರಾಜ್ಯಗಳಲ್ಲಿ ಬೀಡಿ ಕಾರ್ಮಿಕರ ಬದುಕು ಹಸನಾಗಲು ಜೋಡೆತ್ತಿನಂತೆ ಹೆಗಲು ಕೊಟ್ಟು ದುಡಿದ ಸಂಗಾತಿಗಳಿವರು.

ಕಣ್ಣೂರಿನಲ್ಲಿ ಸೇರಿದ ಬೀಡಿ ಕಾರ್ಮಿಕರ ಸಮ್ಮೇಳನದ ಆರಂಭದಲ್ಲಿ ಸಿಐಟಿಯುವಿನ ಕೇಂದ್ರ ಸಮಿತಿ ಕಾರ್ಯದರ್ಶಿ ಸಂಗಾತಿ ಕೆ. ಪದ್ಮನಾಭನ್ ರವರೂ ಸಿ. ಕಣ್ಣನ್ ಕುರಿತು ಪ್ರಶಂಸನೀಯ ಮಾತಾಡಿದರು. ಸಿ.ಐ.ಟಿ.ಯು. ಕೇಂದ್ರ ಸಮಿತಿ ಅಧ್ಯಕ್ಷೆ ಸಂಗಾತಿ ಡಾ॥ ಕೆ. ಹೇಮಲತಾರವರೂ ಸೇರಿದಂತೆ ಹಲವು ಸಂಗಾತಿಗಳು ಸಿ. ಕಣ್ಣನ್ ರವರನ್ನು ಕೊಂಡಾಡುವಾಗ .. ಅಂತದ್ದೇ ಒಬ್ಬ ಹೋರಾಟಗಾರರಾಗಿದ್ದ ಸಂಗಾತಿ ಯು.ಬಿ. ಲೋಕಯ್ಯರ ಕುರಿತು ಬರೆದು ಪ್ರಕಟ ಪಡಿಸಿದ "ಯು.ಬಿ. ಲೋಕಯ್ಯ ಬದುಕು ಹೋರಾಟ" ಎಂಬ ಕೃತಿಯ ಸಾರ್ಥಕ್ಯ ತೃಪ್ತಿಯು ನನಗಾಯಿತು. *–ಬಾಬು ಪಿಲಾರ*

ಲೋಕಯ್ಯರನ್ನು ಹತ್ತಿರಕ್ಕೆ ಕರೆದು "ಲೋಕಯ್ಯಾ... ಬೀಡಿ ತೊಯಿಲಾಳಿಗಲ್ ವೆರೂ ಪಾವಪೆಟ್ಟವರ್. ಅವರ್ಕ್ ನಮಳಲ್ಲಾತೆ ಸಹಾಯಿಕಾನಿ ಬೇರಾರುಂ ಇಲ್ಯಾ. ಅವರ್ಕ್ ವೇಂಡಿ ಶ್ರಮಿಕೊನು. ನೀ ಬೀಡಿ ತೊಯಿಳಾಲಿಗಳೆ ಸಂಘಟಿಪಿಕನ್.. ಅವರೆ ಬಿಡರ್ದ್." (ಲೋಕಯ್ಯಾ... ಬೀಡಿ ಕಾರ್ಮಿಕರು ತುಂಬಾ ಬಡವರು.. ಅವರಿಗೆ ನಾವಲ್ಲದೆ ಸಹಾಯ ಮಾಡಲು ಬೇರಾರೂ ಇಲ್ಲ. ಅವರಿಗಾಗಿ ನಾವು ಶ್ರಮಿಸಬೇಕು. ನೀನು ಬೀಡಿ ಕಾರ್ಮಿಕರನ್ನು ಸಂಘಟಿಸಬೇಕು. ಅವರನ್ನು ಬಿಡಬೇಡ) ಹೀಗೆಂದು ಕಾರ್ಮಿಕರಿಗಾಗಿ ಮಿಡಿದ ಮನದ ಅಳಲನ್ನು ದೀನ ಸ್ವರದಿಂದ ವ್ಯಕ್ತಪಡಿಸಿದ್ದರಂತೆ.

ಕೇರಳ ಕಮ್ಯೂನಿಸ್ಟ್ ಸರಕಾರವು ಬೀಡಿ ಕಾರ್ಮಿಕರ ಅಭ್ಯುದಯಕ್ಕಾಗಿ ಕಾನೂನು ಜ್ಯಾರಿ ಮಾಡಿದಾಗ ಗಣೇಶ ಬೀಡಿ ಸಂಸ್ಥೆಯವರು ಅಲ್ಲಿಂದ ಕಾಲ್ಕಿತ್ತು ಕರ್ನಾಟಕ ಮತ್ತು ತಮಿಳ್ನಾಡಿಗೆ ಪಲಾಯನ ಮಾಡಿದ್ದರು. ಆ ಸಂದರ್ಭದಲ್ಲಿ ಕೇರಳದ ಬೀಡಿ ಮಜೂರರಿಗೆ ಕೆಲಸ ಕೊಡಬೇಕೆಂದು ಒತ್ತಾಯಿಸಿ ಎಸ್.ಕೆ. ಬೀಡಿ ಫೆಡರೇಶನ್ ವತಿಯಿಂದ ಮಂಗಳೂರಿನ ಗಣೇಶ್ ಬೀಡಿ ಸಂಸ್ಥೆಯ ಎದುರು ಅನಿರ್ಧಿಷ್ಟ ಕಾಲದ ಸತ್ಯಾಗ್ರಹ ಸಂಘಟಿಸಲಾಗಿತ್ತು. ಆಗ ಕಣ್ಣನ್ ರವರು ಮಂಗಳೂರಿನ ಬೀಡಿ ಕಾರ್ಮಿಕ ಮುಖಂಡರೊಂದಿಗೆ ನಿರಂತರ ಸಂಪರ್ಕವಿರಿಸಿಕೊಂಡಿದ್ದರು. ಸ್ವತಃ ಅವರೇ ಮಂಗಳೂರಲ್ಲಿನ ಸತ್ಯಾಗ್ರಹದಲ್ಲಿ ಭಾಗವಹಿಸುತ್ತಿದ್ದರು.

ಕಾಂ. ಎಸ್. ಸೂರ್ಯನಾರಾಯಣ ರಾವ್

ಕರ್ನಾಟಕ, ಚಳುವಳಿಗಳ ಇತಿಹಾಸದಲ್ಲಿ ತನ್ನದೇ ಆದ ಗತವೈಭವವನ್ನು ಪಡೆದುಕೊಂಡಿದೆ. ಅದರಲ್ಲೂ ಮುಖ್ಯವಾಗಿ ದುಡಿಯುವ ಜನತೆಯ ಸಮರಶೀಲ ಹೋರಾಟವೂ ಪ್ರಮುಖ ಪಾತ್ರವನ್ನು ಪಡೆದುಕೊಂಡಿದೆ. ಇಂತಹ ಜನ ಚಳುವಳಿಯಲ್ಲಿ ಮುಂಚೂಣಿಯಾಗಿ ತೊಡಗಿಸಿಕೊಂಡ ಹಿರಿಯ ಚೇತನ ಎಸ್. ಸೂರ್ಯನಾರಾಯಣ ರಾವ್ ಅವರು ಜನ ಚಳುವಳಿಗಳಿಗೆ ಹುಮ್ಮಸ್ಸು ನೀಡಿದವರು, ಹೋರಾಟದ ಮೂಲಕ ತಮ್ಮ ಹಕ್ಕುಗಳನ್ನು ಉಳಿಸಿಕೊಳ್ಳಲು ಮತ್ತು ಪಡೆದುಕೊಳ್ಳಲು ಸಾಧ್ಯವೆಂಬುದನ್ನು ಸೂರಿ ಅವರು ನಿರೂಪಿಸಿಕೊಟ್ಟರು. ಸಿಐಟಿಯುವಿನ ರಾಜ್ಯ ಅಧ್ಯಕ್ಷರಾಗಿ ಡಿಸೆಂಬರ್ 1970 ರಿಂದ ಜುಲೈ 2002 ವರೆಗೂ ನಾಯಕತ್ವ ವಹಿಸಿದ ಅವರ ಕುರಿತ ಕಿರು ಪರಿಚಯ ಇಲ್ಲಿ. ಅವರ ಜೀವನಗಾಥೆಯ ಒಂದು ನೆನಪು.



ವಿದ್ಯಾರ್ಥಿ ದೆಸೆಯಲ್ಲೇ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದ, ಕಾರ್ಮಿಕ ವರ್ಗದ ಚಳುವಳಿಗೆ ಇಡೀ ಜೀವನವನ್ನೇ ಮುಡಿಪಾಗಿಟ್ಟು, ಆ ಸಂಘರ್ಷದಲ್ಲಿ ಮೂಡಿಬಂದ ಸಮರಧೀರ ಚೇತನ ಸೂರಿ. ಆರು ದಶಕಗಳ ಅವರ ಸಾರ್ವಜನಿಕ ಜೀವನವೇ ಹೋರಾಟಗಳ ಒಂದು ವೀರಗಾಥೆ.

ಕಾಮ್ರೇಡ್ ಸೂರಿಯೆಂದೇ ರಾಜ್ಯದ ಕಾರ್ಮಿಕ ಆಂದೋಲನದಲ್ಲಿ ಜನಪ್ರಿಯರಾಗಿದ್ದ ಅವರು ಸಿಐಟಿಯುನ ಅಖಿಲ ಭಾರತ ಉಪಾಧ್ಯಕ್ಷರೂ, ಸಿಐಟಿಯುವಿನ ರಾಜ್ಯ ಅಧ್ಯಕ್ಷರೂ ಹಾಗಿದ್ದರು. ಸಿಪಿಐ(ಎಂ)ನ ಕೇಂದ್ರ ಸಮಿತಿಯ ಸದಸ್ಯರೂ ಆಗಿದ್ದ ಅವರು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿಯೂ ಆಗಿದ್ದರು.

ಕಾಂ. ಸೂರಿಯವರ ಜನನ ಆಗಸ್ಟ್ 24, 1924 ರಂದು ಹಾಸನ ಜಿಲ್ಲೆಯ ಅರಕಲಗೂಡಿನಲ್ಲಿ ಆಯಿತು. ಅವರ ತಂದೆ ಸ್ವಾಮಿರಾವ್ ಕೈಗಾರಿಕೋದ್ಯಮಿಯಾಗಿದ್ದರಿಂದ ಅವರು ಬೆಂಗಳೂರಿಗೆ ವಲಸೆ ಬಂದು ನೆಲೆ ನಿಂತರು.

ದೇಶದ ಇತರೆಡೆಯಂತೆ ರಾಜ್ಯದಲ್ಲೂ ವಿದ್ಯಾರ್ಥಿ, ಯುವಜನರ ನಡುವೆ ಸ್ವಾತಂತ್ರ್ಯ ಹೋರಾಟದ ಭಾಗವಾಗಿ ವಿದ್ಯಾರ್ಥಿ ಆಂದೋಲನ ಹರಡಲಾರಂಭಿಸಿದಾಗ ಸೂರಿಯವರು ವಿದ್ಯಾರ್ಥಿ ಚಳುವಳಿಗೆ ಧುಮುಕಿದರು. ಮುಂದೆ ಇನ್ನೊಬ್ಬ ಕಮ್ಯುನಿಸ್ಟ್ ಮುಂದಾಳುವಾಗಿ ಬೆಳೆದು ಬಂದ ಎಂ.ಎಸ್.ಕೃಷ್ಣನ್ ರವರ ಜತೆ ರಾಜ್ಯದಲ್ಲಿ ಎಐಎಸ್ಎಫ್(ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್)ನ ಪ್ರಮುಖ ಮುಖಂಡರಾಗಿ ಬೆಳೆದು ಬಂದರು.

ಸೂರಿಯವರು ತಮ್ಮ 9ನೇ (1933ರಲ್ಲಿ) ವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡರು. ಈ ಸಂದರ್ಭದಲ್ಲಿ ವಿವಿಧ ರೀತಿಯ ಕೆಲಸ ಮಾಡುತ್ತಾ ಶಿಕ್ಷಣವನ್ನು ಮುಂದುವರೆಸಿದರು. 1941–42ರಲ್ಲಿ ತಮ್ಮ ಹದಿನೆಂಟನೇ ವಯಸ್ಸಿನಲ್ಲಿ ಮೈಸೂರು ಟೊಬ್ಯಾಕೋ ಕಂಪನಿ(ಎಂಟಿಸಿ)ಯ ಲೆಕ್ಕ ಪತ್ರ ವಿಭಾಗದಲ್ಲಿ ಕೆಲಸ. ಅದರೊಂದಿಗೆ ರಾಮಸ್ವಾಮಿ ಐಯ್ಯಾಂಗಾರ್ ಎಂಬ ಒಬ್ಬ ಖಾಸಗಿ ಆಡಿಟರ್‌ರವರ ಬಳಿ ಕೂಡ ಪಾರ್ಟ್ ಟೈಂ ಕೆಲಸ ಮಾಡಿದ್ದರು. ದುಡಿಮೆಯಲ್ಲಿ ತೊಡಗಿಸಿಕೊಂಡು ಅವರು ವಿದ್ಯಾರ್ಥಿ ಚಳುವಳಿಯೊಂದಿಗೆ ಆಕರ್ಷಿತರಾದರು. ನಂತರ ಅವರ ಜೀವನವೇ ಹೋರಾಟಕ್ಕೆ ಮೀಸಲಾಯಿತು.



'ಕ್ವಿಟ್ ಇಂಡಿಯಾ' ಚಳುವಳಿಯಲ್ಲಿ ಭಾಗಿ:

1942 ರಲ್ಲಿ ಗಾಂಧೀಜಿಯವರ 'ಕ್ವಿಟ್ ಇಂಡಿಯಾ' ಕರೆ ಬಂದಾಗ ಸಕ್ರಿಯವಾಗಿ ಭಾಗವಹಿಸಿದ ಸೂರಿ ಅವರು, ಇದಕ್ಕಾಗಿ 18 ತಿಂಗಳು ಬ್ರಿಟಿಷರ ಜೈಲು ವಾಸ ಅನುಭವಿಸಬೇಕಾಯಿತು. ಪ್ರಧಾನಿ ಇಂದಿರಾಗಾಂಧಿಯವರ ಸಲಹಾಕಾರರಾದ ಶ್ರೀ ಹೆಚ್.ವೈ.ಶಾರದಾಪ್ರಸಾದ್, ಡಾ. ಎಚ್.ನರಸಿಂಹಯ್ಯ ಮೊದಲಾದವರು ಈ ಹೋರಾಟದಲ್ಲಿ ಸೂರಿಯವರ ಸಹಯೋಗಿಗಳು.

ವಿದ್ಯಾರ್ಥಿ ಮುಖಂಡರಾಗಿ ಅವರು ಚಳುವಳಿಗೆ ನೇತೃತ್ವ ನೀಡಿದ್ದಷ್ಟೇ ಅಲ್ಲ, ಆಗ ಬೆಂಗಳೂರಿಗೆ ಹೊರ ಊರುಗಳಿಂದ ಬರುತ್ತಿದ್ದ ಬಡ ವಿದ್ಯಾರ್ಥಿಗಳಿಗಾಗಿ 'ವಿದ್ಯಾರ್ಥಿ ನೆರವು ಸಮಿತಿ' ಹಾಗೂ ಒಂದು ಹಾಸ್ಟೆಲನ್ನು ಸೂರಿಯವರು ನಡೆಸಿದ್ದರು.

ಸೂರಿಯವರ ಉತ್ಸಾಹ, ಕಾರ್ಯಶೀಲತೆ, ಬದ್ಧತೆಯನ್ನು ಕಂಡ ಆಗಿನ ರಾಜ್ಯ ಕಾಂಗ್ರೆಸ್ ಅಧ್ಯಕ್ಷರು ಅವರನ್ನು ಕಾಂಗ್ರೆಸ್ ಪಕ್ಷಕ್ಕೆ ಆಹ್ವಾನಿಸಿದರು. ವಿದ್ಯಾರ್ಥಿ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿದ್ದರೂ ಸಹ ಸ್ವಾತಂತ್ರ್ಯ ಪೂರ್ವದವರೆಗೂ ಅವರು ಕಮ್ಯೂನಿಸ್ಟ್ ಪಕ್ಷವನ್ನು ಸೇರಿರಲಿಲ್ಲ. ಕೊನೆಗೆ ಎನ್.ಎಲ್. ಉಪಾಧ್ಯಾಯರು ಕಾಮ್ರೇಡ್ ಸೂರಿಯವರನ್ನು ಕಮ್ಯೂನಿಸ್ಟ್ ಪಕ್ಷಕ್ಕೆ ಸೇರಿಸಿಕೊಳ್ಳುವುದರಲ್ಲಿ ಯಶಸ್ವಿಯಾದರು. ಅಂದಿನಿಂದ ತಮ್ಮ ಇಡೀ ಜೀವನವನ್ನು ರಾಜ್ಯದ ದುಡಿಯುವ ವರ್ಗಕ್ಕೆ, ಪ್ರಜಾಪ್ರಭುತ್ವ ಆಂದೋಲನಕ್ಕೆ ಮುಡಿಪಿಟ್ಟರು. ಸುಮಾರು ಆರು ದಶಕಗಳ ಅವರ ಸಾರ್ವಜನಿಕ ಜೀವನ ಒಂದು ಹೋರಾಟಮಯ ಜೀವನ.

1948ರಲ್ಲಿ ಕಮ್ಯೂನಿಸ್ಟ್ ಪಕ್ಷವನ್ನು ಸೇರಿದ ಅವರು ನಂತರ 1964ರಲ್ಲಿ ಕಮ್ಯೂನಿಸ್ಟ್ ಪಕ್ಷ ವಿಭಜನೆಯಾದಾಗ ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)–ಸಿಪಿಐ(ಎಂ) ಪಕ್ಷದ ಮುಖಂಡರಾಗಿ ಸುಮಾರು ಆರು ದಶಕಗಳ ಕಾಲ ಕಾರ್ಮಿಕ ವರ್ಗದ ಮಧ್ಯೆ ದುಡಿದರು..

1949ರಲ್ಲಿ ಅಖಿಲ ಭಾರತ ರೈಲ್ವೆ ಮುಷ್ಕರಕ್ಕೆ ಬಿ.ಟಿ. ರಣದಿವೆ ನೀಡಿದ ಕರೆಯು ಸೂರಿಯವರಲ್ಲಿ ವಿದ್ಯುತ್ ಸಂಚಾರವನ್ನು ಉಂಟು ಮಾಡಿತು. ಸೂರಿ ಅವರು ರೈಲುಗಳನ್ನು ತಡೆದು ನಿಲ್ಲಿಸಲು ಹೊರಟರು. ಸಿಐಡಿ ಪೊಲೀಸರು ಅವರನ್ನು ಹಿಂಬಾಲಿಸುತ್ತಿದ್ದರು. ಸೂರಿ ತಲೆಮರೆಸಿಕೊಂಡರು. ಕೊನೆಗೂ ಸಿಕ್ಕಿಬಿದ್ದಾಗ ಅವರನ್ನು ಮಂಡ್ಯ ಸಬ್ ಜೈಲಿಗೆ ಕಳುಹಿಸಲಾಯಿತು.

ಭೂಗತವಾಗಿ ಕೆಲಸ:

ಸ್ವಾತಂತ್ರ್ಯ ನಂತರ ಕಮ್ಯೂನಿಸ್ಟ್ ಪಕ್ಷ ನಿಷೇಧಿಸಲ್ಪಟ್ಟಾಗ ಸೂರಿ ಭೂಗತವಾಗಿ ಕೆಲಸ ಮಾಡಿದರು. ಸುಮಾರು 1951ರ ನಂತರ ಅವರು ಬಹಿರಂಗವಾಗಿ ಗುರುತಿಸಿಕೊಂಡರು. ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರಕ್ಕಾಗಿ ನಡೆದ ಪ್ರಜಾಪ್ರಭುತ್ವ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಮೂರು ತಿಂಗಳ ಭೂಗತವಾಸವನ್ನು ಅನುಭವಿಸಿದರು. 1975 ರಲ್ಲಿ ತುರ್ತುಪರಿಸ್ಥಿತಿಯ ಕಾಲದಲ್ಲಿ ಸೂರಿ ಮತ್ತೆ ಜೈಲು ವಾಸ ಅನುಭವಿಸಬೇಕಾಯಿತು.

1956–58 ರ ಅವಧಿಯಲ್ಲಿ, ನಂತರ 1960–62 ರಲ್ಲಿ ಅವರು ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಆಯ್ಕೆಗೊಂಡರು. ಕಮ್ಯುನಿಸ್ಟ್ ಆಂದೋಲನದಲ್ಲಿ ಸೈದ್ಧಾಂತಿಕ ಭಿನ್ನಾಭಿಪ್ರಾಯ ಬಂದು 1964 ರಲ್ಲಿ ತೆನಾಲಿಯಲ್ಲಿ ವಿಶೇಷ ಅಧಿವೇಶನ ನಡೆದಾಗ ಅದರಲ್ಲಿ ಕರ್ನಾಟಕ ಪ್ರತಿನಿಧಿಗಳ ಮುಖಂಡರಾಗಿದ್ದರು

1964ರಲ್ಲಿ ಸಿಪಿಐ(ಎಂ) ಪಕ್ಷ ಸ್ಥಾಪನೆಗೊಂಡಾಗ ರಾಜ್ಯದಲ್ಲಿ ಪಕ್ಷವನ್ನು ಬುಡಮಟ್ಟದಿಂದ ಕಟ್ಟಿದ ಪ್ರಮುಖರಲ್ಲಿ ಸೂರಿ ಸಹ ಒಬ್ಬರು. ಸಿಪಿಐ(ಎಂ) ಪಕ್ಷವನ್ನು ತಳಮಟ್ಟದಲ್ಲಿ ಕಟ್ಟುವ ನಿಟ್ಟಿನಲ್ಲಿ ಒಮ್ಮೆ ಒಂದು ಸಭೆಗೆ ಸಿಪಿಐನ ಅಧ್ಯಕ್ಷರಾದ ಡಾಂಗೆಯವರು ಬರುವವರಿದ್ದರು. ಅಂದೇ ಸಿಪಿಐ(ಎಂ) ನಿಂದ ಇನ್ನೊಂದು ಸಭೆ ಆಯೋಜಿಸಲಾಗಿತ್ತು. ಸೂರಿಯವರು ಸಭೆಯ ವ್ಯವಸ್ಥೆಯ ಹೊಣೆ ಹೊತ್ತಿದ್ದರು. ಡಾಂಗೆಯವರ ಸಭೆಗೆ ಕೆಲವೇ ಜನರು ಸೇರಿದ್ದರೆ ಸಿಪಿಐ(ಎಂ)ನ ಸಭೆಗೆ ಸಾವಿರಾರು ಜನ ಕಿಕ್ಕಿರಿದು ಸೇರಿ ಅತ್ಯಂತ ಯಶಸ್ವಿಯಾಯಿತು. ಅದೂ ಪ್ರತಿನಿಧಿ ಶುಲ್ಕವನ್ನು ಕಟ್ಟಿ. ಕಾರ್ಮಿಕ ವರ್ಗದ ನಡುವೆ ಸಿಪಿಐ(ಎಂ) ಪಕ್ಷವನ್ನು ಕಟ್ಟಿದ ಬಗೆ ಇದು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯಾಗಿ:

1998ರಲ್ಲಿ ಪಿ.ರಾಮಚಂದ್ರರಾವ್ ಅವರ ನಿಧನದ ನಂತರ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿಯಾಗಿ ಬದುಕಿನ ಅಂತ್ಯದವರೆಗೂ ಕೆಲಸ ಮಾಡಿದರು. ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರೂ ಆಗಿದ್ದರು. 2002 ರಲ್ಲಿ ನಡೆದ ಸಿಪಿಐ(ಎಂ) 17ನೇ ಮಹಾಧಿವೇಶನದಲ್ಲಿ ಅವರು ಕೇಂದ್ರ ಸಮಿತಿಗೆ ಮರು ಆಯ್ಕೆಗೊಂಡರು.

ಈ ಮೊದಲೇ ಹೇಳಿದಂತೆ ರಾಜ್ಯದ ಕಾರ್ಮಿಕ ಆಂದೋಲನದಲ್ಲಿ ಸೂರಿಯವರದ್ದು ಅಚ್ಚಳಿಯದ ಹೆಸರು. ರಾಜ್ಯದ ಅಸಂಘಟಿತ ಕಾರ್ಮಿಕರನ್ನು ಸಂಘಟಿತರಾಗಿಸಿ ಸಮರಶೀಲ ಹೋರಾಟಗಳಿಗೆ ಇಳಿಸಿದರು. ಅವರು ನೇತೃತ್ವ ನೀಡಿದ ಹೋರಾಟಗಳು ಹಲವಾರು. 1965ರ ರಾಮ್ ಕುಮಾರ್ ಮಿಲ್ ಹೋರಾಟ, 1967 ರ ಐತಿಹಾಸಿಕ ಹೋಟೆಲ್ ಕಾರ್ಮಿಕರ ಹೋರಾಟ, 1979 ರಲ್ಲಿ ಬೆಂಗಳೂರನ್ನು ನಡುಗಿಸಿದ ಮೈಕೊ ಕಾರ್ಮಿಕರ ಹೋರಾಟ, ನಂತರ 1980 ರ ಐಟಿಸಿ ಕಾರ್ಮಿಕರ ಹೋರಾಟ, 1981 ರ ಬೆಂಗಳೂರಿನ ಸಾರ್ವಜನಿಕ ವಲಯದ ಕಾರ್ಮಿಕರ ಎರಡು ತಿಂಗಳಿಗೂ ಹೆಚ್ಚು ಕಾಲ ನಡೆದ ಐತಿಹಾಸಿಕ ಮುಷ್ಕರ, 1991 ರ ಎಸ್ಕಾರ್ಟ್ಸ್ ಕಾರ್ಮಿಕರ ಹೋರಾಟ, 3 ತಿಂಗಳು ನಡೆದ ಎಲ್ ಅಂಡ್ ಟಿ ಕಾರ್ಮಿಕರ ಹೋರಾಟ ಇವುಗಳಲ್ಲಿ ಕೆಲವು. ಭದ್ರಾ ಮಿಲ್ಸ್, ಟಿ.ಆರ್.ಮಿಲ್ಸ್ ಕಾರ್ಮಿಕರನ್ನು, ಆಟೋರಿಕ್ಷಾ ಚಾಲಕರನ್ನೂ, ಫುಟ್‌ಪಾತ್ ವ್ಯಾಪಾರಿಗಳನ್ನು ಅವರು ಸಂಘಟಿಸಿದರು.

ಮೈಸೂರಿನ ವಿಕ್ರಾಂತ್ ಟೈರ್ಸ್ ಕಾರ್ಮಿಕರು, ಕೆಜಿಎಫ್ ಗಣಿ ಕಾರ್ಮಿಕರು, ರಾಜ್ಯ ವಿವಿಧ ಮೂಲೆಗಳಲ್ಲಿರುವ ಕಾರ್ಮಿಕ ಸಂಘಗಳಿಗೆ ನಾಯಕತ್ವವನ್ನು ನೀಡಿದರು ಕಾಮ್ರೇಡ್ ಸೂರಿ ಅವರು.

ಬೆಂಗಳೂರಿನ ಮೈಕೋ (ಈಗ ಬಾಷ್ ಕಂಪನಿ) ಕಾರ್ಮಿಕ ಸಮರಶೀಲ ಹೋರಾಟ. ದಶಕಗಳಿಗೂ ಹೆಚ್ಚು ಕಾಲ ನಡೆದ ಹೋರಾಟ ಅದಾಗಿತ್ತು. ಕಾರ್ಮಿಕರು 1979 ರಿಂದ 1984ರ ಅವಧಿಯಲ್ಲಿ ನಡೆದ ಹೋರಾಟವಂತೂ ಕಾರ್ಮಿಕ ಚಳುವಳಿಗೆ ಹೊಸ ಸಂಚಲನವನ್ನೇ ಮೂಡಿಸಿತು. ಕಾರ್ಖಾನೆಯೊಂದರ ಕಾರ್ಮಿಕರ ಬೇಡಿಕೆಗಳಿಗೆ ನಡೆದ ಹೋರಾಟಕ್ಕೆ ಬೆಂಬಲ ಪಡೆಯಲು ಬೆಂಗಳೂರು ಬಂದ್ ನಡೆಸಿದ್ದು ಒಂದು ಇತಿಹಾಸ. ಆ ಸಂದರ್ಭದಲ್ಲಿ ತಮ್ಮ ಮೇಲೆ ದಾಳಿ ಮಾಡಲು ಮುಂದಾದ ಗೂಂಡಾಗಗಳನ್ನು ಎದುರಿಸಿ, ಕಾರ್ಮಿಕರ ಹೋರಾಟವನ್ನು ಮುಂದುವರಿಸಿದರು.

"ಹೋರಾಟವೆಂದರೆ, ರಬ್ಬರ್ ಎಳೆದಂತೆ. ರಬ್ಬರ್ ಎಳೆಯುವಾಗ ಅದರಲ್ಲಿನ ಶಕ್ತಿಯ ಬಗ್ಗೆ ಅರಿವಿರಬೇಕು. ಮಿತಿಮೀರಿ ಎಳೆದ ರಬ್ಬರ್ ತುಂಡಾಗುತ್ತೆ" ಕಾರ್ಮಿಕರ ಹೋರಾಟದ ಸಂದರ್ಭದಲ್ಲಿ ಸೂರಿ ಹೇಳುತ್ತಿದ್ದ ಮಾತಿದು.

ಸಿಐಟಿಯು ಕಾರ್ಮಿಕ ಸಂಘಟನೆಯ ರಾಜ್ಯ ಕಾರ್ಯದರ್ಶಿಯಾಗಿ ರಾಜ್ಯ ಅಧ್ಯಕ್ಷರಾಗಿ, ಅಖಿಲ ಭಾರತ ಉಪಾಧ್ಯಕ್ಷರಾಗಿ ದುಡಿದರು. ಸಿಐಟಿಯುವಿನ ಸ್ಥಾಪಕ ಮುಖಂಡರಲ್ಲಿ ಒಬ್ಬರಾಗಿದ್ದ ಅವರು ಸಂಘಟನೆ ಮತ್ತು ಐಕ್ಯ ಹೋರಾಟ ಹಾಗೂ ಚಳುವಳಿಗಳಲ್ಲಿ ಸಿಐಟಿಯುವಿನ ಮುಂಚೂಣಿ ಪಾತ್ರದ ಕುರಿತು ನೀತಿಗಳನ್ನು ರೂಪಿಸುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸಿದರು.

ಶಾಸಕರಾಗಿ:

1983ರ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ ಸೂರಿಯವರು ಸಿಪಿಐ(ಎಂ) ಪಕ್ಷದಿಂದ ವರ್ತೂರು ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಆಯ್ಕೆಯಾದರು. ವಿಧಾನಸಭೆಯಲ್ಲಿ ದುಡಿಯುವ ವರ್ಗದ ಪರವಾಗಿ ಧ್ವನಿಯನ್ನು ಮೊಳಗಿಸಿದರು.

ಸೂರಿಯವರು ಕರ್ನಾಟಕ ರಾಜ್ಯದ ಕಾರ್ಮಿಕರ ಪ್ರತಿನಿಧಿಯಾಗಿ ಹಲವು ಅಂತರರಾಷ್ಟೀಯ ಸಮ್ಮೇಳನಗಳಲ್ಲಿ ಭಾಗವಹಿಸಿದರು. ಇದರ ಭಾಗವಾಗಿ ಅವರು ಚೀನಾ, ಪ್ಯಾರಿಸ್, ಸೋವಿಯತ್ ಒಕ್ಕೂಟ, ಕ್ಯೂಬಾ ಹಾಗೂ ದಕ್ಷಿಣ ಕೊರಿಯಾದ ರಾಜಧಾನಿ ಸೋಲ್‌ನಲ್ಲಿ ನಡೆದ ಜಾಗತೀಕರಣ? ವಿರೋಧಿ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಕಾರ್ಮಿಕ ಚಳುವಳಿಯೊಂದಿಗೆ ಪ್ರಜಾಪ್ರಭುತ್ವ ಚಳುವಳಿಯಲ್ಲಿಯೂ ಸಕ್ರಿಯವಾಗಿದ್ದು, ಉದಾರೀಕರಣ, ಖಾಸಗೀಕರಣ, ಜಾಗತೀಕರಣಗಳು ಕಾರ್ಮಿಕ ವರ್ಗದ, ಜನಸಾಮಾನ್ಯರ ಬದುಕಿನ ಮೇಲೆ ಸತತ ದಾಳಿ ನಡೆಸುತ್ತಿರುವಾಗ ಅದರೊಂದಿಗೆ ಕೋಮುವಾದ ದುಡಿಯುವ ಜನಗಳನ್ನು ವಿಭಜಿಸುವ ಹುನ್ನಾರಗಳ ವಿರುದ್ಧ ಕಾರ್ಮಿಕರು ಮತ್ತು ಜನಸಾಮಾನ್ಯರನ್ನು ಅಣಿನೆರೆಸುವಲ್ಲಿಯೂ ಮುಂದಾಳತ್ವವನ್ನು ನೀಡಿದವರು ಸೂರಿ.

ಸೂರಿಯವರು ತಮ್ಮ ಹೋರಾಟಮಯ ಬದುಕು ಹಾಗೂ ಧೀಮಂತ ನಾಯಕತ್ವದ ಗುಣಗಳಿಂದಾಗಿ ಕಾರ್ಮಿಕ ವರ್ಗದಲ್ಲಿ ಅಪಾರ ಅನುಯಾಯಿಗಳನ್ನು ಗಳಿಸಿದ್ದರು. ತಮ್ಮ ಪ್ರಾಮಾಣಿಕ ರಾಜಕೀಯ ಜೀವನದಿಂದಾಗಿ ಕಾರ್ಮಿಕ ಆಂದೋಲನದ ಹೊರಗೂ ಹಲವಾರು ಅಭಿಮಾನಿಗಳನ್ನು ಪಡೆದಿದ್ದರು.

ಎಸ್. ಸೂರ್ಯನಾರಾಯಣ ರಾವ್ ಜುಲೈ 1, 2002 ರ ಸಂಜೆ ಬೆಂಗಳೂರಿನ ನಾರಾಯಣ ಹೃದಯಾಲಯದಲ್ಲಿ ಹೃದಯಾಘಾತದಿಂದ ನಿಧನರಾದರು.

ದೇಶದಲ್ಲಿ ಇಂದು ಸರ್ವಾಧಿಕಾರಿ, ಕೋಮುವಾದಿ ಶಕ್ತಿಗಳು ಪ್ರಜಾಪ್ರಭುತ್ವಕ್ಕೇ ಬೆದರಿಕೆಯನ್ನುಂಟು ಮಾಡಲು ಮುಂದಾಗುತ್ತಿರುವಾಗ ಅದನ್ನು ಎದುರಿಸಿ ಹಿಮ್ಮೆಟ್ಟಿಸಲು ಸೂರಿಯವರ ಹೋರಾಟದ ಬದುಕು ಸ್ಫೂರ್ತಿಯ ಸೆಲೆ ಹಾಗೂ ದಾರಿ ದೀಪ.

ಪ್ಯಾಲೆಸ್ತೀನ್ ವಿಮೋಚನೆಯ ನಿಲುವಿನಿಂದ ಹಿಂದೆ ಸರಿದ ಭಾರತ

ಪ್ರಕಾಶ್ ಕಾರತ್

ವಿಶ್ವ ಸಂಸ್ಥೆ ಮಹಾಧಿವೇಶನ (ಜನರಲ್ ಅಸೆಂಬ್ಲಿ) 2022 ಡಿಸೆಂಬರ್ 31 ರಂದು ಅಂಗೀಕರಿಸಿದ ಗೊತ್ತುವಳಿಯೊಂದರ ಮೇಲಿನ ಮತದಾನದಲ್ಲಿ ಭಾರತ ಭಾಗವಹಿಸದೆ ಹೊರಗೆ ಉಳಿದಿತ್ತು. ಪ್ಯಾಲೆಸ್ತೀನಿ ಪ್ರದೇಶಗಳನ್ನು ಇಸ್ರೇಲ್ ಸುದೀರ್ಘ ಕಾಲದಿಂದ ಅಕ್ರಮವಾಗಿ ವಶದಲ್ಲಿರಿಸಿಕೊಂಡಿರುವ ಕಾನೂನಾತ್ಮಕ ಪರಿಣಾಮಗಳ ಬಗ್ಗೆ ಅಭಿಪ್ರಾಯ ನೀಡುವಂತೆ ಅಂತಾರಾಷ್ಟ್ರೀಯ ಕೋರ್ಟ್‌ಗೆ (ಐಸಿಜೆ) ಮನವಿ ಮಾಡಿದ ಗೊತ್ತುವಳಿ ಅದಾಗಿತ್ತು. 87 ದೇಶಗಳ ಬೆಂಬಲದೊಂದಿಗೆ ನಿರ್ಣಯ ಅಂಗೀಕಾರವಾಯಿತು. 26 ಸದಸ್ಯರು ವಿರೋಧಿಸಿದ್ದರು. ಭಾರತ ಸಹಿತ 52 ದೇಶಗಳು ಗೈರಾಗಿದ್ದವು. ಇಸ್ರೇಲಿ ಅತಿಕ್ರಮಣ, ಪವಿತ್ರ ನಗರ ಜೆರುಸಲೇಂನ ಜನಸಂಖ್ಯೆಯ ಸಂಯೋಜನೆ, ಸ್ವರೂಪ ಹಾಗೂ ಸ್ಥಾನಮಾನವನ್ನೇ ಬದಲಾಯಿಸುವ ಉದ್ದೇಶದ ಸೆಟ್ಲ್‌ಮೆಂಟ್ ಮತ್ತು ಸೇರ್ಪಡೆಗೊಳಿಸುವಿಕೆ ಮುಂತಾದ ಕ್ರಮಗಳು ಹಾಗೂ ಇಸ್ರೇಲ್ ಅಂಗೀಕರಿಸುವ ತಾರತಮ್ಯದ ನೀತಿಗಳು ಮತ್ತು ಕಾನೂನುಗಳ ಪರಿಣಾಮಗಳ ಬಗ್ಗೆ ಗೊತ್ತುವಳಿಯಲ್ಲಿ ಚರ್ಚಿಸಲಾಗಿದೆ.

ಈ ಗೊತ್ತುವಳಿಗೆ ಭಾರತ ಮತ ಹಾಕದಿರುವ ಮೂಲಕ, ಪ್ಯಾಲೆಸ್ತೀನಿ ಉದ್ದೇಶಕ್ಕೆ ಹಾಗೂ ಎರಡು ದೇಶ ಪರಿಹಾರವನ್ನು ದೃಢವಾಗಿ ಬೆಂಬಲಿಸುವ ಸುದೀರ್ಘ ಕಾಲದ ಧೋರಣೆಯನ್ನು ಕೈಬಿಡುವ ಸೂಚನೆಯನ್ನು ನೀಡಿದೆ.

1967ರ ಯುದ್ಧದಾರಭ್ಯದಿಂದ ಪಶ್ಚಿಮ ದಂಡೆ, ಪೂರ್ವ ಜೆರುಸಲೇಂ ಮತ್ತು ಗಾಜಾವನ್ನು ಇಸ್ರೇಲ್ ಅತಿಕ್ರಮಿಸಿಕೊಂಡಿದೆ. ಈ ಅತಿಕ್ರಮಣವನ್ನು ಅಂತ್ಯಗೊಳಿಸುವಂತೆ ಕರೆ ನೀಡುವ ಅನೇಕ ನಿರ್ಣಯಗಳನ್ನು ವಿಶ್ವ ಸಂಸ್ಥೆ ಕೈಗೊಂಡಿದ್ದರೂ ಇಸ್ರೇಲ್ ಪಶ್ಚಿಮ ದಂಡೆಯಲ್ಲಿ ಕ್ರಮೇಣವಾಗಿ ವಸಾಹತುಗಳನ್ನು (ಸೆಟ್ಲ್‌ಮೆಂಟ್) ಸ್ಥಾಪಿಸಲು ಮತ್ತು ಪೂರ್ವ ಜೆರುಸಲೇಂನಲ್ಲಿ ಪ್ಯಾಲೆಸ್ತೀನಿಯರು ವಾಸವಿರುವ ಪ್ರದೇಶಗಳನ್ನು ನಾಶ ಮಾಡುವ ಕೆಲಸವನ್ನು ಮುಂದುವರಿಸಿಕೊಂಡೇ ಬಂದಿದೆ. ಜೆರುಸಲೇಂ ಮತ್ತು ಪಶ್ಚಿಮ ದಂಡೆ ಪ್ರದೇಶಗಳಲ್ಲಿ ವಾಸಿಸುವ ಪ್ಯಾಲೆಸ್ತೀನಿಯರನ್ನು ಹೊರ ಹಾಕಿ ಅವುಗಳನ್ನು ಇಡಿಯಾಗಿ ತನ್ನ ದೇಶದೊಳಗೆ ಸೇರಿಸಿಕೊಳ್ಳಬೇಕೆಂಬುದು ಇಸ್ರೇಲ್‌ನ ಯೋಜನೆಯಾಗಿದೆ. ಪ್ಯಾಲೆಸ್ತೀನಿಯರನ್ನು ಇಸ್ರೇಲ್‌ನ ನಾಗರಿಕರಲ್ಲದ ರೀತಿಯಲ್ಲಿ, ವರ್ಣತಾರತಮ್ಯದ ಪರಿಸ್ಥಿತಿಯಲ್ಲಿ ವಾಸಿಸುವಂತೆ ಮಾಡುವುದು ಅದರ ಗುರಿಯಾಗಿದೆ. ಭೂ ಕಬಳಿಕೆ ಮೂಲಕ ಪೂರ್ವ ಜೆರುಸಲೇಂ ಅನ್ನು ಬಹಿರಂಗವಾಗಿಯೇ ಸೇರ್ಪಡೆ ಮಾಡಿಕೊಂಡಿದ್ದರಿಂದ ನಗರದ ಯಥಾಸ್ಥಿತಿಯಲ್ಲಿ ಬದಲಾವಣೆಯಾಗಿದೆ. ಜೆರುಸಲೇಂ ಅನ್ನು ಇಸ್ರೇಲ್‌ನ 'ಶಾಶ್ವತ ರಾಜಧಾನಿ' ಎಂದು ಘೋಷಿಸಲಾಗಿದೆ. ಸತತವಾಗಿ ಇಸ್ರೇಲನ್ನು ಆಳಿದ ಸರ್ಕಾರಗಳು, ಸುಮಾರು ಐದು ಲಕ್ಷದಷ್ಟು ಯೆಹೂದಿ ಸೆಟ್ಲರ್‌ಗಳು ಪಶ್ಚಿಮ ದಂಡೆಯ ಪ್ಯಾಲೆಸ್ತೀನಿ ಜಾಗದಲ್ಲಿ ನೆಲೆಯೂರಲು ಅವಕಾಶ ನೀಡಿವೆ.

ಗಾಜಾ ಪಟ್ಟಿಯಲ್ಲಿ ಸುಮಾರು 20 ಲಕ್ಷ ಪ್ಯಾಲೆಸ್ತೀನೀಯರು ಜೈಲಿನಂಥ ಪರಿಸ್ಥಿತಿಯಲ್ಲಿ ವಾಸಿಸುತ್ತಿದ್ದಾರೆ ಹಾಗೂ ಅವರ ಮೇಲೆ ನಿರಂತರವಾಗಿ ಬಾಂಬ್ ದಾಳಿ ನಡೆಸಲಾಗುತ್ತಿದೆ ಹಾಗೂ ದಿಗ್ಬಂಧನ ವಿಧಿಸಲಾಗುತ್ತಿದೆ. ಪಶ್ಚಿಮ ದಂಡೆಯಲ್ಲಿ ಕಟ್ಟಿರುವ ಗೋಡೆ ಜನಾಂಗಭೇದ ವ್ಯವಸ್ಥೆಯನ್ನು ಹುಟ್ಟು ಹಾಕಿದೆ. ಪಶ್ಚಿಮ ದಂಡೆಯನ್ನು ಸೇರ್ಪಡೆ ಮಾಡಿಕೊಳ್ಳುವತ್ತ ಇಸ್ರೇಲ್ ಸರಕಾರ ಮುಂದುವರಿಯುತ್ತಿದೆ.

ಬೆಂಜಮಿನ್ ನೇತ್ಯಾನಹು ಪ್ರಧಾನಿಯಾಗಿ ಅಧಿಕಾರಕ್ಕೆ ಬಂದಿರುವ ಹೊಸ ಸರಕಾರ ಇದುವರೆಗಿನ ಜನಾಂಗವಾದಿ ಯೆಹೂದಿ ರಾಷ್ಟ್ರೀಯವಾದಿ ಪಕ್ಷ ಹಾಗೂ ಕಡು ಸಾಂಪ್ರದಾಯಿಕ ಧಾರ್ಮಿಕ ಗುಂಪುಗಳಲ್ಲೇ ಅತ್ಯಂತ ತೀರಾ–ಬಲಪಂಥೀಯ ಸಮ್ಮಿಶ್ರ ಸರಕಾರವಾಗಿದೆ. ಸಮ್ಮಿಶ್ರ ಸರಕಾರದ ಪಕ್ಷಗಳ ಒಡಂಬಡಿಕೆ ಹೀಗೆ ಹೇಳುತ್ತದೆ: 'ಜುಡಿಯಾ ಮತ್ತು ಸಮಾರಿಯಾ (ಪಶ್ಚಿಮ ದಂಡೆಗೆ ಬೈಬಲ್‌ನಲ್ಲಿರುವ ಹೆಸರುಗಳು) ಸಹಿತ ಇಸ್ರೇಲ್‌ನ ಎಲ್ಲಾ ಭಾಗಗಳಲ್ಲಿ ವಸಾಹತುಗಳನ್ನು ಮುಂದುವರಿಸಲಾಗುತ್ತದೆ ಮತ್ತು ಅಭಿವೃದ್ಧಿಪಡಿಸಲಾಗುತ್ತದೆ'. ಸಮಯ ನೋಡಿಕೊಂಡು ಮತ್ತು ಇಸ್ರೇಲ್ ರಾಷ್ಟ್ರದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಹಿತಗಳನ್ನು ಗಮನದಲ್ಲಿಟ್ಟುಕೊಂಡು ಪಶ್ಚಿಮ ದಂಡೆಯನ್ನು ಸೇರ್ಪಡೆ ಮಾಡಿಕೊಳ್ಳಲಾಗುವುದೆಂದೂ ಅದು ಆಶ್ವಾಸನೆ ನೀಡಿದೆ.

ಯೆಹೂದಿ ವಸಾಹತುಗಳ ರಚನೆಗಾಗಿ ಪ್ಯಾಲೆಸ್ತೀನಿ ಭೂಮಿ ಮತ್ತು ಆಲಿವ್ ತೋಟಗಳನ್ನು ತಮ್ಮ ವಶಕ್ಕೆ ಪಡೆಯುವುದು, ಬುಲ್ಡೋಜರ್‌ಗಳಿಂದ ಪ್ಯಾಲೆಸ್ತೀನಿ ಮನೆಗಳನ್ನು ನೆಲಸಮಗೊಳಿಸುವುದು ಹಾಗೂ ಈ ದಬ್ಬಾಳಿಕೆಯ ನೀತಿಗಳನ್ನು ಪ್ರತಿರೋಧಿಸುವವರನ್ನು ಬಂಧಿಸುವುದು ಇಸ್ರೇಲ್‌ನ ಬರ್ಬರ ವಸಾಹತು ಆಡಳಿತದ ಭಾಗಗಳಾಗಿವೆ. ಹೆಚ್ಚೆಚ್ಚು ಪ್ರತಿರೋಧದ ಚಟುವಟಿಕೆಗಳನ್ನು ಇಸ್ರೇಲಿ ಸಶಸ್ತ್ರ ಪಡೆಗಳು ಗುಂಡೇಟಿನಿಂದ ದಮನಿಸಲು ಯತ್ನಿಸುತ್ತಿವೆ. ಪಶ್ಚಿಮ ದಂಡೆ ಮತ್ತು ಆಕ್ರಮಿತ ಪೂರ್ವ ಜೆರುಸಲೇಂನಲ್ಲಿ ಇಸ್ರೇಲಿ ಪಡೆಗಳು 2022ರಲ್ಲಿ 30ಕ್ಕೂ ಹೆಚ್ಚು ಮಕ್ಕಳ ಸಹಿತ 171 ಪ್ಯಾಲೆಸ್ತೀನಿಯರನ್ನು ಕೊಂದಿವೆ ಎಂದು ವಿಶ್ವ ಸಂಸ್ಥೆ ತಿಳಿಸಿದೆ. ಸುಮಾರು 9,000 ಜನರು ದಬ್ಬಾಳಿಕೆಯಲ್ಲಿ ಗಾಯಗೊಂಡಿದ್ದಾರೆ.

ಹೊಸದಾಗಿ ರಚನೆಯಾಗಿರುವ ಅತಿ–ಬಲಪಂಥೀಯ ಸರಕಾರವು ಪಶ್ಚಿಮ ದಂಡೆಯಲ್ಲಿ ಪ್ಯಾಲೆಸ್ತೀನೀಯರನ್ನು ಸದೆಬಡಿಯಲು ಯಾವ ಮಟ್ಟಕ್ಕೂ ಇಳಿಯಲು ಸಿದ್ಧವಿದೆ. ಮಿತ್ರಪಕ್ಷಗಳಲ್ಲಿ ಒಂದಾದ ರಿಲೀಜಿಯಸ್ ಝಿಯೋನಿಸ್ಟ್ ಪಾರ್ಟಿ ಹೆಚ್ಚಾಗಿ ಪಶ್ಚಿಮ ದಂಡೆ ಸೆಟ್ಲರ್‌ಗಳಲ್ಲಿ ನೆಲೆ ಹೊಂದಿರುವುದು ಇದಕ್ಕೆ ಕಾರಣವಾಗಿದೆ. ಉಗ್ರಗಾಮಿ ಯೆಹೂದಿ ಪವರ್ ಪಾರ್ಟಿಯವರಾದ ರಾಷ್ಟ್ರೀಯ ಭದ್ರತಾ ಸಚಿವ ಇತಾಮರ್ ಎನ್–ಗ್ವಿರ್, ಪ್ಯಾಲೆಸ್ತೀನಿಯರು ಮತ್ತು ಅರಬ್ಬರ ವಿರುದ್ಧದ ದ್ವೇಷ ಭಾಷಣಕ್ಕೆ ಕುಖ್ಯಾತನಾಗಿದ್ದಾನೆ. ಈ ಖಾತೆ ಪಶ್ಚಿಮ ದಂಡೆಯಲ್ಲಿ ಇಸ್ರೇಲ್ ಗಡಿ ಪೊಲೀಸ್ ಉಸ್ತುವಾರಿ ಹೊಂದಿದೆ. ಅಲ್ಲದೆ ಪ್ಯಾಲೆಸ್ತೀನಿ ನಿವಾಸಿಗಳ ಮೇಲೂ ಕಣ್ಗಾವಲು ಇಡುತ್ತದೆ.


ಹೀಗಾಗಿ, ಆಕ್ರಮಿತ ಪ್ರದೇಶಗಳಲ್ಲಿ ಆಕ್ರಮಣಾತ್ಮಕ ಕ್ರಮಗಳನ್ನು ಕೈಗೊಳ್ಳಲು ಇಸ್ರೇಲ್‌ನ ನೂತನ ಉಗ್ರಗಾಮಿ ಸರಕಾರ ಸಜ್ಜಾಗಿರುವ ಹಂತದಲ್ಲಿ ವಿಶ್ವ ಸಂಸ್ಥೆ ಮಹಾಧಿವೇಶನದ ಈ ಗೊತ್ತುವಳಿ ಸಕಾಲದಲ್ಲಿ ಬಂದಿದೆ.

ಯಾವುದೇ ದೇಶದೊಳಗಿನ ಆಂತರಿಕ ಮಾನವ ಹಕ್ಕುಗಳ ವಿಚಾರಗಳಲ್ಲಿ ಅಥವಾ ಅಂತಾರಾಷ್ಟ್ರೀಯ ಕ್ರಿಮಿನಲ್ ಕೋರ್ಟ್‌ಗೆ ಸಂಬಂಧಿತ ವಿಚಾರಗಳಲ್ಲಿ ಬಾಹ್ಯ ವಿಚಾರಣೆ ನಡೆಸಬೇಕು ಎಂಬ ವಿಶ್ವ ಸಂಸ್ಥೆ ಮಾನವ ಹಕ್ಕುಗಳ ಮಂಡಳಿ ಮತ್ತು ವಿಶ್ವ ಸಂಸ್ಥೆ ಜನರಲ್ ಅಸೆಂಬ್ಲಿಯ ನಿರ್ಣಯಗಳಿಗೆ ಹಿಂದೆಲ್ಲಾ ಭಾರತ ಬೆಂಬಲ ಕೊಟ್ಟಿರಲಿಲ್ಲ. ಆದರೆ ಅದುವೇ ಪ್ರಸಕ್ತ ಗೊತ್ತುವಳಿಯಿಂದ ಗೈರುಹಾಜರಾಗಲು ಒಂದು ಸಮರ್ಥನೆ ಆಗಬಾರದು. ಯಾಕೆಂದರೆ ಮೊದಲನೆಯದಾಗಿ, ಭಾರತವೂ ಮಾನ್ಯ ಮಾಡಿರುವ ಐಸಿಜೆಗೆ ಪರಿಶೀಲಿಸಲು ವಹಿಸಲಾಗಿರುವ ವಿಚಾರವು ಒಂದು ಸಾರ್ವಭೌಮ ದೇಶದ ಆಂತರಿಕ ವ್ಯವಹಾರಗಳಿಗೆ ಸಂಬಂಧಿಸಿದ್ದಲ್ಲ, ಆದರೆ ಅದು ಆಕ್ರಮಿತ ಪ್ರದೇಶವೊಂದಕ್ಕೆ ಸಂಬಂಧಿಸಿದ್ದಾಗಿದೆ. ಪಶ್ಚಿಮ ದಂಡೆ ಮತ್ತು ಪೂರ್ವ ಜೆರುಸಲೇಂ ಆಕ್ರಮಿತ ಪ್ರದೇಶಗಳಾಗಿವೆ. ಅದಕ್ಕಿಂತ ಹೆಚ್ಚಾಗಿ, ಆಕ್ರಮಿತ ಪ್ಯಾಲೆಸ್ತೀನಿ ಪ್ರದೇಶದಲ್ಲಿ ಗೋಡೆಯೊಂದರ ನಿರ್ಮಾಣದ ಕಾನೂನಾತ್ಮಕ ಪರಿಣಾಮಗಳ ಕುರಿತು ವಿಶ್ವ ಸಂಸ್ಥೆ ಮಹಾಧಿವೇಶನದ ಮನವಿ ಮೇರೆಗೆ ಐಸಿಜೆ 2004ರಲ್ಲಿ ಸಲಹಾತ್ಮಕ ಅಭಿಪ್ರಾಯ ತಿಳಿಸಿತ್ತು ಎನ್ನುವುದು ಇಲ್ಲಿ ಗಮನಾರ್ಹವಾಗಿದೆ. ಇಸ್ರೇಲ್‌ನೊಂದಿಗಿನ ರಕ್ಷಣಾ ವಲಯದಲ್ಲಿ ಹೆಚ್ಚುತ್ತಿರುವ ಬಾಂಧವ್ಯವೇ ಈ ವಿಚಾರದಲ್ಲಿ ಭಾರತ ಹಿಂಜರಿಯಲು ಕಾರಣವಾಗಿದೆ. ಹಾಗೂ ಪ್ಯಾಲೆಸ್ತೀನಿ ಉದ್ದೇಶದ ವಿಚಾರದಲ್ಲಿ ಸೌಮ್ಯ ಧೋರಣೆ ತಳೆದಿದೆ.

ಮೋದಿ ಸರಕಾರ ಇಸ್ರೇಲ್‌ಗೆ ತುಂಬಾ ನಿಕಟವಾಗುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ನೇತ್ಯಾನಹು ಹಿಂದೆಯೂ ಪ್ರಧಾನಿಯಾಗಿದ್ದಾಗ ಮೋದಿಗೆ ನಿಕಟವಾಗಿದ್ದರು ಹಾಗೂ ಅವರಿಬ್ಬರೂ ಸೈದ್ಧಾಂತಿಕವಾಗಿ ಪರಸ್ಪರ ಆತ್ಮ–ಸಂಗಾತಿಗಳಾಗಿದ್ದಾರೆ. ಪ್ಯಾಲೆಸ್ತೀನ್ ಮತ್ತು ಅರಬ್ಬರ ವಿರುದ್ಧದ ಜನಾಂಗದ್ವೇಷವನ್ನು ಆರ್‌ಎಸ್‌ಎಸ್ ಮತ್ತು ಬಿಜೆಪಿ ಮೆಚ್ಚಿಕೊಳ್ಳುತ್ತಿವೆ. ಅಮೆರಿಕದ ಯೋಜನೆಯ ಮೇರೆಗೆ ಭಾರತವು ಪಶ್ಚಿಮ ಏಷ್ಯಾ ವೇದಿಕೆಯಾದ ಐ2ಯು2 (ಇಂಡಿಯಾ, ಇಸ್ರೇಲ್, ಯುಎಇ ಮತ್ತು ಯುಎಸ್‌ಎ) ಕೂಟವನ್ನು ಸೇರಿದೆ. ವಿಶ್ವ ಸಂಸ್ಥೆ ಮಹಾಧಿವೇಶನ ಈ ಗೊತ್ತುವಳಿ ಸ್ವೀಕರಿಸುವ ಒಂದು ದಿನದ ಮುಂಚೆಯಷ್ಟೇ ನೇತ್ಯಾನಹು ಸರಕಾರ ಅಧಿಕಾರಕ್ಕೆ ಬಂದಿತ್ತು. ಗೊತ್ತುವಳಿ ಮೇಲಿನ ಮತದಾನದಲ್ಲಿ ಭಾಗವಹಿಸದಿರುವುದು ನೇತ್ಯಾನಹು ಸರಕಾರದ ಬಗ್ಗೆ ಭಾರತದ ಸೌಹಾರ್ದ ಭಾವನೆಯ (ಗುಡ್‌ವಿಲ್ ಗೆಶ್ಚರ್) ಸಂಕೇತ ಎಂದು ಭಾವಿಸಲಾಗಿದೆ.

ಪ್ಯಾಲೆಸ್ತೀನಿ ಜನರು ಏಳು ದಶಕಗಳಿಂದ ನೆಲೆ ಕಳೆದುಕೊಳ್ಳುವಿಕೆ ಮತ್ತು ವಸಾಹತುಶಾಹಿ ಅತಿಕ್ರಮಣದ ಕಷ್ಟನಷ್ಟಕ್ಕೆ ಗುರಿಯಾಗಿದ್ದಾರೆ. ವರ್ಣಿಸಲಸದಳ ನೋವನ್ನು ಅನುಭವಿಸುತ್ತಿದ್ದಾರೆ. ಅವರಲ್ಲಿನ ಮಿಲಿಯಾಂತರ ಜನರು ಪ್ಯಾಲೆಸ್ತೀನ್‌ನಿಂದ ಹೊರಗೆ ನಿರಾಶ್ರಿತರಾಗಿ ಬಾಳುತ್ತಿದ್ದಾರೆ. ಇಸ್ರೇಲ್ 1948ರಲ್ಲಿ ಅವರನ್ನು ತಾಯ್ನೆಲದಿಂದ ಹೊರಗಟ್ಟಿದೆ ಹಾಗೂ ಮಿಲಿಟರಿ ಅತಿಕ್ರಮಣಕ್ಕೆ ಒಳಪಡಿಸಿದೆ. ಭಾರತ ತನ್ನ ಸ್ವಾತಂತ್ರ್ಯ ಸಂಗ್ರಾಮದ ದಿನಗಳಿಂದಲೂ ಪ್ಯಾಲೆಸ್ತೀನಿ ಜನರಿಗೆ ಪೂರ್ಣ ಸಹಾನುಭೂತಿ ಮತ್ತು ಸೌಹಾರ್ದತೆ ವ್ಯಕ್ತಪಡಿಸುತ್ತಾ ಬಂದಿದೆ. ಆದರೆ ಬಿಜೆಪಿ ಆಡಳಿತಗಾರರ ಹಿಂದೂತ್ವದಿಂದ ಅಂಧವಾದ ಧೋರಣೆಯು ಭಾರತವನ್ನು ಈ ಧೀರ ಜನರ ಮೇಲೆ ದಬ್ಬಾಳಿಕೆ ನಡೆಸುವವರ ಪರವಾಗಿ ಹೋಗುವಂತೆ ಮಾಡುತ್ತಿದೆ.

ಅನು: ವಿಶ್ವ



ಅಂಗನವಾಡಿ ನೌಕರರ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ... ಪುಟ 4 ರಿಂದ

ವರ್ಷ ಸೇವೆ ಸಲ್ಲಿಸಿದವರಿಗೆ, 3 ಕಿ. ಮಿ. ಅಂತರದಲ್ಲಿ ಇರುವ ಹೊಸ ಕೇಂದ್ರಗಳಿಗೆ ಹಾಗೂ ಖಾಲಿ ಇರುವ ಕೇಂದ್ರಗಳಿಗೆ ಪೂರ್ಣ ಕಾರ್ಯಕರ್ತೆಯಾಗಿ ಮುಂಬಡ್ತಿ ನೀಡಲಾಗುತ್ತಿದೆ. ಇದು ನಮ್ಮ ಹೋರಾಟದ ನಿರಂತರ ಪ್ರಯತ್ನದಿಂದ ಆಗಿದೆ. ಈಗಾಗಲೇ ರಾಜ್ಯದ ಬಹಳಷ್ಟು ಮಿನಿ ಕಾರ್ಯಕರ್ತೆ, ಸಹಾಯಕಿ ಇಬ್ಬರೂ ಪೂರ್ಣ ಕಾರ್ಯಕರ್ತೆಯಾಗಿದ್ದಾರೆ. ಆದರೆ, ಇತ್ತೀಚೆಗೆ ಸರ್ಕಾರದ ಆದೇಶ ಸಂಖ್ಯೆ ಮ.ಮ.ಇ 154 ಐಸಿಡಿ 2020, ಬೆಂಗಳೂರು 3–12–2022 ರ ಆದೇಶದಲ್ಲಿ, ಕಾರ್ಯಕರ್ತೆ, ಸಹಾಯಕಿ, ಹೊಸ ಆಯ್ಕೆಗೆ ಮಾರ್ಗಸೂಚಿ ಪಿಯುಸಿ ಮಾನದಂಡ ಹೇರಿರುವುದರಿಂದ ಈಗಾಗಲೇ ಮುಂಬಡ್ತಿ ನೀಡುತ್ತಿಲ್ಲ. ಈ ಆದೇಶವನ್ನು ಹೊಸ ನೇಮಕಾತಿಗೆ ಮಾತ್ರ ಅನ್ವಯ ಮಾಡಿ, ಈಗಾಗಲೇ ಸರ್ಕಾರದ ಆದೇಶ 19–01–2019 ಮತ್ತು 15–6–20 ರ ಆಯ್ಕೆ ಮಾರ್ಗಸೂಚಿ ಮತ್ತು ಅರ್ಹತೆಯ ಮಾನದಂಡಗಳ ತಿದ್ದುಪಡಿ ಆದೇಶವನ್ನು ಮುಂಬಡ್ತಿಗಾಗಿ ಹೊಸ ಆಯ್ಕೆ ಆದೇಶದ ಸುತ್ತೋಲೆಯಲ್ಲಿ ತಿದ್ದುಪಡಿ ಮಾಡಿ, ಅಲ್ಲದೆ ಆರೋಗ್ಯ ಸಮಸ್ಯೆ, ಬಹಳ ಅಂತರದ ಹಾಗೂ ವೈಯಕ್ತಿಕ ಸಮಸ್ಯೆ ಇರುವ ಕಾರ್ಯಕರ್ತೆಗೂ ವರ್ಗಾವಣೆಯೂ ಸೇರಿದಂತೆ ಪುನರ್ ಆದೇಶ ಜಾರಿಮಾಡಲು ಈ ಹೋರಾಟದಲ್ಲಿ ಒತ್ತಾಯಿಸಲಾಗುತ್ತದೆ.

ಈ ಎಲ್ಲಾ ಬೇಡಿಕೆಗಳು ಹಾಗೂ ಇನ್ನಿತರ ಬೇಡಿಕೆಗಳಿಗೆ ಒತ್ತಾಯಿಸಿ 2022ರ ಡಿಸೆಂಬರ್ 1 ರಂದು ಜಿಲ್ಲಾ ಮಟ್ಟದಲ್ಲಿ ಸಾವಿರಾರು ಸಂಖ್ಯೆಯಲ್ಲಿ ನೌಕರರು ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ. ಆದರೆ ಸರ್ಕಾರ ಈವರೆಗೆ ಗಮನ ನೀಡಿಲ್ಲ. ಹಾಗಾಗಿ ಜನವರಿ 23 ರಿಂದ ಅನಿರ್ದಿಷ್ಟಾವಧಿ ಹೋರಾಟವನ್ನು ರಾಜ್ಯದ ಬೆಂಗಳೂರಿನಲ್ಲಿ ಹಮ್ಮಿಕೊಂಡಿದೆ. ಈ ಹೊರಾಟಕ್ಕೆ ಕೆಲಸ ಸ್ಥಗಿತ ಮಾಡಿ ಪ್ರತಿಯೊಬ್ಬ ಕಾರ್ಯಕರ್ತೆ, ಸಹಾಯಕಿ, ಅವರ ಕುಟುಂಬದವರು ತಪ್ಪದೇ ಸಹಸ್ರಾರು ಸಂಖ್ಯೆಯಲ್ಲಿ ಹೋರಾಟಕ್ಕೆ ಅಣಿನೆರೆದು ಬೆಂಗಳೂರಿಗೆ 2023 ಜನವರಿ 22 ರಂದೇ ಬರಲು ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಸುನಂದಾ ಹೆಚ್.ಎಸ್. ಅವರು ವಿನಂತಿ ಮಾಡಿದ್ದಾರೆ.

‘ಮೀಸಲಾತಿ’: ಸಮುದಾಯಗಳು ಎದುರಿಸುತ್ತಿರುವ ಬಿಕ್ಕಟ್ಟುಗಳಿಗೆ ಪರಿಹಾರವೇ?

‘ಮೀಸಲಾತಿ’ ಎಂಬುದು ಸಮುದಾಯಗಳು ಎದುರಿಸುತ್ತಿರುವ ಬಿಕ್ಕಟ್ಟುಗಳಿಗೆ ಪರಿಹಾರವೇ? ಹೀಗೊಂದು ಪ್ರಶ್ನೆ ಮೂಡುತ್ತದೆ. ಈ ವಿಷಯ ಕುರಿತಂತೆ ದುಂಡುಮೇಜಿನ ಸಭೆಯೊಂದು 2023 ಜನವರಿ 2 ರಂದು ಬೆಂಗಳೂರಿನಲ್ಲಿ ನಡೆಯಿತು. ಇದರಲ್ಲಿ ಸುಪ್ರೀಂ ಕೋರ್ಟಿನ ವಿಶ್ರಾಂತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನದಾಸ್ ಸೇರಿದಂತೆ ವಿವಿಧ ಕ್ಷೇತ್ರಗಳ ಚಿಂತಕರು, ಗಣ್ಯರು, ವಿವಿಧ ಸಮುದಾಯಗಳ ಮುಖಂಡರು ಭಾಗಿಯಾಗಿದ್ದರು. ಇಲ್ಲಿ ಚರ್ಚೆಗೆ ಬಂದ ಹಲವು ವಿಷಯಗಳು ಮತ್ತು ಮೂಡಿಬಂದ ಪ್ರಶ್ನೆಗಳ ಬಗ್ಗೆ ಒಂದಷ್ಟನ್ನು ಇಲ್ಲಿ ಹಂಚಿಕೊಳ್ಳಲು ಬಯಸುತ್ತೇವೆ.

ಸಿ. ಸಿದ್ದಯ್ಯ

ಬೆಂಗಳೂರಿನ ಗಾಂಧಿ ಭವನದಲ್ಲಿ ದಲಿತ ಹಕ್ಕುಗಳ ಸಮಿತಿ, ಕರ್ನಾಟಕ ಕರ್ನಾಟಕ ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್‌ವಾದ) ಮತ್ತು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಗಳು ಜಂಟಿಯಾಗಿ ಈ ದುಂಡುಮೇಜಿನ ಸಭೆಯನ್ನು ಏರ್ಪಡಿಸಿದ್ದವು. ಮಾವಳ್ಳಿ ಶಂಕರ್ ಅದ್ಯಕ್ಷತೆಯನ್ನು ವಹಿಸಿದ್ದರು. ಬಿ. ರಾಜಶೇಖರಮೂರ್ತಿಯವರು ವಿಷಯ ಪ್ರಸ್ತಾವನೆ ಮಾಡಿ ಸ್ವಾಗತಿಸಿದರು.

ವಿವಿಧ ಜಾತಿ ಜನಾಂಗಗಳು ಮೀಸಲಾತಿಗಾಗಿ ಹೋರಾಡುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣವೇನು? ನಾವು ಮೀಸಲಾತಿ ಹಿಂದೆ ಏಕೆ ಬಿದ್ದಿದ್ದೇವೆ? ಮೀಸಲಾತಿಯೇ ನಮ್ಮೆಲ್ಲ ಬಿಕ್ಕಟ್ಟುಗಳಿಗೆ ಪರಿಹಾರವೇ? ಉದ್ಯೋಗದಲ್ಲಿ ಮೀಸಲಾತಿ ಪಡೆಯುವುದರಿಂದ ನಮ್ಮ ನಿರುದ್ಯೋಗ ಸಮಸ್ಯೆ ಬಗೆಹರಿಯುತ್ತದೆಯೇ? ಶಿಕ್ಷಣದಲ್ಲಿ ಮೀಸಲಾತಿ ಪಡೆಯುವುದರಿಂದ ನಮ್ಮ ಮಕ್ಕಳು ಉನ್ನತ ಮಟ್ಟದ ಶಿಕ್ಷಣ ಪಡೆಯಲು ಸಾಧ್ಯವೇ? ಹೀಗಿದ್ದವು ಹಲವು ಪ್ರಶ್ನೆಗಳು. ವಿಶೇಷವಾಗಿ ರಾಜ್ಯದಲ್ಲಿ ಮಿಸಲಾತಿಗಾಗಿ ಹಲವು ಸಮುದಾಯಗಳು ಹೋರಾಟ ನಡೆಸಿರುವಾಗ ಮತ್ತು ಸರಕಾರ ಈ ಪ್ರಶ್ನೆಯನ್ನು ಗೊಂದಲ ಹಾಗೂ ಅಪ್ರಸ್ತುತಗೊಳೀಸುತ್ತಿರುವಾಗ ಈ ಸಭೆ ಮಹತ್ವದ್ದಾಗಿತ್ತು.

“ಮೊದಲನೆಯದಾಗಿ, ಬಹಳಷ್ಟು ಜನರಿಗೆ ಮೀಸಲಾತಿ ಕುರಿತು ಸ್ಪಷ್ಟತೆ ಇಲ್ಲ. ಮೊದಲು ನಮ್ಮಲ್ಲಿ ಇದರ ಕುರಿತು ಸ್ಪಷ್ಟತೆ ಇರಬೇಕು” ಇದು ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನದಾಸ್ ಅವರ ಮೊದಲ ಮಾತು.

ಸಾಮಾಜಿಕ ನ್ಯಾಯವನ್ನು ನಮ್ಮ ಸಂವಿಧಾನದ ಪೀಠಿಕೆಯಲ್ಲಿ ಪ್ರಸ್ತಾಪಿಸಲಾಗಿದೆ. ಸಂವಿಧಾನದ ಅನುಚ್ಛೇದ 15, 16, 17 ಮತ್ತು 340 ರಲ್ಲಿ ಶೈಕ್ಷಣಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದಿರುವ ವರ್ಗಗಳಿಗೆ ಶಿಕ್ಷಣದಲ್ಲಿ ಮತ್ತು ಸಾರ್ವಜನಿಕ ಉದ್ಯೋಗದಲ್ಲಿ ಮೀಸಲಾತಿಯನ್ನು ನೀಡಲಾಗಿದೆ. ಮೀಸಲಾತಿ ಎಂಬುದು ಬಡತನ ನಿರ್ಮೂಲನ ಕಾರ್ಯಕ್ರಮವೂ ಅಲ್ಲ ಅಥವಾ ಜಾತಿಗಳ ವಿನಾಶದ ಕಾರ್ಯಕ್ರಮವೂ ಅಲ್ಲ. ಪ್ರಾತಿನಿಧ್ಯ ವಂಚಿತರಿಗೆ ಪ್ರಾತಿನಿಧ್ಯವನ್ನು ನೀಡುವುದೇ ಮೀಸಲಾತಿ. ಇದೊಂದು ಬಿಕ್ಷೆಯಲ್ಲ, ಬದಲಿಗೆ, ಇದೊಂದು ಮಾನವ ಹಕ್ಕು ಮತ್ತು ಸಂವಿಧಾನದ ಹಕ್ಕು. ಮೀಸಲಾತಿಯನ್ನು ಜಾತಿ ಜನಸಂಖ್ಯೆ ಆಧಾರದಲ್ಲಿ ಎಲ್ಲಾ ಜಾತಿಗಳಿಗೆ ಹಂಚಿಕೆ ಮಾಡಲಾಗದು. ಈ ರೀತಿ ಮಾಡಿದರೆ ಅದು ಹಂಚಿಕೆಯಾಗುತ್ತದೆ ವಿನಃ ವಂಚಿತರಿಗೆ ಪ್ರಾತಿನಿಧ್ಯವನ್ನು ನೀಡಬೇಕೆಂಬ ಸಂವಿಧಾನದ ಆಶಯಗಳಿಗೆ ವಿರುದ್ದದಾಗಿರುತ್ತದೆ.

ಹಿಂದೆಂದೂ ಇಲ್ಲದ ಮೀಸಲಾತಿ ಬೇಡಿಕೆ ಈಗ ಏಕೆ?

ಈ ಪ್ರಶ್ನೆಯೂ ಅಲ್ಲಿ ಬಂತು. ಇದಕ್ಕೆ ಉತ್ತರ; ಭಾರತಕ್ಕೆ ಸ್ವಾಂತಂತ್ರ್ಯ ಬಂದ ಸಮಯದಲ್ಲಿ ನಮ್ಮ ದೇಶದಲ್ಲಿ ಬಹುಪಾಲು ಕೃಷಿಕರಾಗಿದ್ದರು. ಅವರಿಗೆ ಉದ್ಯೋಗದ ಅವಶ್ಯಕತೆ ಅಷ್ಟಾಗಿ ಇರಲಿಲ್ಲ. ರೈತ ಸಮುದಾಯ ಹತ್ತು ಜನರಿಗೆ ಕೆಲಸ ಕೊಡುವ ಸಂಧರ್ಭದಲ್ಲಿ ಸ್ವಾಭಿಮಾನದಿಂದ ಬದುಕುತ್ತಿದ್ದರು. ಅಂದು ಯಾರಿಗಾದರೂ ಮೀಸಲಾತಿ ಸೌಲಭ್ಯ ನೀಡಿದರೆ ಯಾರೂ ಪ್ರಶ್ನಿಸುತ್ತಿರಲಿಲ್ಲ. ಏಕೆಂದರೆ ಅವರಿಗೆ ನಿರುದ್ಯೋಗದ ಸಮಸ್ಯೆ ಇರಲಿಲ್ಲ. ಇಂದು ಕೃಷಿ ಕೈಗಾರಿಕಾ ಬಿಕ್ಕಟ್ಟು ತೀವ್ರಗೊಂಡಿದೆ. ಗ್ರಾಮೀಣ ಪ್ರದೇಶದ ಜನರು ಕೃಷಿಯಿಂದ ದೂರವಾಗುತ್ತಿದ್ದಾರೆ. ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗಿದೆ. ‘ಮೀಸಲಾತಿ ಪಡೆದ ಸಮುದಾಯದವರು ನಮಗೆ ಸಿಗಬೇಕಾದ ಉದ್ಯೋಗಗಳನ್ನು ಕಸಿದುಕೊಳ್ಳುತ್ತಿದ್ದಾರೆ. ಇವರಿಂದಾಗಿಯೇ ನಮಗೆ ಉದ್ಯೋಗ ಸಿಗುತ್ತಿಲ್ಲ’ ಎಂಬ ತಪ್ಪು ಕಲ್ಪನೆಯನ್ನು ಕೆಲ ಸಮುದಾಯದವರು ಹೊಂದಿದ್ದಾರೆ. ಆದರಿದು ಸತ್ಯವಲ್ಲ ಎಂಬುದನ್ನು ಜನತೆಗೆ ತಿಳಿಸುವ ಅವಶ್ಯಕತೆ ಇದೆ.

ಸಾಮಾನ್ಯ ವರ್ಗದ ಬಡವರಿಗೆ (EWS) ಶೇ.10 ಮೀಸಲಾತಿ ನೀಡಲಾಗುತ್ತಿರುವ ಬಗ್ಗೆ:

ಶೇ. 10ರಷ್ಟು ಮೀಸಲಾತಿಯನ್ನು ಆರ್ಥಿಕವಾಗಿ ಹಿಂದುಳಿದಿರುವ ಸಾಮಾನ್ಯ ವರ್ಗದವರಿಗೆ ನೀಡಿರುವುದು ಸಂವಿಧಾನ ಬದ್ಧವೇ? ಮತ್ತು ಅದರ ಆಶಯವಾದ ಸಾಮಾಜಿಕ ನ್ಯಾಯದ ಮೂಲ ತತ್ವಕ್ಕೆ ವಿರುದ್ಧವಾದದ್ದೇ? ಎನ್ನುವ ಪ್ರಶ್ನೆಗಳು ಬಂದವು. ಅದರಲ್ಲಿ ವಿಧಿಸಲಾದ ಮಾನದಂಡಗಳ ಬಗ್ಗೆಯೂ ತೀವ್ರ ಆಕ್ಷೇಪ ವ್ಯಕ್ತವಾದವು. ಸಂವಿಧಾನದ 103ನೇ ತಿದ್ದುಪಡಿಯ ಮೂಲಕ 2019ರಲ್ಲಿ ಸಾಮಾನ್ಯ ವರ್ಗದ ಬಡವರಿಗೆ ಉನ್ನತ ಶಿಕ್ಷಣದ ಸಂಸ್ಥೆಗಳಲ್ಲಿ ಮತ್ತು ಸಾರ್ವಜನಿಕ ಉದ್ಯೋಗಗಳಲ್ಲಿ ಶೇ. 10ರಷ್ಟು ಮೀಸಲಾತಿ ಪಡೆಯಲು ಅವಕಾಶ ಮಾಡಿಕೊಡಲಾಗಿದೆ. ಇದರ ಮಾನದಂಡವೆಂದರೆ ವಾರ್ಷಿಕ ವರಮಾನ ರೂ. 8 ಲಕ್ಷಕ್ಕಿಂತ ಕಡಿಮೆ ಇರಬೇಕು, ಅಥವಾ 5 ಎಕರೆಗಿಂತ ಕಡಿಮೆ ಜಮೀನು ಹೊಂದಿರಬೇಕು, ಅಥವಾ 1000 ಚದರ ಅಡಿಗಿಂತ ಕಡಿಮೆ ಮನೆ ಇರಬೇಕು. ಭಾರತದಲ್ಲಿ ಶೇ. 95 ರಷ್ಟು ಕುಟುಂಬಗಳಿಗೆ ವಾರ್ಷಿಕ ರೂ. 8 ಲಕ್ಷಕ್ಕಿಂತ ಕಡಿಮೆ ಆದಾಯ ಇದೆ. ಶೇ. 86 ರಷ್ಟು ಕುಟುಂಬಗಳು 5 ಎಕರೆಗಿಂತ ಕಡಿಮೆ ಜಮೀನು ಹೊಂದಿವೆ. ಶೇ. 80 ರಷ್ಟು ಕುಟುಂಬಗಳು 1000 ಚದರಡಿಗಿಂತ ಕಡಿಮೆ ಅಳತೆಯ ಮನೆಗಳನ್ನು ಹೊಂದಿವೆ. ಈ ಮಾನದಂಡಗಳ ಪ್ರಕಾರ ಶೇ. 90ರಷ್ಟು ಮೇಲ್ಜಾತಿಯ ಜನರು ಶೇ. 10ರ ಮೀಸಲಾತಿಗೆ ಒಳಪಡುತ್ತಾರೆ. ಶೇ. 10 ಮೀಸಲಾತಿ ಪಡೆಯಲು ಸ್ಪರ್ಧೆ ಹೆಚ್ಚುತ್ತದೆ ವಿನಃ ನಿಜವಾದ ಬಡವರಿಗೆ ಇದರ ಸೌಲಭ್ಯ ಸಿಗಲಾರದು. ಸಾಮಾಜಿಕ ನ್ಯಾಯವನ್ನು ನಮ್ಮ ಸಂವಿಧಾನದ ಪೀಠಿಕೆಯಲ್ಲಿ ಪ್ರಸ್ತಾಪಿಸಲಾಗಿದೆ.

ಇ.ಡಬ್ಲ್ಯೂ.ಎಸ್ ಬಗೆಗಿನ ಸುಪ್ರೀಂ ಕೋರ್ಟ್ ಪೀಠದ ಬಹುಮತದ ತೀರ್ಪಿನ ಕುರಿತ ಪ್ರಶ್ನೆಗೆ ಉತ್ತರ ನೀಡಿದ ನ್ಯಾ. ನಾಗಮೋಹನದಾಸ್ ಅವರು ‘ಅಸಂತೋಷ ತೀರ್ಪು, ತೃಪ್ತಿಕರವಾದ ತೀರ್ಪು ಅಲ್ಲ ಎಂದಷ್ಟೇ ಹೇಳಬಯಸುತ್ತೇನೆ’ ಎಂದರು.

ಪ್ರವರ್ಗ 2ಎ ಮತ್ತು 2ಬಿ ಜೊತೆಗೆ 2ಸಿ ಮತ್ತು 2ಡಿ ಸೃಷ್ಟಿ:

ಹಿಂದುಳಿದ ವರ್ಗದ ಮೀಸಲಾತಿ ವಿಭಾಗವಾದ ಪ್ರವರ್ಗ 2ರಲ್ಲಿ ಈಗ ಇರುವ 2ಎ, 2ಬಿ ಜೊತೆಗೆ 2ಸಿ ಮತ್ತು 2ಡಿ ಸೇರಿಸುವ ನಿರ್ಧಾರವನ್ನು ರಾಜ್ಯದ ಸಚಿವ ಸಂಪುಟ ತೆಗೆದುಕೊಂಡಿದೆ. ಪ್ರವರ್ಗ 3ಎ ದಲ್ಲಿ ಇರುವ ಒಕ್ಕಲಿಗ ಮತ್ತು ಇತರೆ ಕೆಲ ಜಾತಿಗಳನ್ನು ಪ್ರವರ್ಗ 2ಸಿ ಗೆ ಮತ್ತು ಪ್ರವರ್ಗ 3ಡಿ ಯಲ್ಲಿ ಇರುವ ಪಂಚಮಸಾಲಿ



ಲಿಂಗಾಯತರು ಮತ್ತು ಕೆಲ ಜಾತಿಯವರನ್ನು 2ಡಿ ಗೆ ಸೇರಿಸಲು ಸಚಿವ ಸಂಪುಟ ತೀರ್ಮಾನಿಸಿದೆ. ಈ ಜಾತಿಗಳಿಗೆ ಸಾರ್ವಜನಿಕ ಉದ್ಯೋಗ ಮತ್ತು ಶಿಕ್ಷಣದಲ್ಲಿ ಮಾತ್ರ ಈ ಮೀಸಲಾತಿ ಅನ್ವಯವಾಗುತ್ತದೆ. ಈ ಮೀಸಲಾತಿಯ ಬಗ್ಗೆ ಸರ್ಕಾರದ ಹೇಳಿಕೆಯಲ್ಲಿ ಸ್ಪಷ್ಟತೆಯಿಲ್ಲ ಸರ್ಕಾರ ಸರಿಯಾದ ಮಾನದಂಡ ಮತ್ತು ನಿಯಮ ರೂಪಿಸಿ, ಯಾರು ಎಲ್ಲಿ ನಿಲ್ಲಬೇಕು, ಯಾವ ಕೆಟಗಿರಿಯಲ್ಲಿ ನಿಲ್ಲಬೇಕು ಎಂಬುದನ್ನು ತಿಳಿಸಿದರೆ ಉತ್ತಮ. ಇವ್ಯಾವನ್ನೂ ಮಾಡದೆ ಅಂಕಿ ಸಂಖ್ಯೆಗಳ ಬದಲಾವಣೆಯಿಂದ ಮೀಸಲಾತಿ ನೀಡುವ ಹೇಳಿಕೆ ಸರಿಯಲ್ಲ ಎಂಬ ಅಭಿಪ್ರಾಯ ದುಂಡುಮೇಜಿನ ಚರ್ಚೆಯ ಸಂಧರ್ಭದಲ್ಲಿ ವ್ಯಕ್ತವಾಯಿತು.

ರಾಜ್ಯ ಸರ್ಕಾರಕ್ಕೆ ಅಧಿಕಾರವೇ ಇಲ್ಲ:

ಪ್ರವರ್ಗ 3ಎ ಮತ್ತು 3ಬಿ ಇವುಗಳನ್ನು ಉಳಿಸಿಕೊಳ್ಳಲಾಗಿದೆಯೇ ಅಥವಾ ಅದನ್ನು ಅಳಿಸಿಹಾಕಲಾಗಿದೆಯೇ? ಉಳಿಸಿಕೊಂಡಿದ್ದರೆ ಯಾವ ಜಾತಿಗಳು ಅವುಗಳಲ್ಲಿವೆ ಎಂಬ ಸ್ಪಷ್ಟತೆ ಇಲ್ಲ. ಮತ್ತು ಯಾವ ಆಧಾರದ ಮೇಲೆ ಕೆಲ ಜಾತಿಗಳನ್ನು ಹಿಂದುಳಿದ ವರ್ಗಕ್ಕೆ ಮೀಸಲಿರುವ ಪ್ರವರ್ಗಕ್ಕೆ ಸೇರಿಸಲಾಗಿದೆ ಎಂಬ ಸ್ಪಷ್ಟತೆಯೂ ಇಲ್ಲ. ಇದಕ್ಕಾಗಿ ಜನಸಮುದಾಯಗಳ ನಡುವೆ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ ನಡೆಸಲಾಗಿಲ್ಲ. ಈ ಕುರಿತಂತೆ ಮಾತನಾಡಿದ ಮಾನ್ಯ ನ್ಯಾಯಾಧೀಶರಾದ ನಾಗಮೋಹನದಾಸ್ ಅವರು ಈ ರೀತಿ ಮಾಡಲು ರಾಜ್ಯ ಸರ್ಕಾರಕ್ಕೆ ಸಾಧ್ಯವಿಲ್ಲ ಎನ್ನುತ್ತಾರೆ. ಇದಲ್ಲದೆ, ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ (ಇಡಬ್ಲ್ಯೂಎಸ್) ಕೊಡಮಾಡಿರುವ ಶೇ. 10ರಲ್ಲಿ 7ನ್ನು ಇತರ ಜಾತಿ ಸಮುದಾಯಗಳಿಗೆ ಕೊಡುವುದು ಸಾಧ್ಯವಿಲ್ಲ. ಈಗಾಗಲೇ ಮೀಸಲಾತಿಗೆ ಒಳಪಟ್ಟಿರುವ ಸಮುದಾಯಗಳಿಗೆ ಇದನ್ನು ಹಂಚಲಾಗದು ಸಾಮಾನ್ಯ ಎನ್ನುತ್ತಾರೆ ಅವರು. ಒಕ್ಕಲಿಗ, ಲಿಂಗಾಯತ ಸಮುದಾಯಗಳನ್ನು ಹಿಂದುಳಿದ ವರ್ಗಕ್ಕೆ ಸೇರ್ಪಡೆ ಮಾಡುವ ಅಧಿಕಾರ ರಾಜ್ಯ ಸರ್ಕಾರಗಳಿಗೆ ಇದೆ. ಆದರೆ ಅದನ್ನು ಮಾಡುವಾಗಲೂ ಯಾವ ಮಾನದಂಡದ ಆಧಾರದಲ್ಲಿ ಮಾಡಲಾಗಿದೆ ಎಂಬುದನ್ನು ಸ್ಪಷ್ಟಪಡಿಸಬೇಕಾಗುತ್ತದೆ. ಇದನ್ನು ಸಂವಿಧಾನದ 9ನೇ ಷೆಡ್ಯೂಲ್ ನಲ್ಲಿ ಸೇರಿಸಬೇಕು. ಇದಕ್ಕೆ ಸಂಸತ್ತಿನ ಒಪ್ಪಿಗೆ ಪಡೆಯಬೇಕು. ಇದು ದೀರ್ಘ ಸಮಯ ತೆಗೆದುಕೊಳ್ಳುತ್ತದೆ. 9ನೇ ಷೆಡ್ಯೂಲ್ ಸೇರಿಸಿದರೂ ನ್ಯಾಯಾಯಲದ ವಿಮರ್ಶೆಗೆ ಒಳಪಡಿಸಬಹುದು. ಮೀಸಲಾತಿ ಸಂಖ್ಯೆಗೆ ಸಂವಿಧಾನದಲ್ಲಿ ಗರಿಷ್ಠ ಮಿತಿ ವಿಧಿಸಿಲ್ಲ.



ಮಹಿಳೆಯರಿಗೆ ಮೀಸಲಾತಿ?

ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇ.50ರಷ್ಟಿರುವ ಮಹಿಳೆಯರಿಗೆ ಪ್ರತ್ಯೇಕ ಮೀಸಲಾತಿ ಏಕಿಲ್ಲ ಎಂಬ ಪ್ರಶ್ನೆಯೂ ಸಭೆಯಲ್ಲಿ ಕೇಳಿಬಂತು. ಮಹಿಳೆಯರಿಗೆ ಒಂದಷ್ಟು ರಾಜಕೀಯ ಮೀಸಲಾತಿ ಕೊಡಲಾಗಿದೆ. ಪಂಚಾಯಿತಿ ಮಟ್ಟದಲ್ಲಿ ಶೇ 50 ಮೀಸಲು ಕೊಡಲಾಗಿದೆ. ಉಳಿದಂತೆ ಯಾವ ಕ್ಷೇತ್ರಗಳಲ್ಲೂ ಮಹಿಳೆಯರಿಗೆ ಪ್ರತ್ಯೇಕ ಮೀಸಲಾತಿ ಎಂಬುದಿಲ್ಲ.

ನ್ಯಾಯಾಧೀಶರಲ್ಲಿ ಯಾವ ಯಾವ ಸಮುದಾಯಕ್ಕೆ ಸೇರಿದವರು ಎಷ್ಟೆಷ್ಟಿದ್ದಾರೆ ಎಂಬ ಸಮೀಕ್ಷೆಯ ವರದಿಯೊಂದು ಇತ್ತೀಚೆಗೆ ಪ್ರಕಟವಾಗಿದೆ. ಅದರಲ್ಲಿ ಮಹಿಳಾ ನ್ಯಾಯಾಧೀಶರ ಮಾಹಿತಿಯೇ ಇಲ್ಲ. ಎಸ್.ಸಿ., ಎಸ್.ಟಿ. ಮಹಿಳೆಯರು ಇದ್ದಾರಾ ಎಂಬುದೂ ಒಂದು ಪ್ರಶ್ನೆ. ಮಹಿಳೆಯರಿಗೂ ಎಲ್ಲಾ ಕ್ಷೇತ್ರಗಳಲ್ಲಿ ಆದ್ಯತೆ ಮೇಲೆ ಅವಕಾಶ ಕೊಡಬೇಕು.

ಸಮುದಾಯಗಳು ಎದುರಿಸುತ್ತಿರುವ ಬಿಕ್ಕಟ್ಟುಗಳು:

‘ಮೀಸಲಾತಿ ಸಮುದಾಯಗಳು ಎದುರಿಸುತ್ತಿರುವ ಬಿಕ್ಕಟ್ಟುಗಳಿಗೆ ಪರಿಹಾರವೇ?’ ಎಂಬ ವಿಷಯದ ಕಡೆಗೆ ತಿರುಗಿತು. ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ ಪ್ರೊ. ಬಾಬು ಮ್ಯಾಥ್ಯೂ ಅವರು ಇಂತಹ ಪ್ರಯತ್ನ ಮಾಡಿದರು. ಸೋವಿಯತ್ ಒಕ್ಕೂಟದ ವಿಸ್ತಾರವಾದ ಆರ್ಥಿಕ ಬೆಳವಣಿಗೆ ಬಗ್ಗೆ ವಿವರಿಸಿದ ಅವರು

“ಸಮಾಜವಾದಿ ವ್ಯವಸ್ಥೆಯ ಸೋವಿಯತ್ ಒಕ್ಕೂಟದಲ್ಲಿ ಸಮಾನವಾದ ಆರ್ಥಿಕ ಬೆಳವಣಿಗೆ ಇತ್ತು. ಸಾಮಾಜಿಕವಾಗಿ ಸಮಾನತೆ ಇತ್ತು. ಅಲ್ಲಿ ನಿರುದ್ಯೋಗ ಸಮಸ್ಯೆ ಇರಲಿಲ್ಲ. ಎಲ್ಲರಿಗೂ ಉಚಿತ ಶಿಕ್ಷಣ ನೀಡಲಾಗುತ್ತಿತ್ತು. ಹಸಿವು ಬಡತನ ಎಂಬುದಿರಲಿಲ್ಲ. ಇಂತಹ ಸಮಾಜದಲ್ಲಿ ಸಮುದಾಯಗಳಿಗೆ ಮೀಸಲಾತಿ ಅಗತ್ಯ ಬರುವುದಿಲ್ಲ. ನಮ್ಮ ದೇಶದಲ್ಲೂ ಶೇ ಒಂದರಷ್ಟಿರುವ ಸಿರಿವಂತರಿಗೆ ಶೇ. 2ರಷ್ಟು ಸಂಪತ್ತು ತೆರಿಗೆ ವಿಧಿಸಿದರೆ, ದೊಡ್ಡ ಉದ್ಯಮಿಗಳಿಗೆ ಮನ್ನಾ ಮಾಡಿರುವ 10 ಲಕ್ಷ ಕೋಟಿ ರೂ.ಗಳ ಸಾಲ ವಸೂಲಿ ಮಾಡಿದರೆ, ಕಾರ್ಪೊರೇಟ್ ಕುಳಗಳಿಗೆ ಕೊಡುತ್ತಿರುವ ರಿಯಾಯಿತಿಗಳನ್ನು ಹಿಂಪಡೆದರೆ ಸಾಕಷ್ಟು ಸಂಪನ್ಮೂಲ ಸಂಗ್ರಹವಾಗುತ್ತದೆ. ಇದರಿಂದ ಎಲ್ಲರಿಗೂ ಉಚಿತ ಶಿಕ್ಷಣ ಕೊಡಬಹುದು, ಸಾರ್ವಜನಿಕ ಕ್ಷೇತ್ರಗಳಲ್ಲಿ ಉದ್ಯೋಗ ಸೃಷ್ಟಿ ಮಾಡಬಹುದು. ವಿಶ್ವದ ಮೂರು ಸಂಸ್ಥೆಗಳಾದ ವಿಶ್ವ ಹಣಕಾಸು ಸಂಸ್ಥೆ(IMF), ವಿಶ್ವ ಬ್ಯಾಂಕ್, ವಿಶ್ವ ವಾಣಿಜ್ಯ ಸಂಸ್ಥೆ(WTO) ಭಾರತದ ಮೇಲೆ ಹಿಡಿತ ಸಾಧಿಸಿವೆ. ಭಾರತದ ಆಡಳಿತ ಅಂಬಾನಿ, ಅದಾನಿ, ಗುತ್ತೇದಾರಿ ಬಂಡವಾಳಗಾರರ ಕೈಯಲ್ಲಿದೆ. ನಮ್ಮ ಸಂವಿಧಾನದ ಅಡಿಪಾಯ ಕುಸಿದಿದೆ. ಶಿಕ್ಷಣ ಖಾಸಗಿಯವರ ಪಾಲಾಗುವ ಮೂಲಕ ಜನಸಾಮಾನ್ಯರ ಕೈಗೆಟುದಷ್ಟು ದುಬಾರಿಯಾಗಿದೆ. ಉದ್ಯೋಗ ಸೃಷ್ಟಿ. ನಿರುದ್ಯೋಗ ಸಮಸ್ಯೆ ತೀವ್ರಗೊಂಡಿದೆ ” ಎಂದು ಹೇಳುತ್ತ ಜನಸಮುದಾಯ ಎದುರಿಸುತ್ತಿರುವ ಬಿಕ್ಕಟ್ಟುಗಳಿಗೆ ಕಾರಣ ಮತ್ತು ಇದಕ್ಕೆ ಪರಿಹಾರ ಪುಟ 10 ಕ್ಕೆ



ಅಮಿತ್ ಷಾ ಮಂಡ್ಯ ಭೇಟಿ: ಉರಿ ಹಚ್ಚಲು ತಂದ ಕೊಳ್ಳಿ ಮತ್ತು ನಂದಿನಿಯ ಕುತ್ತಿಗೆಯ ಮೇಲೆ ಝಳಪಿಸಿದ ಕತ್ತಿ

ಟಿ.ಎಲ್.ಕೃಷ್ಣೇಗೌಡ

ಕೇಂದ್ರ ಗೃಹ ಸಚಿವ, ಮೋದಿ ಮಂತ್ರಿಮಂಡಲದ ನಂಬರ್ 2 ಅಮಿತ್ ಷಾ ಮಂಡ್ಯಕ್ಕೆ ಬಂದರು – ಹೋದರು. ಅಮಿತ್ ಷಾ ರ್ಯಾಲಿಗೆ ಜನ ಸೇರಿಸಲು ಇಡೀ ದಕ್ಷಿಣ ಕರ್ನಾಟಕದ ಬಿಜೆಪಿ ಮತ್ತು ಅರ್ಧ ಮಂತ್ರಿಮಂಡಲ ಕೆಲಸ ಮಾಡಿತ್ತು. ಆದರೂ ಮೈದಾನ ತುಂಬಿಸಲು ವಿಫಲವಾದ ಬಿಜೆಪಿ, ರ್ಯಾಲಿಗೆ ಬಂದವರಿಗೆ ಬಡಿಸಲು ತಯಾರಿಸಿದ್ದ ಟನ್ ಗಟ್ಟಲೆ ಆಹಾರವನ್ನು ಮಾರನೆಗೆ ಗುಂಡಿ ತೋಡಿ ಮುಚ್ಚಿ ಹಾಕಿದ್ದು ಉಣ್ಣಲು ಜನ ಬರಲಿಲ್ಲ ಎಂಬುದನ್ನು ಮಾತ್ರ ತೋರಿಸಲಿಲ್ಲ, ಬದಲಾಗಿ ಮಂಡ್ಯ ಜಿಲ್ಲೆಯಲ್ಲಿ ಬಿಜೆಪಿಯನ್ನೇ ರಾಜಕೀಯವಾಗಿ ಜನ ಸ್ವೀಕರಿಸಲು ತುದಿಗಾಲ ಮೇಲೆ ನಿಂತಿಲ್ಲ ಎಂಬಂತೆ ಕಾಣುತಿತ್ತು.

ಸರ್ವಾಧಿಕಾರಿಯ ಎದುರಿನಲ್ಲಿ ಸಂವಿಧಾನವನ್ನು ಉಳಿಸಿಕೊಂಡರು

ಅಮಿತ್ ಷಾಗೆ ದಾರಿ ಸುಗಮಗೊಳಿಸಲೆಂದೇ 2022 ಡಿಸೆಂಬರ್ 29 ರಂದು ರೈತರು ಧರಣಿ ನಡೆಸುತ್ತಿದ್ದ ಪೆಂಡಾಲನ್ನು ಪೊಲೀಸರು ಕಿತ್ತೆಸೆದಿದ್ದರು. ಆದರೆ ಮಂಡ್ಯದ ಮಣ್ಣಿನ ಗುಣ ಮತ್ತು ಜನಪರ ಚಳವಳಿಗಳು ಅಮಿತ್ ಷಾ – ಪೊಲೀಸರ ಆಟ ನಡೆಯಲು ಬಿಡಲಿಲ್ಲ. ಮೈಸೂರು – ಬೆಂಗಳೂರು ಮುಖ್ಯ ರಸ್ತೆಯಲ್ಲಿ, ಅಮಿತ್ ಷಾ ಬಹಿರಂಗ ಸಭೆ ನಡೆಯುವ ಕೇವಲ 250 ಮೀಟರ್ ದೂರದಲ್ಲಿ ಧರಣಿ ನಡೆಸುತ್ತಿದ್ದ ರೈತರ ಪೆಂಡಾಲನ್ನು ಕ್ಷುಲ್ಲಕ ಕಾರಣ ನೀಡಿ ಪೊಲೀಸರು ಕಿತ್ತೆಸೆದು ಅಲ್ಲಿನ ವಸ್ತುಗಳನ್ನೆಲ್ಲಾ ತುಂಬಿಕೊಂಡು ಹೋಗಿ ಕೆಲವು ರೈತ ಮುಖಂಡರನ್ನು ಬಂಧಿಸಿದ್ದರು. ವಿಷಯ ತಿಳಿದ ಎಡ ಸಂಘಟನೆಗಳು ಮತ್ತು ರೈತ ಸಂಘ ಜೊತೆಗೂಡಿ ಪೊಲೀಸ್ ಪೆರೇಡ್ ಮೈದಾನದಲ್ಲೇ ಧರಣಿ ಸತ್ಯಾಗ್ರಹ ಆರಂಭಿಸಿ, ನಾಳೆ ಅಂದರೆ ಡಿಸೆಂಬರ್ 30 ರಂದು ಜಿಲ್ಲಾದ್ಯಂತ ಪ್ರತಿಭಟಿಸಲು ಕರೆ ನೀಡಲಾಯಿತು. ಈ ಪ್ರತಿಭಟನೆ ವ್ಯಾಪಕವಾಗುವ ಆ ಮೂಲಕ ಅಮಿತ್ ಷಾ ಸಭೆಯೇ ಅಸ್ತವ್ಯಸ್ತವಾಗುವ ಸತ್ಯವನ್ನು ಮನಗಂಡ ರಾಜ್ಯ ಸರ್ಕಾರ ಮತ್ತು ಪೊಲೀಸರು ಯಾವ ಸ್ಥಳದಿಂದ ಪೆಂಡಾಲನ್ನು ತೆರವುಗೊಳಿಸಿದ್ದರೋ ಅದೇ ಸ್ಥಳದಲ್ಲಿ ರಾತ್ರಿಯೇ ಪೆಂಡಾಲನ್ನು ಹಾಕಿಸುವುದಾಗಿ ವಾಗ್ದಾನ ಮಾಡಿದರು. ಅದರಂತೆ ರಾತ್ರಿ ಎಂಟು ಗಂಟೆಗೆಲ್ಲ ಪೆಂಡಾಲನ್ನು ಹಾಕಿಸಿದರು. 'ಸರ್ವಾಧಿಕಾರಿ'ಯ ಭಾಷಣಕ್ಕೆ ಸಂವಿಧಾನದ ಆಶಯಗಳನ್ನು, ನೀಡಿದ ಹಕ್ಕುಗಳನ್ನು ತುಳಿಯಲು ಯತ್ನಿಸಿದ ಪ್ರಭುತ್ವದ ವಿರುದ್ಧ ಮಂಡ್ಯದ ಜನ 'ಸರ್ವಾಧಿಕಾರಿಯ ಎದುರಿನಲ್ಲಿ ಸಂವಿಧಾನವನ್ನು ಉಳಿಸಿಕೊಂಡರು'. ಧರಣಿ ಡಿಸೆಂಬರ್ 30 ರಂದೂ ಮುಂದುವರಿಯಿತು.

ಮಾರ್ಗ ಬದಲಾಯಿಸಿದ ಗೃಹ ಸಚಿವ

ಮಂಡ್ಯಕ್ಕೆ ಪ್ರವೇಶ ಮಾಡಿ ಮೈಷುಗರ್ ವೃತ್ತದಿಂದ ಬಹಿರಂಗ ಸಭೆಯ ಸ್ಥಳದ ವರೆಗೂ ಅಮಿತ್ ಷಾ ರವರನ್ನು ರೋಡ್ ಷೋ ಮೂಲಕ ಕರೆತಂದು ಭಾಷಣ ಮಾಡಿಸುವ ಉದ್ದೇಶ ಬಿಜೆಪಿಯದ್ದಾಗಿತ್ತು. ಆದರೆ ಮುಖ್ಯ ರಸ್ತೆಯಲ್ಲೇ ರೈತರ ಧರಣಿ ಮುಂದುವರಿದ ಪರಿಣಾಮವಾಗಿ, ಅದರಲ್ಲೂ ಸಾವಿರಾರು ಜನರು ಪಾಲ್ಗೊಳ್ಳುವ ಕಾರಣ ಅಮಿತ್ ಷಾ ಕೂಡಾ ಪ್ರತಿಭಟನೆಯ ಬಿಸಿ ಎದುರಿಸಬೇಕಾಗಬಹುದು ಎಂಬ ಭಯದಲ್ಲಿ ರೋಡ್ ಷೋ ಕೈಬಿಟ್ಟ ಬಿಜೆಪಿ ಅಮಿತ್ ಷಾ ಅವರನ್ನು ಹಿಂಬಾಗಿಲಿನಿಂದ, ಅಂದರೆ ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜು ಆವರಣಕ್ಕೆ ಹೆಲಿಕಾಪ್ಟರ್ ಮೂಲಕ, ಕರೆ ತಂದು ಅಲ್ಲಿಂದ 200 ಮೀಟರ್ ದೂರ ಇರುವ ಬಹಿರಂಗ ಸಭೆಯಲ್ಲಿ ಭಾಷಣ ಮಾಡಿಸಿತು!

ಸಭೆಗೆ ಬಂದವರಾದರೂ ಯಾರು?

ಸಭೆಯಲ್ಲಿ ಭಾಗವಹಿಸಿದ ಅಷ್ಟೂ ಜನರು ರೈತರ ಪ್ರತಿಭಟನೆಯನ್ನು ಹಾದೇ ಹೋದರು. ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಟಿ. ಎಲ್.ಕೃಷ್ಣೇಗೌಡ, ಟಿ. ಯಶವಂತ, ಸಿ. ಕುಮಾರಿ, ಎಂ.ಪುಟ್ಟಮಾದು ಬಿಜೆಪಿ ಸರ್ಕಾರದ ಜನ ವಿರೋಧಿ, ದೇಶ ವಿರೋಧಿ ಕೃತ್ಯಗಳನ್ನು, ನೀತಿಗಳನ್ನು ಎಳೆ ಎಳೆಯಾಗಿ ಬಿಡಿಸಿ ವಿವರಿಸುತ್ತಿದ್ದರೆ ಅದನ್ನೆಲ್ಲಾ ಕೇಳಿಸಿಕೊಂಡು, ನಿಂತು ನಮಗೆ ಒಳ್ಳೆಯದನ್ನು ಹಾರೈಸಿ ಕೊಟ್ಟ ಕೂಲಿಗೆ ಮೋಸ ಮಾಡಬಾರದೆಂದು ಅಮಿತ್ ಷಾ ಸಭೆಗೆ ಮುಖ ತೋರಿಸಲು ಹೋಗುತ್ತಿದ್ದರು. ಮುಖ ತೋರಿದಷ್ಟೇ ಬೇಗ ವಾಪಸ್ಸು ಬಂದು ತಮ್ಮ ಊರುಗಳ ದಾರಿ ಹಿಡಿದರು. ಬಂದವರಲ್ಲೂ ಹೆಚ್ಚಿನ ಜನ ಪಕ್ಕದ ಚನ್ನಪಟ್ಟಣ, ಮೈಸೂರು ಜಿಲ್ಲೆಯವರು, ಅದರಲ್ಲೂ ವಯಸ್ಸಾದ ಹಿರಿಯರು ಅಬಲರು, ಅದರಲ್ಲಿ ಕೆಲವರು ರಾಜಕೀಯವಾಗಿ ತಮ್ಮ ಓಟನ್ನೂ ಹಾಕಿಕೊಳ್ಳಲಾರದು ಅಸಹಾಯಕರು. ರಾಮನಗರ, ಚನ್ನಪಟ್ಟಣ ಮತ್ತು ಮೈಸೂರು ಜಿಲ್ಲೆಯಿಂದ ನೂರಾರು ಬಸ್ಸುಗಳನ್ನು ವ್ಯವಸ್ಥೆ ಮಾಡಿದ್ದ ಬಿಜೆಪಿ ಅಮಿತ್ ಷಾ ಅವರನ್ನು ಮೆಚ್ಚಿಸಲು ಮತ್ತು ಉನ್ಮಾದದ ಅಲೆಯೆಬ್ಬಿಸಲು ಸಕಲ ರೀತಿಯಲ್ಲಿ ಪ್ರಯತ್ನ ನಡೆಸಿತ್ತು. ಆದರೆ ಬಂದವರು ಮಾತ್ರ ತಣ್ಣಗೆ ಬಂದು ಉಂಡು, ಕೂಲಿ ಪಡೆದು ತಣ್ಣಗೆ ಹೋದರು.

ಭಾಷಣ ಆರಂಭಿಸಿದ ಅಮಿತ್ ಷಾ "ಭಾರತ್ ಮಾತಾಕಿ ಜೈ" ಅಂದರು.. ಜನ ಮೌನವಾದರು. 'ಮಂಡ್ಯದ ಜನಕ್ಕೆ ತಾಕತ್ತಿಲ್ವೆ ಜೋರಾಗಿ ಕೂಗಿ' ಎಂದರು. ಬಹುತೇಕ ಜನ ತುಟಿ ಬಿಚ್ಚಲಿಲ್ಲ... ದಾರಿ ತಿಳಿಯದ ಷಾ ಭಾಷಣ ಮುಂದುವರೆಸಿ ಭಾಷಾಂತರವೂ ಸೇರಿ 26 ನಿಮಿಷ ಮಾತನಾಡಿದರು. ಮಾತನಾಡುತ್ತಾ "ಅಯೋಧ್ಯೆಯಲ್ಲಿ ಶ್ರೀರಾಮನಿಗೆ ಮಂದಿರ ಕಟ್ಟಿದ ಬಿಜೆಪಿಗೆ ಬೆಂಬಲಿಸಬೇಕು" ಎಂದು ಮನವಿ ಮಾಡಿದರು. ಮಂಡ್ಯದ ಜನ ಮಾತ್ರ 'ನಾವು ದೇವರನ್ನು ನಂಬಿ ಬದುಕುತ್ತಿಲ್ಲ, ಬೆವರನ್ನು ನಂಬಿ ಬದುಕುತ್ತಿದ್ದೇವೆ. ನಿಮ್ಮ ಭಾಷಣದಲ್ಲಿ ನ´ ವ´ ೨ ಬೆವರಿಗೇನಾದರೂ ಕಿಮ್ಮತ್ತಿದೆಯೇ' ಎಂದು ಅಣಕಿಸಿ ಕೇಳುವಂತೆ ಮೌನವಹಿಸಿ ಕುಳಿತಿತ್ತು.

ನಂತರ ಮಾತನಾಡಿದ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಮೆದುಳನ್ನು ವೈಧಿಕಶಾಹಿ ಸೇವೆಗೆ ಅಡವಿಟ್ಟಿರುವ ಸಿ.ಟಿ. ರವಿ ಅಸಂಬದ್ಧವಾಗಿ ಮಾತನಾಡಿ ಟಿಪ್ಪು, ಮಸೀದಿ, ಮೂಡಲ ದಿಕ್ಕಿನ ಆಂಜನೇಯನ ಹೆಸರುಗಳನ್ನು ಬಡಬಡಾಯಿಸಿದರು. ಹಸಿ, ಹಸಿ ಸುಳ್ಳು ಇತಿಹಾಸ ಹೇಳಿ ಟಿಪ್ಪು ಹೆಸರನ್ನು ಬಳಸಿ ಮುಸ್ಲಿಂರ ವಿರುದ್ಧ ಒಕ್ಕಲಿಗರನ್ನು, ಜನರನ್ನು ಪ್ರಚೋದಿಸಲು ಪ್ರಯತ್ನಿಸಿದರು. ಬಿಜೆಪಿ ನಾಯಕರು ಎಷ್ಟೇ ಕೂಗಾಡಿದರೂ ಜನ ಮಾತ್ರ ಕೇಳಿಸದಂತೆ ಸಭೆಯಿಂದ ಎದ್ದು ಹೋದರು.

ಕರ್ನಾಟಕದ ಹೆಮ್ಮೆಯ ನಂದಿನಿಯನ್ನು ನಾಶ ಮಾಡುವ ಷಾ ಮಾತುಗಳು

ಮಂಡ್ಯದ ಸಭೆಗೂ ಮುನ್ನ ಮದ್ದೂರು ಸಮೀಪದ ಗೆಜ್ಜಲಗೆರೆಯಲ್ಲಿ ಮಂಡ್ಯ ಹಾಲು ಒಕ್ಕೂಟ(ಮನ್ಮುಲ್)ದ ಮೆಗಾ ಡೇರಿ ಉದ್ಘಾಟಿಸಿ ಮಾತನಾಡಿದ ಕೇಂದ್ರದ ಸಹಕಾರ ಸಚಿವರೂ ಆದ ಅಮಿತ್ ಷಾ ಕರ್ನಾಟಕ ಹೆಮ್ಮೆಯ ಕೆ.ಎಂ. ಎಫ್. ನಂದಿನಿಯನ್ನು ಗುಜರಾತಿನ ಅಮುಲ್ ಜೊತೆ ಸೇರಿಸಿ ಒಂದೇ ಬ್ರಾಂಡ್ ಮಾಡುವ ಮಾತನಾಡಿದರು. ಈ ಪ್ರಸ್ತಾಪದ ದೂರಗಾಮಿ ಉದ್ದೇಶ ಮತ್ತು ಸಂಚುಗಳ ಬಗ್ಗೆ, ಒಕ್ಕೂಟ ತತ್ವದ ಮೇಲೆ ನಡೆಸುತ್ತಿರುವ ದಾಳಿಗಳ ಬಗ್ಗೆ ನಂತರ ಮಾತನಾಡಬಹುದು. ಆದರೆ ಅಮಿತ್ ಷಾ ಈ ಮಾತುಗಳನ್ನು ಹೇಳುತ್ತಿದ್ದಂತೆ ಜಿಲ್ಲೆಯಲ್ಲಿ ಬಿಜೆಪಿ ವಿರುದ್ಧದ ಹೊಸ ಬೆಂಕಿಯೊಂದು ಹೊತ್ತಿಕೊಂಡಿತು. ಪ್ರತಿ ಮನೆಯೂ ಹಾಲಿನ ಡೇರಿಯಾಗಿರುವ ಮಂಡ್ಯ ಜಿಲ್ಲೆಯಲ್ಲಿ ನಮ್ಮ ಹೆಮ್ಮೆಯ ನಂದಿನಿಯನ್ನು ಗುಜರಾತಿನ ಅಮುಲ್‌ಗೆ ಕೂಡುವಳಿ ಮಾಡುತ್ತೇನೆ ಎಂಬ ಅಮಿತ್ ಷಾ ಮಾತು ಸಾಮಾಜಿಕ ಜಾಲತಾಣಗಳು, ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿದ್ದಂತೆ ವ್ಯಾಪಕ ಚರ್ಚೆ ಆರಂಭವಾಯಿತು. ಟಿಪ್ಪು, ದೇವಸ್ಥಾನ ಹಿಂದೂ ಮುಸ್ಲಿಂ ಎಂದು ಆರ್ಭಟಿಸಿ ದಾಳಿ ನಡೆಸಲು ಬಂದಿದ್ದ ಬಿಜೆಪಿ, ತನ್ನ ರಕ್ಷಣೆಗಾಗಿ ಬಾಲ ಮುದುರಿಕೊಂಡು ಅಮಿತ್ ಷಾ ಹಾಗೆ ಹೇಳಿಲ್ಲ, ಹೀಗೆ ಹೇಳಿಲ್ಲ ಎಂದು ಸಮರ್ಥನೆ ಮಾಡಿಕೊಂಡು ಒದ್ದಾಡುವಂತೆ ಮಾಡಿತು.

ಸಧ್ಯಕ್ಕೆ ಮಂಡ್ಯ ಜಿಲ್ಲೆಗೆ ಹಚ್ಚಲು ತಂದ ಬೆಂಕಿಯ ಕೊಳ್ಳಿಯನ್ನು ಅಮಿತ್ ಷಾ ರವರು ನಂದಿನಿ ಹಾಲಿನಲ್ಲಿ ಮುಳುಗಿಸಿ ಇದ್ದಿಲು ಮಾಡಿದ್ದಾರೆ. ಇದ್ದಿಲಿನ ಮಸಿ ಅಷ್ಟು ಸುಲಭವಾಗಿ ಅಳಿಸಿ ಹೋಗದು...

ಆದರೆ ಹೊಸ ಕೊಳ್ಳಿಗಳಿಗೇನು ಬಿಜೆಪಿಗೆ ಬರವೆ??

ಋಷಿ ಜಮದಗ್ನಿಯ ಮನೆಯಲ್ಲಿದ್ದ 'ಕಾಮಧೇನು ನಂದಿನಿ' ನೀಡುತ್ತಿದ್ದ ಸಂಪತ್ತನ್ನು ಕಂಡು ಅರಸ ಕಾರ್ತವೀರ್ಯಾರ್ಜುನ ಅದನ್ನು ಅಪಹರಿಸಲು ಸಂಚು ಮಾಡಿದ. ಅದನ್ನು ತಡೆಯಲು ಹೋದ ಜಮದಗ್ನಿ ತನ್ನ ಪ್ರಾಣವನ್ನೇ ತೆರಬೇಕಾಯ್ತು. ಈ ಜಮದಗ್ನಿಯ ಹೆಂಡತಿ ರೇಣುಕೆ ನಮ್ಮ ಕನ್ನಡತಿ. ಸವದತ್ತಿಯ ಯಲ್ಲಮ್ಮ ತಾಯಿ. ಅವಳ ಮಗ ಪರಶುರಾಮ ಹಸುವಿನ ಕಾರಣಕ್ಕೆ ಮೋಸ ಮಾಡಿದ ಮತ್ತು ತನ್ನ ತಂದೆಯನ್ನು ಕೊಂದ ಕಾರ್ತವೀರ್ಯಾರ್ಜುನನನ್ನು ಮಾತ್ರವಲ್ಲ, ಅವನ ಕುಲವನ್ನೇ ನಾಶ ಮಾಡಲು 21 ಸಲ ಇಡೀ ಭೂಮಂಡಲ ತಿರುಗಿದ್ದನಂತೆ.

ದುರಂತ ನೋಡಿ! ಈಗ ನಮ್ಮ ಕನ್ನಡದ ನಂದಿನಿಯನ್ನು ಹಾಡುಹಗಲೇ ಉತ್ತರದ ಭೂಪ ಅಪಹರಿಸಲು ಹೊರಟಿದ್ದಾನೆ. ಯಲ್ಲಮ್ಮ ತಾಯಿಯ ಕನ್ನಡ ನೆಲದ ಮಕ್ಕಳು ಎಂದು ಹೇಳಿಕೊಳ್ಳುವ 'ಉತ್ತರ ಭೂಪ'ನ ಬಾಲಂಗೋಚಿಗಳು ಚೂರೂ ರೋಷವಿಲ್ಲದೆ ಚಪ್ಪಾಳೆ ತಟ್ಟಿದ್ದಾರೆ.! (ಇವರೆಲ್ಲ ಮುದಿ ಹಸುವನ್ನು ವಿಲೇವಾರಿ ಮಾಡಲು ಹೊರಟವರ ತಲೆ ಕಡಿಯಲಿಕ್ಕೇ ಲಾಯಕ್ಕು. ನಂದಿನಿಯನ್ನು ಉಳಿಸಿಕೊಳ್ಳುವ ತಾಕತ್ತು ಇವರಿಗೆ ಎಲ್ಲಿಂದ ಬರಬೇಕು!?)

– ಚೇತನಾ ತೀರ್ಥಹಳ್ಳಿ
(ಫೇಸ್ ಬುಕ್ ಬರಹದಿಂದ)

ಜನ ಉಸಿರು ಬಿಗಿ ಹಿಡಿದಂತೆ ಕಂಡರೂ ರ್ಯಾಲಿಗೆ ತಂಡೋಪ ತಂಡದಲ್ಲಿ ಬಂದಿರುವುದನ್ನೂ ನಿರ್ಲಕ್ಷಿಸುವಂತಿಲ್ಲ. ಈ ರ್ಯಾಲಿಯ ಒಂದು ಮುಖ್ಯ ಬೆಳವಣಿಗೆ ಎಂದರೆ ಮಂಡ್ಯ ಜಿಲ್ಲೆಯ ವಿವಿಧ ಪಕ್ಷಗಳಲ್ಲಿದ್ದ ನಾಲ್ಕು ಯುವ ನಾಯಕರು ಬಿಜೆಪಿ ಪಕ್ಷಕ್ಕೆ ಸೇರ್ಪಡೆಯಾದುದು. ಅವರೆಂದರೆ ಮಾಜಿ ಸಚಿವ ಎಸ್.ಡಿ.ಜಯರಾಮ್ ಅವರ ಮಗ ಅಶೋಕ ಜಯರಾಮ್, ಸಂಸದೆ ಸುಮಲತಾ ಅಂಬರೀಶ್ ಅವರ ಕಟ್ಟಾ ಬೆಂಬಲಿಗ, ಅಶೋಕ ಖೇಣಿಯವರ ಆತ್ಮೀಯ ಹಾಗೂ ಸಂಭವನೀಯ ಅಭ್ಯರ್ಥಿ ಎನ್ನಲಾಗುವ ಸಚ್ಚಿದಾನಂದ, ಪಾಂಡವಪುರದ ಇಂದ್ರೇಶ್, ಮದ್ದೂರು ತಾಲೂಕಿನ ಪಾದೊಳಲು ಸ್ವಾಮಿ ಪ್ರಮುಖರು. ಇವರು ಅಮಿತ್ ಷಾನ ಚುನಾವಣಾ ಕಾರ್ಯ ಯೋಜನೆಯಂತೆ ದಕ್ಷಿಣ ಕರ್ನಾಟಕದಲ್ಲಿ ಅದರಲ್ಲೂ ಮಂಡ್ಯ ಜಿಲ್ಲೆಯಲ್ಲಿ ಕಾಂಗ್ರೆಸ್, ಜೆಡಿ(ಎಸ್) ಇತರೆ ಪಕ್ಷಗಳ ಉತ್ತಮ ನಾಯಕರಿಗೆ ಗಾಳ ಹಾಕಬೇಕು ಎನ್ನುವ ಮಿಷನ್ 150 ರ ಫಲಿತಾಂಶವೂ ಹೌದು. ಇವರ ಬೆಂಬಲಿಗರೇ ಅತೀ ಹೆಚ್ಚಿನ ರೀತಿಯಲ್ಲಿ ಭಾಗವಹಿಸಿದ್ದರು ಎನ್ನುವುದು ನಿಜ. ಅವರು ಬಂದರು, ಹೋದರು ಎನ್ನುವಂತೆ ಕಂಡರೂ ಕೋಮುವಾದದ ವೈರಸ್‌ನಿಂದ ಬಾಧಿತರಾಗುವ ಅಪಾಯ ಇಲ್ಲದಿಲ್ಲ.

‘ಮೀಸಲಾತಿ’ ಎಂಬುದು ಸಮುದಾಯಗಳು ಎದುರಿಸುತ್ತಿರುವ ಬಿಕ್ಕಟ್ಟುಗಳಿಗೆ ಪರಿಹಾರವೇ?



ಪುಟ 8 ರಿಂದ

ಕಂಡುಕೊಳ್ಳಲು ಇರುವ ಮಾರ್ಗದ ಬಗ್ಗೆ ವಿವರಿಸಿದರು.

ಆದರೆ, ಪ್ರೊ. ಮ್ಯಾಥ್ಯೂ ಅವರು ಎತ್ತಿದ ವಿಷಯದ ಬಗ್ಗೆ ಚರ್ಚೆ ಅಷ್ಟಾಗಿ ನಡೆಯಲಿಲ್ಲ. ಮೀಸಲಾತಿ ಹಂಚಿಕೆಯನ್ನು ಹೇಗೆ ಮಾಡಬೇಕು ಎಂಬುದರ ಸುತ್ತಲೇ ಹೆಚ್ಚು ಚರ್ಚೆ ಮುಂದುವರಿಯಿತು. ಈಗ ಇರುವ ಅಲ್ಪ ಅವಕಾಶಗಳನ್ನೇ ಹಂಚಿಕೊಳ್ಳುವುದು ಹೇಗೆ ಎಂಬುದಕ್ಕಷ್ಟೇ ಚರ್ಚೆ ಸೀಮಿತವಾಗಿತ್ತು.

ನ್ಯಾಯಮೂರ್ತಿ ಹೆಚ್. ಎನ್.ನಾಗಮೋಹನದಾಸ್, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ ಪ್ರೊ.ಬಾಬುಮ್ಯಾಥ್ಯೂ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಮಾಜಿ ಸದಸ್ಯರಾದ ಕೆ.ಎನ್.ಲಿಂಗಪ್ಪ, ಜಿ.ಡಿ.ವೇಣುಗೋಪಾಲ್, ಪ್ರಧಾನ ಕಾರ್ಯದರ್ಶಿ ಎಣ್ಣೆಗೆರೆ ವೆಂಕಟೇಶ್, ಅತಿ ಹಿಂದುಳಿದ ವರ್ಗಗಳ ವೇದಿಕೆ ರಾಜ್ಯಾಕ್ಷರಾದ ಮಾಜಿ ಶಾಸಕ ಎಂ.ಸಿ. ವೇಣುಗೋಪಾಲ್, ಸಾಹಿತಿ ಮುಕುಂದ್ ರಾಜ್, ಡಿ.ಎಚ್.ಎಸ್ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಹರಳಹಳ್ಳಿ, ಚಿಂತಕರಾದ ಶ್ರೀಪಾದ್ ಭಟ್, ಅಶ್ವಿನಿ ಓಬಳೇಶ್, ಇಂದಿರಾ ಕೃಷ್ಣಪ್ಪ, ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಸಹ ಸಂಚಾಲಕರಾದ ಡಾ.ಎಸ್.ವೈ. ಗುರುಶಾಂತ್, ಡಿ.ಎಚ್. ಎಸ್(ಎ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ರಾಜಶೇಖರ್ ಕಿಗ್ಗ ಗ್ರಾಮ ಭಾರತ ಬೆಂಗಳೂರು, ಹಾಗೂ ಡಿ.ಎಚ್. ಎಸ್.ನ ಬಿ.ರಾಜಶೇಖರಮೂರ್ತಿ, ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಯಶ್ವಂತ್ ಇನ್ನೂ ಹಲವರು ಈ ದುಂಡುಮೇಜಿನ ಸಭೆಯಲ್ಲಿ ಭಾಗವಹಿಸಿದ್ದರು.

ಪರ್ಯಾಯ ನೀತಿಗಳು ಹಾಗೂ ಬೇಡಿಕೆಗಳಿಗಾಗಿ ಒಗ್ಗಟ್ಟಿನ ಹೋರಾಟದ ಅಗತ್ಯತೆ

“ವಿವಿಧ ಜಾತಿ, ಸಮುದಾಯಗಳ ಮೀಸಲಾತಿಯ ಬೇಡಿಕೆಯ ಹಿಂದೆ ಉದ್ಯೋಗ ಮತ್ತು ಶಿಕ್ಷಣ ಬೇಕು, ಪ್ರಗತಿ ಬೇಕು ಎನ್ನುವುದೇ ಆಗಿದೆ. ಅವಕಾಶಗಳನ್ನು ವಿಸ್ತರಿಸಿದೇ ಇದು ಅಸಾಧ್ಯ. ಇಂದು ಕರ್ನಾಟಕದಲ್ಲಿ ಮೀಸಲಾತಿ ಕೇಳುತ್ತಿರುವ ಬಹುತೇಕ ಒಕ್ಕಲಿಗರು, ಪಂಚಮಸಾಲಿ ಲಿಂಗಾಯತರು, ಕುರುಬರು ಕೃಷಿಕ ಸಮುದಾಯಗಳೇ ಆಗಿವೆ. ಕೃಷಿ ಬಿಕ್ಕಟ್ಟಿಗೆ ಕಾರಣವಾಗಿರುವ ನೀತಿಗಳನ್ನು ಬದಲಾಯಿಸದೇ, ಉತ್ಪಾದನಾ ವ್ಯವಸ್ಥೆಯನ್ನು ವಿಸ್ತರಿಸದೇ ಅವಕಾಶಗಳು ದೊರೆಯಲಾರವು. ಆದ್ದರಿಂದ ಸಾಮಾಜಿಕ ನ್ಯಾಯದ ಮೀಸಲಾತಿಯ ಹಕ್ಕಿಗೆ ಹೋರಾಡುವಾಗಲೇ ಈ ಬಿಕ್ಕಟ್ಟಿನ ಮೂಲದ ವಿರುದ್ಧವೂ ಹೋರಾಟ ನಡೆಸುವುದು ಅತ್ಯಗತ್ಯ. ಇಲ್ಲವಾದರೆ ಜನರನ್ನು ಹಾದಿ ತಪ್ಪಿಸುವ ತಂತ್ರಕ್ಕೆ ಬಲಿಯಾದಂತೆ ಆಗುತ್ತದೆ. ಇಂದು ಪ್ರತಿ ಸಮುದಾಯಗಳು ಅವರ ಪಾಲಿಗಾಗಿ ಮೀಸಲಾತಿ ಕೇಳುತ್ತಿವೆ ಎಂಬಂತೆ ಕಂಡರೂ ಅಂತಿಮವಾಗಿ ಇದು ಜಾತಿಗಳ ನಡುವಿನ ಸಂಘರ್ಷವಾಗುವ ಅಪಾಯ ಇಲ್ಲದಿಲ್ಲ ಎಂಬುದನ್ನು ಮರೆಯಬಾರದು. ಆಳುವವರು ಭ್ರಮೆ ಬಿತ್ತುವಾಗಲೇ ವಿವಿಧ ಜಾತಿಗಳ ಜನತೆಯನ್ನು ಪರಸ್ಪರ ಎತ್ತಿ ಕಟ್ಟುವ ವಿಭಜಕ ರಾಜಕೀಯವನ್ನೂ ಮಾಡುತ್ತಾರೆ. ಹಾಗಾಗಿ ನೊಂದ, ದಮನಿತ ಸಮುದಾಯಗಳ ನಡುವಿನ ಒಗ್ಗಟ್ಟು ಅತೀ ಮುಖ್ಯ. ಸಾಮಾಜಿಕ ನ್ಯಾಯದ ಹಕ್ಕು ದಕ್ಕಿಸಿಕೊಳ್ಳುವಲ್ಲಿ ಇದು ಮಹತ್ವದ್ದು. ಕುಗ್ಗಿಸಲಾದ ಮೀಸಲಾತಿಯ ಅವಕಾಶಗಳನ್ನು ಗಮನಿಸುತ್ತಾ, ಇರುವ ಶೇ.2ರಷ್ಟು ವಾಸ್ತವಿಕ ಅವಕಾಶಗಳ ಮೀಸಲಾತಿ ಪಡೆಯಲು ಯತ್ನಿಸುವಾಗಲೇ ಪರ್ಯಾಯ ಬೇಡಿಕೆಗಳಿಗೆ ಹೋರಾಡಬೇಕು. ನಮ್ಮ ಆಗ್ರಹ: ಮೀಸಲಾತಿಯನ್ನು ಖಾಸಗಿ ಕ್ಷೇತ್ರಗಳಿಗೆ ವಿಸ್ತರಿಸಿ ಅನ್ವಯಿಸಬೇಕು. ಕೇಂದ್ರ ಮತ್ತು ರಾಜ್ಯ ಸರಕಾರಿ ಆಡಳಿತದಲ್ಲಿ ಖಾಲಿ ಇರುವ ಹುದ್ದೆಗಳಿಗೆ ಶೀಘ್ರದಲ್ಲಿ ನೇಮಕ ಮಾಡಿಕೊಳ್ಳಬೇಕು, ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಬೇಕು ಎನ್ನುವುದಾಗಿ ಆಗ್ರಹ ಇರಬೇಕು” ಎಂದು ಡಾ.ಎಸ್. ವೈ.ಗುರುಶಾಂತ್ ರವರು ವಂದನಾರ್ಪಣೆ ಮಾಡುತ್ತಾ ಹೇಳಿದರು.

ಭಾಗ-2

ಮೀಸಲಾತಿ ಇಂದಿನ ಬಿಕ್ಕಟ್ಟುಗಳಿಗೆ ಪರಿಹಾರವೇ?

ಸಾಮಾಜಿಕವಾಗಿ ಹಾಗೂ ಶೈಕ್ಷಣಿವಾಗಿ ಹಿಂದುಳಿದಿರುವ ವರ್ಗಗಳಗೆ ಒದಗಿಸಿದ ಮೀಸಲಾತಿಯನ್ನು ತಮಗೂ ಮೀಸಲಾತಿ ಬೇಕು ಎಂದು ಯಾಕಾಗಿ ಒತ್ತಾಯಿಸುತ್ತಿದ್ದಾರೆ? ಮೀಸಲಾತಿ ಎಂಬುದು ಕೆಲವು ಸಮುದಾಯಗಳ ನಿರುದ್ಯೋಗಿಗಳಿಗೆ ಉದ್ಯೋಗ ಸಿಗದಿರಲು ಕಾರಣವೇ? ಬಹು ಸಂಖ್ಯೆಯ ಜನರು ಉನ್ನತ ಶಿಕ್ಷಣ ಪಡೆಯಲಾಗದಿರುವುದಕ್ಕೆ ಮೀಸಲಾತಿ ಕಾರಣವೇ? ನಿರುದ್ಯೋಗ ಸಮಸ್ಯೆಗಳಿಗೆ ಕಾರಣವೇನು? ಬಹಳಷ್ಟು ಸಮುದಾಯದವರು ಉನ್ನತ ಶಿಕ್ಷಣ ಪಡೆಯಲಾಗದ ಸ್ಥಿತಿಗೆ ಕಾರಣವೇನು? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳದೆ, ಇಂದು ಜನಸಾಮಾನ್ಯರು ಎದುರಿಸುತ್ತಿರುವ ಬಿಕ್ಕಟ್ಟಿಗಳಿಗೆ ಪರಿಹಾರ ಸಿಗಲಾರದು.

ಸರ್ಕಾರದ ಮುಕ್ತ ಆರ್ಥಿಕ ನೀತಿಗಳು ಜನರನ್ನು ಹೆಚ್ಚು ಭಾದಿಸುತ್ತಿವೆ. ಸರ್ಕಾರದ ಬಂಡವಾಳಶಾಹಿ ಪರ ನೀತಿಗಳಿಂದಾಗಿ ದೇಶದಲ್ಲಿ ಕೃಷಿ ಬಿಕ್ಕಟ್ಟು ತೀವ್ರಗೊಂಡಿದೆ. ಕೃಷಿಯನ್ನು ಕಾರ್ಪೊರೇಟೀಕರಣ ಮಾಡಲು ಮುಂದಾಗಿರುವ ಸರ್ಕಾರದ ನೀತಿಗಳಿಂದಾಗಿ ಕೃಷಿಕರು ಮತ್ತಷ್ಟು ಸಂಕಷ್ಟಗಳಿಗೆ ಒಳಗಾಗಿದ್ದಾರೆ. ಕೃಷಿಯಲ್ಲಿ ಯಂತ್ರಗಳ ಬಳಕೆ ಹೆಚ್ಚಾಗಿದೆ. ಗ್ರಾಮೀಣ ಪ್ರದೇಶದ ಸಣ್ಣ ರೈತರು ಮತ್ತು ಕೃಷಿ ಕಾರ್ಮಿಕರು ಕೃಷಿ ಚಟುವಟಿಕೆಗಳಿಂದ ದೂರ ತಳ್ಳಲ್ಪಟ್ಟಿದ್ದಾರೆ. ಇವರು ಉದ್ಯೋಗ ಅರಸುತ್ತ ನಗರ ಪಟ್ಟಣಗಳಿಗೆ ವಲಸೆ ಹೋಗತೊಡಗಿದ್ದಾರೆ.

ಇತ್ತ ಕೈಗಾರಿಕಾ ಕ್ಷೇತ್ರ ಆಧುನೀಕರಣ ಗೊಳ್ಳುತ್ತಿದ್ದಂತೆ ಶ್ರಮಜೀವಿಗಳ ಅಗತ್ಯತೆ ಕಡಿಮೆಯಾಗಿದೆ. ಎಲ್ಲವೂ ಯಾಂತ್ರೀಕರಣ ಗೊಳ್ಳುತ್ತಿವೆ. ಹೊಸ ಹೊಸ ತಂತ್ರಜ್ಞಾನಗಳ ಅವಿಷ್ಕಾರ ಆಗುತ್ತಿದ್ದಂತೆ ಉತ್ಪಾದನಾ ವಲಯ, ಸೇವಾ ವಲಯ ಎಲ್ಲವೂ ಅದುನೀಕರಣ ಗೊಳ್ಳುತ್ತಿವೆ. ಉದ್ಯೋಗ ಸೃಷ್ಟಿ ಕುಂಠಿತವಾಗಿದೆ. ನಿರುದ್ಯೋಗಿಗಳ ಸಾಲು ಬೆಳೆಯುತ್ತಲೇ ಇದೆ.

ಅಪ್ರಸ್ತುತವಾಗುತ್ತಿರುವ ಮೀಸಲಾತಿ:

ಇಂದು ಜನರಿಗೆ ಉದ್ಯೋಗವನ್ನು ಒದಗಿಸುವುದು ಸರ್ಕಾರದ ನೀತಿಯಾಗಿ ಉಳಿದಿಲ್ಲ. ಮೀಸಲಾತಿಯನ್ನು ಅಪ್ರಸ್ತುತಗೊಳಿಸುವ ಕ್ರಮಗಳನ್ನು ಸರ್ಕಾರ ಅನುಸರಿಸುತ್ತಿದೆ. ನಮ್ಮ ಸಂವಿಧಾನದ ಮೂಲ ತತ್ವಗಳಾದ ಸಾಮಾಜಿಕ ನ್ಯಾಯ ಮತ್ತು ಕಲ್ಯಾಣ ರಾಜ್ಯವೆಂಬ ಮೌಲ್ಯಗಳಿಗೆ ವಿರುದ್ಧವಾಗಿ ನಮ್ಮ ಸರ್ಕಾರಗಳು ನಡೆದುಕೊಳ್ಳುತ್ತಿವೆ. ಎಲ್ಲಾ ಸಮಸ್ಯೆಗಳಿಗೂ ಖಾಸಗೀಕರಣವೇ ಮದ್ದು ಎಂದು ಸಾರ್ವಜನಿಕ ಕ್ಷೇತ್ರಗಳನ್ನು ಖಾಸಗೀಕರಣ ಮಾಡುತ್ತಿದೆ. ಉದ್ಯೋಗಗದ ಅವಕಾಶ ಶೇ.98 ರಷ್ಟು ಖಾಸಗೀ ಕ್ಷೇತ್ರದಲ್ಲಿ ಇವೆ. ಆದರೆ ಅಲ್ಲಿ ಮೀಸಲಾತಿ ಸೌಲಭ್ಯ ಇಲ್ಲ ಎಂಬುದನ್ನು ಗಮನಿಸಿದಾಗ ಮೀಸಲಾತಿಗೆ ಲಭ್ಯವಿದ್ದ ಶಿಕ್ಷಣದ ಮತ್ತು ಉದ್ಯೋಗದ ಅವಕಾಶಗಳು ಸರ್ಕಾರದಲ್ಲಿ ಕುಗ್ಗಿವೆ. ವಾಸ್ತವದಲ್ಲಿ ಶೇ.50 ಮೀಸಲಾತಿ ಪಟ್ಟಿಯಲ್ಲಿರುವವರಿಗೆ ಎಂದು ಗಣಿಸಿದಾಗ ದೇಶದಲ್ಲಿನ ಒಟ್ಟು ಉದ್ಯೋಗಗಳಲ್ಲಿ ಶೇ. ಒಂದರಷ್ಟು ಮಾತ್ರ ಮೀಸಲಾತಿಯ ವ್ಯಾಪ್ತಿಗೆ ಬರುತ್ತದೆ ಎಂಬುದನ್ನು ಗಮನಿಸಬೇಕು. ಸಂಸತ್ತಿನಲ್ಲಿ ಸಚಿವರು ನೀಡಿರುವ ಮಾಹಿತಿ ಪ್ರಕಾರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮತ್ತು ಸಾರ್ವಜನಿಕ ವಲಯಗಳಲ್ಲಿ ಸರಿಸುಮಾರು 60 ಲಕ್ಷ ಉದ್ಯೋಗಗಳು ಖಾಲಿ ಉಳಿದಿವೆ. ಕರ್ನಾಟಕದಲ್ಲೂ 2021ರಲ್ಲಿ ಖಾಲಿಯಿರುವ ಉದ್ಯೋಗಗಳ ಸಂಖ್ಯೆ 2.59 ಲಕ್ಷ. ಆದರೆ ಇವುಗಳನ್ನು ಭರ್ತಿ ಮಾಡಲು ಸರ್ಕಾರ ಮುಂದಾಗುತ್ತಿಲ್ಲ.

ಸಾರ್ವಜನಿಕ ಉದ್ಯಮಗಳ ಬಂಡವಾಳ ಹಿಂತೆಗೆತ:

ನಮ್ಮ ದೇಶದಲ್ಲಿ ಸಾರ್ವಜನಿಕ ವಲಯವನ್ನು ಸ್ವಾವಲಂಬಿ ಆರ್ಥಿಕ ವ್ಯವಸ್ಥೆಯ ಸಾಧನವಾಗಿ ನಿರ್ಮಿಸಲಾಯಿತು. ಸ್ವಾತಂತ್ರ್ಯ ಬಂದ ಆರಂಭದ ದಶಕಗಳಲ್ಲಿ ಭಾರಿ ಕೈಗಾರಿಕರಗಳ ಮೇಲೆ ಅಂದರೆ, ವಿದ್ಯುತ್, ರೈಲ್ವೆ, ರಸ್ತೆ ನಿರ್ಮಾಣ, ಅಣು ಶಕ್ತಿ, ರಕ್ಷಣಾ ಉದ್ಯಮ ಇತ್ಯಾದಿ ವಲಯಗಳಲ್ಲಿ ಬಂಡವಾಳ ಹೂಡುವ ಸಾಮರ್ಥ್ಯ ಖಾಸಗಿ ವಲಯಕ್ಕೆ ಇರಲಿಲ್ಲ. ಉಕ್ಕು ಮತ್ತು ಕಬ್ಬಿಣ ಉದ್ದಿಮೆ, ರಕ್ಷಣಾ ಉಪಕರಣ, ಹಡಗು ನಿರ್ಮಾಣ, ತೈಲ, ಕಲ್ಲಿದ್ದಲು, ಇತ್ಯಾದಿ ಕ್ಷೇತ್ರಗಳಲ್ಲಿ ಸಾರ್ವಜನಿಕ ವಲಯವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದೆ. ಈ ವಲಯದಲ್ಲಿ ಮೀಸಲಾತಿ ಇರುವ ಕಾರಣದಿಂದ ಲಕ್ಷಾಂತರ ಪರಿಸಿಷ್ಟ ಜಾತಿ ಮತ್ತು ಜನಾಂಗ ಹಾಗೂ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ಉದ್ಯೋಗ ದೊರೆಯಿತು.

ನವ-ಉದಾರೀಕರಣ ನೀತಿಗಳು:

ನಮ್ಮ ಸರ್ಕಾರಗಳು 1991ರಿಂದ ನವ-ಉದಾರೀಕರಣ ನೀತಿಗಳನ್ನು ಅಳವಡಿಕೊಂಡಿವೆ. ಇವು ಸಾರ್ವಜನಿಕ ವಲಯದ ವ್ಯಾಪ್ತಿಯನ್ನು ಸೀಮಿತಗೊಳಿಸಿವೆ. ಸಾರ್ವಜನಿಕ ವಲಯದ ಹಲವು ಉದ್ಯಮಗಳನ್ನು ಈಗಾಗಲೇ ಖಾಸಗಿ ಉದ್ಯಮದಾರರಿಗೆ ಮಾರಾಟ ಮಾಡಿವೆ. ಕೆಲವು ಸಾರ್ವಜನಿಕ ಉದ್ಯಮಗಳಲ್ಲಿ ನೇಮಕಾತಿಯನ್ನು ಸ್ಥಗಿತಗೊಳಿಸಿವೆ. ಕೆಲವು ಸಾರ್ವಜನಿಕ ಉದ್ದಿಮೆಗಳಲ್ಲಿ ಸ್ವಯಂಚಾಲಿತ ಯಾಂತ್ರೀಕರಣ, ಆಧುನೀಕರಣ ಮತ್ತು ಕಂಪ್ಯೂಟರೀಕರಣ ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳಲಾಗಿದೆ. ಈ ಉದ್ಯಮಗಳ ಬಂಡವಾಳವನ್ನು ಹಿಂಪಡೆಯುವ ಪ್ರಕ್ರಿಯೆ ಭರದಿಂದ ಸಾಗಿದೆ. 1991ರಿಂದ ಇದುವರೆಗೆ ಸಾರ್ವಜನಿಕ ವಲಯದಲ್ಲಿನ 6 ಲಕ್ಷ ಕೋಟಿ ಬಂಡವಾಳ ಹಿಂಪಡೆಯಲಾಗಿದೆ. ಸಾರ್ವಜನಿಕ ಉದ್ಯಮಗಳ ಶೇರುಗಳ ಮಾರಾಟ ನಿರಂತರವಾಗಿ ನಡೆಯುತ್ತಿದೆ. ಸರ್ಕಾರದ ಈ ನೀತಿಗಳಿಂದಾಗಿ ಮೀಸಲಾತಿ ಅಪ್ರಸ್ತುತವಾಗುತ್ತಿದೆ.

ಗುತ್ತಿಗೆ ಮತ್ತು ಹೊರಗುತ್ತಿಗೆ ಪದ್ಧತಿ:

ಒಂದೆಡೆ ಸಾರ್ವಜನಿಕ ಉದ್ಯಮಗಳ ಖಾಸಗೀಕರಣ ನೀತಿಗಳಿಂದಾಗಿ ಮೀಸಲಾತಿ ಅವಕಾಶಗಳು ಕಡಿಮೆಯಾಗುತ್ತಿದ್ದರೆ, ಮತ್ತೊಂದೆಡೆ ಸರ್ಕಾರದ ಕಾರ್ಮಿಕ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಮೀಸಲಾತಿಯನ್ನು ಅಪ್ರಸ್ತುತಗೊಳಿಸುತ್ತಿದೆ. ಸಾರ್ವಜನಿಕ ಉದ್ಯಮಗಳು, ಸರ್ಕಾರಿ ಇಲಾಖೆಗಳು ಮತ್ತು ಖಾಸಗಿ ಉದ್ಯಮಗಳಲ್ಲಿ ಗುತ್ತಿಗೆ ಮತ್ತು ಹೊರಗುತ್ತಿಗೆ ಆಧಾರದ ಮೇಲೆ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಿದೆ. ಈ ರೀತಿ ನೇಮಕಗೊಂಡ ಕಾರ್ಮಿಕರಿಗೆ ಮೀಸಲಾತಿ ಅನ್ವಹಿಸುವುದಿಲ್ಲ. ಮಾತ್ರವಲ್ಲ, ಇವರಿಗೆ ಕೆಲಸದ ಭದ್ರತೆ, ಸಾಮಾಜಿಕ ಕಲ್ಯಾಣ, ರಜೆಗಳ ಸೌಲಭ್ಯ ಮುಂತಾದವು ಇರುವುದಿಲ್ಲ.

ಸರ್ಕಾರದ ಈ ನೀತಿಗಳಿಂದಾಗಿ ಮೀಸಲಾತಿಗೆ ಲಭ್ಯವಿರುವ ಉದ್ಯೋಗಗಳು ಕಡಿಮೆಯಾಗುತ್ತಿವೆ. ಬಂಡವಾಳವನ್ನು ಹಿಂಪಡೆಯುವ ಸರ್ಕಾರದ ಕ್ರಮದಿಂದ ಸಾರ್ವಜನಿಕ ವಲಯದಲ್ಲಿ ಮೀಸಲಾತಿಗೆ ದೊರೆಯಬೇಕಿದ್ದ ಉದ್ಯೋಗಗಳು ಇಲ್ಲವಂತಾಗುತ್ತವೆ. ಮಂಜೂರಾದ ಹುದ್ದೆಗಳಲ್ಲಿ ಬಹಳಷ್ಟು ಭರ್ತಿಯಾಗದೇ ಖಾಲಿ ಇರುವುದರಿಂದಲೂ ಮೀಸಲಾತಿಯ ಉದ್ಯೋಗ ಸಾಮರ್ಥ್ಯವು ದುರ್ಬಲವಾಗುತ್ತಿದೆ. ಗುತ್ತಿಗೆ, ಹೊರಗುತ್ತಿಗೆ ಪದ್ಧತಿಯಲ್ಲಿ ಉದ್ಯೋಗಿಗಳನ್ನು ನೇಮಿಸಿಕೊಳ್ಳುವಾಗ ಮೀಸಲಾತಿ ನಿಯಮಗಳನ್ನು ಪಾಲಿಸಬೇಕಾಗಿಲ್ಲ.

ಶಿಕ್ಷಣದ ಖಾಸಗೀಕರಣ:

ಸರ್ಕಾರದ ಮುಕ್ತ ಆರ್ಥಿಕ ನೀತಿಗಳು ಶಿಕ್ಷಣ ಕ್ಷೇತ್ರವನ್ನೂ ಬಿಟ್ಟಿಲ್ಲ. ಶಿಕ್ಷಣ ವಲಯದಲ್ಲಿ ಖಾಸಗಿಯವರ ಪಾತ್ರ ಹೆಚ್ಚಾಗಿದೆ. ದೇಶದಲ್ಲಿ ಇಂದು ಶೇ. 26ರಷ್ಟು ಅರ್ಹ ಯುವಜನತೆ ಉನ್ನತ ಶಿಕ್ಷಣವನ್ನು ಪಡೆದಿದ್ದಾರೆ. ಉಳಿದ ಶೇ. 74ರಷ್ಟು ಯುವಜನತೆಗೆ ಉನ್ನತ ಶಿಕ್ಷಣ ಸಿಗುತ್ತಿಲ್ಲ. ಈ ಪರಿಸ್ಥಿತಿಗೆ ಅನೇಕ ಕಾರಣಗಳಿವೆ. ಪ್ರಮುಖವಾದ ಕಾರಣವೆಂದರೆ ಉನ್ನತ ಶಿಕ್ಷಣದ ವೆಚ್ಚವನ್ನು ಭರಿಸಲು ಸಾಧ್ಯವಾಗದೇ ಇರುವುದು. ಇಂತಹ ಪರಿಸ್ಥಿತಿಯಲ್ಲಿ ಮೀಸಲಾತಿ ಕಾರಣದಿಂದಲೇ ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಸಮುದಾಯದ ಯುವಜನತೆ ಉನ್ನತ ಶಿಕ್ಷಣ ಪಡೆಯಲಾಗದು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತನ್ನ ವ್ಯಾಪ್ತಿಗೆ ಬರುವ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಕೊಡುತ್ತಿರುವ ಆರ್ಥಿಕ ನೆರವನ್ನು ದಿನೇ ದಿನೇ ಕಡಿತ ಮಾಡುತ್ತಿದೆ. ಸರ್ಕಾರದ ವಾರ್ಷಿಕ ಬಜೆಟ್ ನಲ್ಲಿ ಶಿಕ್ಷಣಕ್ಕೆ ಮೀಸಲಿಡುವ ಅನುದಾನ ಕಡಿಮೆಯಾಗುತ್ತಿದೆ. ಶಿಕ್ಷಣವನ್ನು ಖಾಸಗೀಕರಣ ಮಾಡುವ ನೀತಿಗೆ ಅನುಗುಣವಾಗಿ ಸರ್ಕಾರಗಳು ಹೀಗೆ ಮಾಡುತ್ತಿವೆ. ಇದರಿಂದಾಗಿ ಇಂದು ಶಿಕ್ಷಣವೂ ಮಾರಾಟದ ವಸ್ತುವಾಗಿದೆ. ಆರ್ಥಿಕವಾಗಿ ಬಲಿಷ್ಠರಾಗಿರುವವರು ಮಾತ್ರ ಉನ್ನತ ಶಿಕ್ಷಣ ಪಡೆಯುವಂತಾಗಿದೆ.

ಈ ಎಲ್ಲಾ ಕಾರಣಗಳಿಂದಾಗಿ ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿ ಅಪ್ರಸ್ತುತವಾಗುತ್ತಿದೆ. ಸರ್ಕಾರದ ಖಾಸಗೀಕರಣ ಮತ್ತು ಮುಕ್ತ ಆರ್ಥಿಕ ನೀತಿಗಳ ವಿರುದ್ದ ದ್ವನಿ ಎತ್ತದೆ ಮೀಸಲಾತಿ ಹಿಂದೆ ಬೀಳುವುದರಿಂದ ಜನರು ಎದುರಿಸುತ್ತಿರುವ ಇಂದಿನ ಬಿಕ್ಕಟ್ಟಿಗೆ ಪರಿಹಾರ ಸಿಗಲಾರದು.

ನೋಟುರದ್ದತಿ: ಸುಪ್ರೀಂಕೋರ್ಟ್ ಸರಕಾರದ ಹಕ್ಕನ್ನು ಎತ್ತಿಹಿಡಿದಿದೆ, 2016ರ ಕ್ರಮವನ್ನಲ್ಲ:

ನೋಟುರದ್ದತಿ ಕುರಿತ ಸುಪ್ರೀಂಕೋರ್ಟಿನ ಐವರು ಸದಸ್ಯರ ಸಂವಿಧಾನ ಪೀಠದ ತೀರ್ಪು ಸರಕಾರಕ್ಕೆ ಇಂತಹ ಕ್ರಮವನ್ನು ಕೈಗೊಳ್ಳುವ ಹಕ್ಕಿದೆ ಎಂಬುದನ್ನು ಎತ್ತಿ ಹಿಡಿದಿದೆಯೇ ಹೊರತು, 2016 ರ ನೋಟುರದ್ದತಿ ಕ್ರಮವನ್ನು ಎತ್ತಿಹಿಡಿಯುತ್ತದೆ ಎಂದು ವ್ಯಾಖ್ಯಾನಿಸಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಅಂತಹ ನಿರ್ಧಾರದ ಪರಿಣಾಮಗಳನ್ನು ಯಾವುದೇ ರೀತಿಯಲ್ಲಿ ಅದು ಅನುಮೋದಿಸುವುದಿಲ್ಲ ಎಂದೂ ಅದು ಹೇಳಿದೆ.

ಜನವರಿ 2, 2023 ರಂದು ಸುಪ್ರಿಂಕೋರ್ಟ್‌ತೀರ್ಪಿನ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ನೀಡಿರುವ ಹೇಳಿಕೆಯ ಪೂರ್ಣಪಾಠ ಹೀಗಿದೆ:

2016 ರ ನೋಟುರದ್ದತಿ ಕುರಿತು ಐದು ಸದಸ್ಯರ ಸಂವಿಧಾನ ಪೀಠದ ತೀರ್ಪು ಈ ಕ್ರಮವನ್ನು ಎತ್ತಿಹಿಡಿಯುತ್ತದೆ ಎಂದು ವ್ಯಾಖ್ಯಾನಿಸಲು ಸಾಧ್ಯವಿಲ್ಲ. ಅಂತಹ ನಿರ್ಧಾರವನ್ನು ತೆಗೆದುಕೊಳ್ಳುವ ಕೇಂದ್ರ ಸರ್ಕಾರದ ಕಾನೂನಾತ್ಮಕ ಹಕ್ಕನ್ನು ಮತ್ತು ಇದು ಆರ್‌ಬಿಐ ಕಾಯಿದೆ 1934 ರ ಸೆಕ್ಷನ್ 26(2) ಅನ್ನು ಉಲ್ಲಂಘಿಸುವುದಿಲ್ಲ ಎಂಬುದನ್ನು ಪರಿಶೀಲಿಸಿದೆ. ಆರ್‌ಬಿಐ ಕಾಯ್ದೆಯ ಈ ವಿಭಾಗವು ನೋಟುರದ್ದತಿಯನ್ನು ಪ್ರಾರಂಭಿಸಲು ಆರ್‌ಬಿಐ ಸರ್ಕಾರಕ್ಕೆ ಶಿಫಾರಸು ಮಾಡಬೇಕು ಎಂದು ಹೇಳುತ್ತದೆ. ಈ ಪ್ರಕರಣದಲ್ಲಿ ಆರ್‌ಬಿಐ ಅಭಿಪ್ರಾಯ ಕೇಳಿದ್ದ ಕೇಂದ್ರ ಸರ್ಕಾರ ಈ ನಿರ್ಧಾರ ಕೈಗೊಂಡಿದೆ. ಆದ್ದರಿಂದ, ಈ ನಿರ್ಧಾರವನ್ನು ಕಾರ್ಯಗತಗೊಳಿಸುವ ಮೊದಲು ಸಂಸತ್ತಿನ ಅನುಮೋದನೆಯನ್ನು ತೆಗೆದುಕೊಳ್ಳಬೇಕಾಗಿತ್ತು.

ನೋಟುರದ್ದತಿಯ ಕ್ರಮ ಅದು ಸಾಧಿಸಲು ಬಯಸಿದ ಉದ್ದೇಶಗಳೊಂದಿಗೆ "ಸಮಂಜಸವಾದ ಸಂಬಂಧವನ್ನು" ಹೊಂದಿದೆ, "ಉದ್ದೇಶವನ್ನು ಸಾಧಿಸಲಾಗಿದೆಯೇ ಅಥವಾ ಇಲ್ಲವೇ ಎಂಬುದು ಪ್ರಸ್ತುತವಲ್ಲ" ಎಂದು ಬಹುಮತದ ತೀರ್ಪು ಗಮನಿಸಿದೆ.

ಅಂತಹ ನಿರ್ಧಾರವನ್ನು ತೆಗೆದುಕೊಳ್ಳುವ ಸರ್ಕಾರದ ಕಾನೂನು ಹಕ್ಕನ್ನು ಎತ್ತಿಹಿಡಿಯುತ್ತ ಈ ಬಹುಮತದ ತೀರ್ಪು ಅಂತಹ ನಿರ್ಧಾರದ ಪರಿಣಾಮದ ಬಗ್ಗೆ ಏನನ್ನೂ ಹೇಳುವುದಿಲ್ಲ. ನೋಟು ರದ್ದತಿಯ ಫಲಿತಾಂಶವಾಗಿ ಕೋಟ್ಯಂತರ ಜನರಿಗೆ ಉದ್ಯೋಗ ನೀಡುವ ಭಾರತದ ಅನೌಪಚಾರಿಕ ಅರ್ಥವ್ಯವಸ್ಥೆಯ ನಾಶವಾಯಿತು. ಇದು ಸಣ್ಣ–ಪ್ರಮಾಣದ ಕೈಗಾರಿಕಾ ವಲಯ, ಅತಿ ಸಣ್ಣ, ಸಣ್ಣ ಮತ್ತು ಮಧ್ಯಮಗಾತ್ರದ ಉದ್ದಿಮೆ(ಎಂಎಸ್‌ಎಂಇ)ಗಳನ್ನು ಅಸ್ತವ್ಯಸ್ತಗೊಳಿಸಿ ಕೋಟಿಗಟ್ಟಲೆ ಜೀವನೋಪಾಯಗಳನ್ನು ನಾಶಮಾಡಿತು. 2016 ರ ನಿರ್ಧಾರದಿಂದ ಒಂದು ತಿಂಗಳಲ್ಲಿ 82 ಜನರು ಪ್ರಾಣ ಕಳೆದುಕೊಂಡಿದ್ದಾರೆ ಎಂದು ವರದಿಗಳು ಗಮನಿಸಿವೆ.

ಇದಲ್ಲದೆ, ಈ ವಿನಾಶಕಾರಿ ನಿರ್ಧಾರವನ್ನು ಸಮರ್ಥಿಸಿಕೊಳ್ಳಲು ಹೇಳಿದ ಯಾವ ಗುರಿಯೂ ಸಾಧನೆಯಾಗಿಲ್ಲ (ಕಪ್ಪುಹಣವನ್ನು ಹೊರತೆಗೆಯುವುದು ಮತ್ತು ವಿದೇಶಿ ಬ್ಯಾಂಕುಗಳಿಂದ ಅದನ್ನು ಮರಳಿ ತರುವುದು, ಖೋಟಾ ನೋಟುಗಳನ್ನು ಕೊನೆಗೊಳಿಸುವುದು, ಭಯೋತ್ಪಾದಕ ಕೃತ್ಯಗಳಿಗೆ ನಿಧಿ, ಭ್ರಷ್ಟಾಚಾರ ಮತ್ತು ಅರ್ಥವ್ಯವಸ್ಥೆಯಲ್ಲಿ ನಗದು ಹಣದ ಹರಿವನ್ನು ಕಡಿಮೆಗೊಳಿಸುವುದು) ಇವು ಯಾವುವೂ ಸಾಧನೆಯಾಗಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಆರ್‌ಬಿಐ ಪ್ರಕಾರ, ಸಾರ್ವಜನಿಕರೊಂದಿಗಿನ ಕರೆನ್ಸಿ, ನೋಟುರದ್ದತಿಯ ಮುನ್ನಾದಿನ ಇದ್ದ ರೂ. 17.7 ಲಕ್ಷಕೋಟಿ ರೂ. ಗಳಿಂದ ಈಗ 30.88 ಲಕ್ಷಕೋಟಿ ಆಗಿದೆ. ಅಂದರೆ ಶೇ.71.84 ರಷ್ಟು ಹೆಚ್ಚಳವಾಗಿದೆ.

ಸುಪ್ರೀಂಕೋರ್ಟಿನ ಬಹುಮತದ ತೀರ್ಪು ಅಂತಹ ನಿರ್ಧಾರವನ್ನು ತೆಗೆದುಕೊಳ್ಳುವ ಸರ್ಕಾರದ ಹಕ್ಕನ್ನು ಎತ್ತಿಹಿಡಿಯುತ್ತದಷ್ಟೆ ಮತ್ತು ಅಂತಹ ನಿರ್ಧಾರದ ಪರಿಣಾಮಗಳನ್ನು ಯಾವುದೇ ರೀತಿಯಲ್ಲಿ ಅನುಮೋದಿಸುವುದಿಲ್ಲ.

ವಿದ್ಯುತ್ ಖಾಸಗೀಕರಣ ವಿರುದ್ಧದ ಹೋರಾಟದಲ್ಲಿ ಮಹಾರಾಷ್ಟ್ರದ ನೌಕರರ ಅದ್ಭುತ ವಿಜಯ

ಅದಾನಿ ಗುಂಪಿಗೆ ವಿದ್ಯುತ್ ವಿತರಣೆಯ ಸಮಾನಾಂತರ ಪರವಾನಿಗಿ ಇಲ್ಲ, ಖಾಸಗೀಕರಣಕ್ಕೆ ಬೆಂಬಲ ಇಲ್ಲ–ಮಹಾರಾಷ್ಟ್ರ ಸರಕಾರದ ಆಶ್ವಾಸನೆ

ಮಹಾರಾಷ್ಟ್ರದ ಮೂರು ಸಾರ್ವಜನಿಕ ವಲಯದ ವಿದ್ಯುತ್ ಕಂಪನಿಗಳ 86,000 ನೌಕರರು, ಇಂಜಿನಿಯರುಗಳು ಮತ್ತು ಇತರ ಕಾರ್ಮಿಕರು ತಮ್ಮ ಮೂರು ದಿನಗಳ ಐಕ್ಯ ಮುಷ್ಕರದ ಮೊದಲ ದಿನವೇ ಮಹತ್ವದ ವಿಜಯ ಗಳಿಸಿದ್ದಾರೆ. ನವೀ ಮುಂಬೈ ಪ್ರದೇಶದಲ್ಲಿ ಅದಾನಿಯ ವಿದ್ಯುತ್ ವಿತರಣಾ ಕಂಪನಿಗೆ ಸಮಾನಾಂತರ ಪ್ರವೇಶಕ್ಕೆ ಪರವಾನಿಗಿ ಕೊಡುವುದಿಲ್ಲೆಂದು ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಮತ್ತು ಇಂಧನ ಮಂತ್ರಿ ದೇವೇಂದ್ರ ಫಡ್ನವೀಸ್ ಸಾರ್ವಜನಿಕವಾಗಿ ಆಶ್ವಾಸನೆ ನೀಡಿದ್ದಾರೆ.

ಈ ನೌಕರರು ಕಳೆದ ಎರಡು ತಿಂಗಳಿಂದ ಈ ಬೇಡಿಕೆಯ ಮೇಲೆ ರಾಜ್ಯಾದ್ಯಂತ ನಡೆಸಿದ ಪ್ರಚಾರಾಂದೋಲನ ನಡೆಸುತ್ತಿದ್ದಾರೆ. ಇದಕ್ಕೆ ಕಿವಿಗೊಡದ ಮಹಾರಾಷ್ಟ್ರದ ಸರಕಾರ, ಕರಾಳ ಎಂಇಎಸ್‌ಎಂ ಪ್ರಯೋಗಿಸಲು ಮುಂದಾಯಿತು. ಇದನ್ನು ಲೆಕ್ಕಿಸದೆ ನೌಕರರು ಮುಷ್ಕರಕ್ಕೆ ಇಳಿದರು. ಮೊದಲ ದಿನದ ಮುಷ್ಕರ ಸಂಪೂರ್ಣ ಯಶಸ್ವಿಯಾಯಿತು. ನೌಕರರ ಯಶಸ್ವಿ ಮುಷ್ಕರ ಮತ್ತು ಎಲ್ಲೆಡೆಗಳಿಂದ ಬಂದ ಒತ್ತಡಗಳಿಂದಾಗಿ ಕೊನೆಗೂ ವಿದ್ಯುತ್ ಖಾಸಗೀಕರಣದ ತನ್ನ ಈ ಪ್ರಯತ್ನದಲ್ಲಿ ಮಹಾರಾಷ್ಟ್ರ ಸರ್ಕಾರ ಹಿಮ್ಮೆಟ್ಟಬೇಕಾಗಿ ಬಂದಿದೆ. ವಿದ್ಯುತ್ ಖಾಸಗೀಕರಣದ ವಿರುದ್ಧ ನಡೆಯುತ್ತಿರುವ ಹೋರಾಟದಲ್ಲಿ ಇದೊಂದು ಮಹತ್ವದ ವಿಜಯ ಎಂದು ವಿದ್ಯುತ್ ನೌಕರರು ಮತ್ತು ಇಂಜಿನಿಯರುಗಳ ರಾಷ್ಟ್ರೀಯ ಸಮನ್ವಯ ಸಮಿತಿ(ಎನ್‌ಸಿಸಿಓಇಇಇ) ಮತ್ತು ಕೇಂದ್ರೀಯ ಕಾರ್ಮಿಕ ಸಂಘಟನೆ ಸಿಐಟಿಯು ಮಹಾರಾಷ್ಟ್ರದ ವಿದ್ಯುತ್ ನೌಕರರನ್ನು ಅಭಿನಂದಿಸಿವೆ.

ನವೀ ಮುಂಬೈ ವಿದ್ಯುತ್ ಕ್ಷೇತ್ರ ಇಡಿ ಮಹಾರಾಷ್ಟ್ರದಲ್ಲೇ ಅತ್ಯಂತ ಆಕರ್ಷಕ ಆದಾಯ ತರುವ ಕ್ಷೇತ್ರ. ಕಳೆದ ನವಂಬರ್ ನಲ್ಲಿ ಮಹಾರಾಷ್ಟ್ರ ವಿದ್ಯುತ್ ನಿಯಂತ್ರಣ ಪ್ರಾದಿಕಾರ (ಎಂಇಆರ್‌ಸಿ) ವಿತರಣೆ ಪರವಾನಿಗಿಯ ನಿಯಮಗಳನ್ನು ಮಾರ್ಪಡಿಸಿದ ಮರುದಿನವೇ ಅದಾನಿ ಟ್ರಾನ್ಸ್‌ಮಿಷನ್ ಲಿಮಿಟೆಡ್(ಎಟಿಎಲ್)ನ 100% ಉಪಕಂಪನಿಯಾಗಿ ರಚಿಸಿದ ಅದಾನಿ ಇಲೆಕ್ಟ್ರಿಸಿಟಿ ನವಿ ಮುಂಬೈ ಲಿಮಿಟೆಡ್(ಎಇಎನ್‌ಎಂಎಲ್), ಈ ಕ್ಷೇತ್ರದಲ್ಲಿ ವಿದ್ಯುತ್ ವಿತರಣೆಯ ಸಮಾನಾಂತರ ಪರವಾನಿಗಿ ಕೊಡಬೇಕೆಂದು ಅರ್ಜಿ ಸಲ್ಲಿಸಿತು. 2003ರ ವಿದ್ಯತ್ ಕಾಯ್ದೆಯ ಮಾರ್ಪಡಿಸಿದ ನಿಯಮಗಳನ್ನು ಬಳಸಿಕೊಂಡು ಅದಾನಿ ಕಂಪನಿ ಅತ್ಯಂತ ಹೆಚ್ಚು ಆದಾಯ ತರುವ ಕ್ಷೇತ್ರಗಳನ್ನಷ್ಟೇ ಆಯ್ದುಕೊಂಡು, ಸರಕಾರದ ಒಡೆತನದ ವಿದ್ಯುತ್ ವಿತರಣಾ ಕಂಪನಿಯ ಆದಾಯಕ್ಕೆ ಏಟುಕೊಡುತ್ತದೆ ಎಂಬ ಬೀತಿ ನೌಕರರು ಮತ್ತು ಇಂಜಿನಿಯರುಗಳನ್ನು ತಟ್ಟಿತು, ಬಳಕೆದಾರರು ತಾವು ತೆರಬೇಕಾದ ಬಿಲ್ ಮೊತ್ತ ಏರುವ ಭೀತಿಗೆ ಒಳದಾದರು. ಏಕೆಂದರೆ ಅದಾನಿ ಗುಂಪಿನ ಇನ್ನೊಂದು ಕಂಪನಿ ಅದಾನಿ ಇಲೆಕ್ಟ್ರಿಸಿಟಿ ಮುಂಬೈ(ಎಇಎಂಎಲ್) ಯ ಸರಾಸರಿ ದರಗಳು ಸರಕಾರಿ ಒಡೆತನದ ಕಂಪನಿಯ ದರಕ್ಕಿಂತ ಹೆಚ್ಚಿದೆ.

ಆದ್ದರಿಂದ ರಾಜ್ಯಾದ್ಯಂತ ಇದಕ್ಕೆ ಬಲವಾದ ಪ್ರತಿರೋಧ ವ್ಯಕ್ತವಾಯಿತು. ವಿದ್ಯುತ್ ವಿತರಣೆಗೆ ಅನುಮತಿ ಕೋರಿರುವ ಅದಾನಿ ಕಂಪನಿಯ ಅರ್ಜಿ ತಪ್ಪುದಾರಿಗೆಳೆಯುವ, ಅಪೂರ್ಣವಾದ, ಹಲವು ರೀತಿಗಳಲ್ಲಿ ತಪ್ಪಾದ, ದುರಾಶಯಗಳಿಂದ ಕೂಡಿದ ಮಾಹಿತಿಗಳನ್ನು ಒಳಗೊಂಡಿವೆ. ಈ ಗುಂಪು ತೀವ್ರ ಹಣಕಾಸು–ಸಾಲ ಬಿಕ್ಕಟ್ಟಿಗೆ ಒಳಗಾಗಿದೆ, ಅಲ್ಲದೆ ಈ ಕಂಪನಿಗೆ ವಿದ್ಯುತ್ ವಿತರಣೆಯಲ್ಲಿ ಯಾವುದೇ ಅನುಭವವಿಲ್ಲ. ಆದ್ದರಿಂದ, ವಿದ್ಯುತ್ ಕಾಯ್ದೆ 2013ರ ಅಡಿಯಲ್ಲಿ ಪರವಾನಿಗೆ ನೀಡಿಕೆಗೆ ಅರ್ಹವಾಗಿಲ್ಲ ಎಂದು ರಾಜ್ಯದ ವಿದ್ಯುತ್ ವಲಯದ ಕಾರ್ಮಿಕರು ಮತ್ತು ಇಂಜಿನಿಯರುಗಳು ಕಳೆದ ಎರಡು ತಿಂಗಳಿಂದ ಇದರ ವಿರುದ್ಧ ಮತ ಪ್ರದರ್ಶನ, ರ‍್ಯಾಲಿಗಳನ್ನು ನಡೆಸಿದ್ದಾರೆ. ಇತ್ತೀಚೆಗೆ ನಾಗಪುರದಲ್ಲಿ ರಾಜ್ಯ ವಿಧಾನ ಮಂಡಲದ ಅಧಿವೇಶನ ನಡೆದ ವೇಳೆಯಲ್ಲಿ, 35,000 ಕ್ಕಿಂತ ಹೆಚ್ಚು ನೌಕರರು ವಿಧಾನಸಭಾ ಚಲೋ ದಲ್ಲಿ ಭಾಗವಹಿಸಿದ್ದರು. ಜನವರಿ 2 ರಂದು 10,000 ನೌಕರರು ಥಾಣೆಯಲ್ಲಿ ಮತ ಪ್ರದರ್ಶನ ನಡೆಸಿದರು. ಬಳಕೆದಾರರ/ನಾಗರಿಕರ ಸಂಘಟನೆಗಳೂ ನೌಕರರ ಹೋರಾಟವನ್ನು ಬೆಂಬಲಿಸಿದವು. ಆದರೆ ಇವೆಲ್ಲವನ್ನೂ ಸರಕಾರ ಕಡೆಗಣಿಸಿದ್ದರಿಂದ, ಈ ವಲಯದ 31 ನೌಕರರ/ಇಂಜಿನಿಯರುಗಳ ಸಂಘಗಳು ಒಟ್ಟುಕೂಡಿ ರಚಿಸಿಕೊಂಡ ಸಂಘರ್ಷ ಸಮಿತಿಯ ನೇತೃತ್ವದಲ್ಲಿ ಮುಷ್ಕರ ನಡೆಸಲು ನಿರ್ಧರಿಸಿದರು. ಜನವರಿ 3–4ರ ಮಧ್ಯರಾತ್ರಿಯಿಂದ ಮುಷ್ಕರ ಆರಂಭಿಸಿದರು. ಸರಕಾರ ಕರಾಳ 'ಮಹಾರಾಷ್ಟ್ರ ಅಗತ್ಯ ಸೇವಾ ಕಾಯ್ದೆ'ಯನ್ನು ಪ್ರಯೋಗಿಸುವುದಾಗಿ ಬೆದರಿಸಿತು. ಆದರೆ, ಸರಕಾರದ ಇಂತಹ ಬೆದರಿಕೆಗೆ ನೌಕರರು ಬೆದರಲಿಲ್ಲ. ಮುಷ್ಕರ ಬೀರಿದ ಪರಿಣಾಮವನ್ನು ಕಂಡು ಉಪಮುಖ್ಯಮಂತ್ರಿಗಳು ಸಂಘರ್ಷ ಸಮಿತಿಯೊಂದಿಗೆ ಮಾತುಕತೆಗೆ ಬಂದರು, ಸರಕಾರ ವಿದ್ಯುತ್ ಖಾಸಗೀಕರಣವನ್ನು ಅಥವ ಸಮಾನಾಂತರ ಪರವಾನಿಗಿಯನ್ನು ಬೆಂಬಲಿಸುವುದಿಲ್ಲ ಎಂದು ಘೋಷಿಸಿದರು.



ಮಹಾರಾಷ್ಟ್ರದ ವಿದ್ಯುತ್ ನೌಕರರು ಮತ್ತು ಇಂಜಿನಿಯರುಗಳು ಮಾದರಿ ಐಕ್ಯ ಮತ್ತು ಧೀರ ಹೋರಾಟದಿಂದ ಈ ವಿಜಯವನ್ನು ಸಾಧಿಸಿದ್ದಾರೆ ಎಂದು ಎನ್‌ಸಿಸಿಓಇಇಇ ಅವರನ್ನು ಅಭಿನಂದಿಸಿದೆ. ಇದಕ್ಕೆ ಮೊದಲು ಉತ್ತರಪ್ರದೇಶ, ಜಮ್ಮು–ಕಾಶ್ಮೀರ, ಚಂಡೀಗಡ ಮತ್ತು ಪುದುಚೇರಿಯ ವಿದ್ಯುತ್ ನೌಕರರೂ ಖಾಸಗೀಕರಣದ ವಿರುದ್ಧ ನಡೆಸಿದ ಯಶಸ್ವಿ ಹೋರಾಟಗಳನ್ನು ನೆನಪಿಸಿದ ಅದು 'ಖಾಸಗೀಕರಣದ ವಿರುದ್ಧ ಬಲಿಷ್ಟ ಐಕ್ಯ ಹೋರಾಟಗಳು ಎಷ್ಟು ಮಹತ್ವದ್ದಾಗುತ್ತವೆ ಎಂಬುದು ಕಾಣಬರುತ್ತದೆ' ಎಂದಿದೆ.

ಕೇಂದ್ರ ಸರಕಾರ ವಿದ್ಯುತ್(ತಿದ್ದುಪಡಿ) ಮಸೂದೆ, 2022 ನ್ನು ಕೈಬಿಡಬೇಕು ಎಂದು ಎಸ್‌ಸಿಸಿಓಇಇಇ ಮತ್ತೊಮ್ಮೆ ಆಗ್ರಹಿಸಿದೆ.

ಮಹಾರಾಷ್ಟ್ರದ ವಿದ್ಯುತ್ ವಲಯದ ದುಡಿಮೆಗಾರರ ಪ್ರತಿಭಟನೆ ಮತ್ತು ಪ್ರತಿರೋಧ ಅದ್ಭುತ ವಿಜಯ ಗಳಿಸಿದೆ ಎಂದು ಅಭಿನಂದಿಸಿರುವ ಸಿಐಟಿಯು ಕೂಡ ಮಹಾರಾಷ್ಟ್ರದ ಈ ಚಳವಳಿಯ ಅದ್ಭುತ ಅನುಭವವನ್ನು ಅಳವಡಿಸಿಕೊಂಡು ಈ ಕರಾಳ ಮಸೂದೆಯ ವಿರುದ್ಧ ಬೃಹತ್ ಹೋರಾಟವನ್ನು ಕಟ್ಟಬೇಕು ಎಂದು ದೇಶದ ಜನರಿಗೆ ಮತ್ತು ನಿರ್ದಿಷ್ಟವಾಗಿ ಎಲ್ಲಾ ಕಾರ್ಮಿಕ ಸಂಘಗಳಿಗೆ ಕರೆ ನೀಡಿದೆ.

ಮಹಾರಾಷ್ಟ್ರದ ಉಪ ವ್ಞುಖ್ಯವ್ಞಂತ್ರಿಂಞವರ್ಞ ಖಾಸ್ಗೀಕ್ರಣವ್ನ್ಞ ಬೆಂಬಲಿಸುವುದಿಲ್ಲ ಎಂದು ಘೋಷಿಸಿದ ಪತ್ರಿಕಾಗೋಷ್ಠಿಯಲ್ಲಿ ಕೃಷಿ ಗ್ರಾಹಕರಿಗೆ ಪ್ರತ್ಯೇಕ ವಿದ್ಯುತ್ ವಿತರಣಾ ಕಂಪನಿಯನ್ನು ರಚಿಸುವುದಾಗಿಯೂ ಹೇಳಿದ್ದಾರೆ. ಇದು ಆಂತರಿಕ ಸಬ್ಸಿಡಿ ಕಾರ್ಯವಿಧಾನದ ಮೇಲೆ ಹೆಚ್ಚು ಪರಿಣಾಮ ಬೀರಬಹುದು ಮತ್ತು ಕೃಷಿ ವಿದ್ಯುತ್ ಸಬ್ಸಿಡಿಯನ್ನು ತೆಗೆದು ಹಾಕಲು ಸರ್ಕಾರಕ್ಕೆ ದಾರಿ ಮಾಡಿಕೊಡಬಹುದು ಎಂಬ ಭೀತಿಯನ್ನು ವ್ಯಕ್ತಪಡಿಸಿದ ಸಿಐಟಿಯು, ರೈತರನ್ನು ಹಿಂಡುವ ಕುಟಿಲ ಹಿಂಬಾಗಿಲ ಯೋಜನೆ ಇದಾಗಿದ್ದು, ಅದನ್ನು ತೀವ್ರವಾಗಿ ವಿರೋಧಿಸುವುದಾಗಿ ಹೇಳಿದೆ.

ಇದೊಂದು ಬೃಹತ್ ವಿಜಯ, ಆದರೂ ಹೋರಾಟನಿರತ ಕಾರ್ಮಿಕರು ಸರ್ಕಾರದ ಮುಂದಿನ ನಡೆಯ ಮೇಲೆ ಬಲವಾದ ನಿಗಾ ಇಡಬೇಕು ಎಂದು ಹೇಳಿದೆ.

ಹರ್ಯಾಣದ ಕ್ರೀಡಾ ಸಚಿವರ ಲೈಂಗಿಕ ಕಿರುಕುಳದ ಪ್ರಕರಣದಲ್ಲಿ ನ್ಯಾಯಯುತ ತನಿಖೆಗೆ ಅಡ್ಡಿ ನಿವಾರಿಸಲು ಮಧ್ಯಪ್ರವೇಶಿಸಬೇಕು

– ಐಓಎ ಅಧ್ಯಕ್ಷೆಗೆ ಎಐಡಿಡಬ್ಲ್ಯುಎ ಮುಖಂಡರ ಬಹಿರಂಗ ಪತ್ರ

ಹರ್ಯಾಣ ರಾಜ್ಯದ ಕ್ರೀಡಾ ವಿಭಾಗದಲ್ಲಿ ಜೂನಿಯರ್ ಕೋಚ್ ಆಗಿ ಸೇವೆ ಸಲ್ಲಿಸುತ್ತಿರುವ ಖ್ಯಾತ ಅಂತರರಾಷ್ಟೀಯ ಮಹಿಳಾ ಕ್ರೀಡಾ ಪಟುವಿಗೆ ಲೈಂಗಿಕ ಕಿರುಕುಳ ಕೊಡುತ್ತಿರುವ ಆರೋಪಕ್ಕೆ ಒಳಗಾಗಿರುವ ಅಲ್ಲಿನ ಕ್ರೀಡಾ ಮಂತ್ರಿಯನ್ನು ಸರಕಾರದ ಎಲ್ಲ ಸರಕಾರೀ ಹುದ್ದೆಗಳಿಂದ ತೆಗೆದು ಹಾಕಿ ಆತನ ವಿರುದ್ಧ ಕಾನೂನು ಕ್ರಮ ಆರಂಭಿಸಬೇಕಾಗಿತ್ತು. ಆದರೆ ಬಹಳ ಒತ್ತಡದ ನಂತರ ಆತ ಕ್ರೀಡಾ ಇಲಾಖೆಯ ಹೊಣೆಯಿಂದ ರಾಜೀನಾಮೆ ಕೊಟ್ಟಿದ್ದಾರಷ್ಟೆ. ಆದರೆ ಸಚಿವ ಸಂಪುಟದಲ್ಲಿ ಮುಂದುವರೆಯುತ್ತಿದ್ದಾರೆ. ತನ್ನ ಪ್ರಭಾವೀ ಸ್ಥಾನವನ್ನು ಬಳಸಿ ಆತ ನ್ಯಾಯದ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರುತ್ತಿದ್ದಾರೆ. ಆದ್ದರಿಂದ ಇದರಲ್ಲಿ ಮಧ್ಯಪ್ರವೇಶಿಸಿ ಪೀಡಿತೆಗೆ ನ್ಯಾಯ ಸಿಗುವಂತೆ ಮಾಡಬೇಕು ಎಂದು ಇತ್ತೀಚೆಗೆ ಭಾರತೀಯ ಒಲಿಂಪಿಕ್ ಅಸೋಸಿಯೇಷನ್‌ನ (ಐಓಎ) ಮೊದಲ ಮಹಿಳಾ ಅಧ್ಯಕ್ಷೆಯಾಗಿ ಅಧಿಕಾರ ವಹಿಸಿಕೊಂಡಿರುವ ಪಿ.ಟಿ. ಉಷಾರವರಿಗೆ, ಜನವಾದಿ ಮಹಿಳಾ ಸಂಘಟನೆಯ ಮುಖಂಡರಾದ ಜಗ್ಮತಿ ಸಂಗ್ವಾನ್ ಒಂದು ಬಹಿರಂಗ ಪತ್ರ ಬರೆದಿದ್ದಾರೆ.

ಜಗ್ಮತಿ ಸಂಗ್ವಾನ್ ಸ್ವತಃ ಒಬ್ಬರು ಪ್ರಶಸ್ತಿ ವಿಜೇತ ಕ್ರೀಡಾಪಟುವಾಗಿದ್ದು 9ನೇ ಏಷ್ಯಾ ಕ್ರೀಡಾಕೂಟದಲ್ಲಿ ಭಾರತವನ್ನು ಪ್ರತಿನಿಧಿಸಿದ ತಂಡದಲ್ಲಿ ಪಿ.ಟಿ. ಉಷಾರೊಂದಿಗೆ ಇದ್ದರು. ಅಲ್ಲದೆ ಹರ್ಯಾಣದ ರೋಹ್ತಕ್‌ನಲ್ಲಿರುವ ಮಹರ್ಷಿ ದಯಾನಂದ ವಿಶ್ವವಿದ್ಯಾಲಯದಲ್ಲಿ ಮಹಿಳಾ ಅಧ್ಯಯನದ ಮಾಜಿ ನಿರ್ದೇಶಕರು ಕೂಡ.

ಆರೋಪಿ ಸಚಿವ ಸಂಪುಟದಲ್ಲಿ ಮುಂದುವರೆಯುತ್ತಿರುವುದರಿಂದ ಪುಟ 15 ಕ್ಕೆ

ಇನ್ನು ಮುಂದೆ ನವಂಬರ್ 8 ರಂದು ನೋಟುರದ್ಧತಿ ದಿನಾಚರಣೆ?

ಇದು ಅಮೃತ ಕಾಲ

ಕೊನೆಗೂ ದೇಶದ ಸರ್ವೋಚ್ಚ ನ್ಯಾಯಾಲಯ ಎನ್‌ಡಿಎ–1 ಸರಕಾರದ ನೋಟು ರದ್ದತಿಗೆ ಹಾಕಿದ್ದ ಸವಾಲುಗಳ ಬಗ್ಗೆ 6 ವರ್ಷಗಳ ನಂತರ ಒಂದು ತೀರ್ಪು ನೀಡಿದೆ. ಅದು ಈ ಕ್ರಮ ಕಾನೂನುಬಾಹಿರವಾಗಿಲ್ಲ ಅಥವ ಅದರಲ್ಲಿ ದೋಷವೇನೂ ಇಲ್ಲ ಎಂದು 4:1 ಬಹುಮತದಿಂದ ಹೇಳಿರುವ ತೀರ್ಪು.

ಆಳುವ ಪಕ್ಷದ ಮುಖಂಡರು ತಕ್ಷಣವೇ ಇದನು ಸ್ವಾಗತಿಸುತ್ತ, ಪ್ರಧಾನ ಮಂತ್ರಿಗಳ "ಐತಿಹಾಸಿಕ' ಕ್ರಮವನ್ನು ದೇಶದ ಸರ್ವೋಚ್ಚ ನ್ಯಾಯಾಲಯ ಎತ್ತಿ ಹಿಡಿದಿದೆ ಎಂದು ಆನಂದತುಂದಿಲರಾಗಿ ಹೇಳುತ್ತಿದ್ದಾರೆ. ಅದು ರಾಷ್ಟ್ರೀಯ ಹಿತದೃಷ್ಟಿಯಿಂದ ಕೈಗೊಂಡ ಕ್ರಮವಾಗಿತ್ತು ಎಂದಿರುವ ಮಾಜಿ ಕಾನೂನುಮಂತ್ರಿಗಳು ಮುಂದುವರೆದು, ರಾಹುಲ್ ಗಾಂಧಿಯವರು ಈಗ ಇದರ ವಿರುದ್ಧ ಪ್ರಚಾರ ಮಾಡಿದ್ದಕ್ಕೆ ಕ್ಷಮೆ ಕೇಳುತ್ತಾರೆಯೇ ಎಂದೂ ಕೇಳಿದ್ದಾರೆ.

ಬಹುಮತ ಮತ್ತು ಭಿನ್ನಮತ–ಕೆಲವು ಗಮನಾರ್ಹ ಅಂಶಗಳು

ಆದರೆ ಸುಪ್ರಿಂ ಕೋರ್ಟಿನ ತೀರ್ಪು ಸರ್ವಾನುಮತದ ತೀರ್ಪು ಅಲ್ಲ ಎಂಬ ಕಾರಣಕ್ಕಷ್ಟೇ ಗಮನಾರ್ಹವಲ್ಲ.

ಬಹುಮತದ ತೀರ್ಪು 8 ನವಂಬರ್ 2016 ರಂದು ಸರಕಾರ ಕೈಗೊಂಡ ಕ್ರಮ ಕಾನೂನುಬಾಹಿರವೇನೂ ಆಗಿರಲಿಲ್ಲ ಅಥವ ಅಥವ ಅದರಲ್ಲಿ ಕಾನೂನಿನ ದೋಷವೇನೂ ಇರಲಿಲ್ಲ ಎಂದೇನೋ ಹೇಳಿದೆ.. "ಆದರೆ. ಯಾವ ಉದ್ದೇಶದಿಂದ ಸರಕಾರ ನೋಟುರದ್ಧತಿ ಕ್ರಮವನ್ನು ತಂದಿತೋ ಅದು ಈಡೇರಿದೆಯೇ ಅಥವ ಪ್ರತ್ಯಕ್ಷ ಅಥವ ಪರೋಕ್ಷ ಪ್ರಯೋಜನಗಳನ್ನು ತಂದಿದೆಯೇ ಎಂಬ ಪ್ರಶ್ನೆಗೆ ನಾವು ಹೋಗ ಬಯಸುವುದಿಲ್ಲ. ಆ ಪ್ರಶ್ನೆಯನ್ನು ಪರಿಶೀಲಿಸುವ ಪರಿಣತಿ ನಮಗಿಲ್ಲ. ಅದು ಪರಿಣತರ ಕ್ಷೇತ್ರದಲ್ಲಿದ್ದರೇ ಒಳ್ಳೆಯದು" ಎಂದು ಹೇಳಿರುವುದನ್ನೂ ಗಮನಿಸಬೇಕಾಗುತ್ತದೆ ಎಂದು ವಿಶ್ಲೇಷಕರು ಹೇಳುತ್ತಿದ್ದಾರೆ. ಇಂತಹ ಕ್ರಮ ಅಗತ್ಯವಾಗಿತ್ತೇ, ಅಥವ ಇದಕ್ಕಿಂತ ಉತ್ತಮ ಪಯಾಯಗಳಿದ್ದವೇ ಎಂಬುದನ್ನು ಸಂಬಂಧಪಟ್ಟ ಪರಿಣಿತರೇ ಹೇಳಬೇಕು ಎಂದಷ್ಟೇ ಹೇಳುತ್ತದೆ ಬಹುಮತದ ತೀರ್ಪು.

ಇನ್ನೊಂದೆಡೆಯಲ್ಲಿ, ಭಿನ್ನಮತದ ತೀರ್ಪಂತೂ ನವಂಬರ್ 8, 2016 ರಂದು ಆರ್‌ಬಿಐ ಕಾಯ್ದೆಯು ವಿಭಾಗ 26(2)ರ ಅಡಿಯುಲ್ಲಿ ಹೊರಡಿಸಿದ ಅಧಿಸೂಚನೆ ಕಾನೂನಾತ್ಮಕವಾಗಿಲ್ಲ, ಇದನ್ನೊಳಗೊಂಡ 2016ರ ಸುಗ್ರೀವಾಜ್ಞೆ ಮತ್ತು 2017ರ ಕಾಯ್ದೆ ಕೂಡ ಕಾನೂನಾತ್ಮಕವಾಗಿಲ್ಲ ಎಂದು ಸ್ಪಷ್ಟವಾಗಿ ಹೇಳಿದೆ. ಅಲ್ಲದೆ, ಈ ಕ್ರಮ ನಿರೀಕ್ಷಿಸಿದಷ್ಟು ಪರಿಣಾಮಕಾರಿಯಾಗಿರಲಿಕ್ಕಿಲ್ಲ, ಏಕೆಂದರೆ, ರದ್ದಾದ ನೋಟುಗಳಲ್ಲಿ 98% ದಷ್ಟು ವಿನಿಮಯಗೊಂಡುವು, ಅಲ್ಲದೆ, ಹೆಚ್ಚಿನ ಮೌಲ್ಯದ ಅಂದರೆ 2000 ರೂ.ನ ನೋಟುಗಳನ್ನು ಬಿಡುಗಡೆ ಮಾಡಲಾಯ್ತು. ಅದೇನೇ ಇರಲಿ, ಇದರಿಂದ ಆರ್‌ಬಿಐ ಕಾಯ್ದೆ, 1934ರ ಆಧಾರದಲ್ಲಿ ಮಾಡಿರುವ ನೋಟುರದ್ಧತಿ ಕಾನೂನುಬಾಹಿರ ಎಂಬ ತೀರ್ಮಾನ ಬದಲಾಗುವುದಿಲ್ಲ ಎಂದು ತೀರ್ಪು ಹೇಳಿದೆ.

ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಎರಡೂ ತೀರ್ಪುಗಳಲ್ಲಿ, ರಿಝರ್ವ್ ಬ್ಯಾಂಕ್ ಈ ವಿಷಯವನ್ನು ಕೂಲಂಕುಷವಾಗಿ ಪರೀಕ್ಷಿಸಲಿಲ್ಲ, 24 ಗಂಟೆಗಳೊಳಗೆ ಸರಕಾರದ ನಿರ್ಧಾರಕ್ಕೆ ರಬ್ಬರ್ ಸ್ಟಾಂಪ್ ಆಗಿದೆ ಎಂದು ಕೂಡ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಒಪ್ಪಿಕೊಂಡಿರುವುದನ್ನು ಕಾಣಬಹುದು ಎನ್ನುತ್ತಾರೆ ವಿಶ್ಲೇಷಕರು. ಭಿನ್ನಮತದ ತೀರ್ಪಂತೂ, ರಿಜರ್ವ್ ಬ್ಯಾಂಕ್ ಸ್ವತಂತ್ರವಾಗಿ ಯೋಚಿಸಲಿಲ್ಲ, ಅದಕ್ಕೆ ಅದರ ಬಳಿ ಸಮಯವೂ ಇರಲಿಲ್ಲ ಎಂದು ನೇರವಾಗಿಯೇ ಹೇಳಿದೆ.

ನೋಟುರದ್ಧತಿಯ ಕ್ರಮಕ್ಕೆ ಮೂರು ಆಯಾಮಗಳಿವೆ– ಕಾನೂನಾತ್ಮಕ, ರಾಜಕೀಯ ಮತ್ತು ಆರ್ಥಿಕ. ಸುಪ್ರಿಂ ಕೋರ್ಟ್ ಕಾನೂನಾತ್ಮಕ ಅಂಶವನ್ನು ಮಾತ್ರ ಪರಿಗಣಿಸಿದೆ.

ರಾಜಕೀಯ ಆಯಾಮವೆಂದರೆ, ಅದರಿಂದಾಗಿ ಜನರು ಅನಂತವೆನಿಸುವಂತಹ ಸಾಲುಗಳಲ್ಲಿ ಪಟ್ಟ ಪಾಡು, ಸುಮಾರು 80 ಜನರ ಸಾವು, ಲಕ್ಷಾಂತರ ಜನಗಳ ಜೀವನೋಪಾಯಕ್ಕೆ ಉಂಟಾದ ಧಕ್ಕೆ, ಆರ್ಥಿಕ ಆಯಾಮವೆಂದರೆ, ಅದು ಅರ್ಥವ್ಯವಸ್ಥೆಯ ಮೇಲೆ, ಮುಖ್ಯವಾಗಿ ಕಿರು ಉತ್ಪಾದನೆ, ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳ ಮೇಲೆ ಉಂಟುಮಾಡಿದ ಗಂಭೀರ ದುಷ್ಪರಿಣಾಮ.

ಈ ಬಗ್ಗೆ ಸುಪ್ರಿಂ ಕೋರ್ಟಿನ ತೀರ್ಪಿನಿಂದ ಯಾವ ಉತ್ತರವೂ ಸಿಕ್ಕಿಲ್ಲ. ಸಿಗುವಂತೆಯೂ ಇರಲಿಲ್ಲ. ಏಕೆಂದರೆ ಅದೇ ತೀರ್ಪು ಕೂಡ ಹೇಳಿರುವಂತೆ ಈ ಉತ್ತರಗಳನ್ನು ಸಂಬಂಧಪಟ್ಟ ಪರಿಣಿತರಿಂದಲೇ ಪಡೆಯಬೇಕು. ಆ ಉತ್ತರ ಆಗಲೇ ಸಿಕ್ಕಿದೆ– ಅದೆಂದರೆ, ಇದೊಂದು ಅನಗತ್ಯವಾದ ವಿನಾಶಕಾರೀ ಕ್ರಮವಾಗಿತ್ತು ಎಂದು.

ಹೀಗಿರುವಾಗ ಆಳುವ ಪಕ್ಷದ ಮುಖಂಡರ ವಿಜಯೋತ್ಸವದ ಮಾತುಗಳು ವಿಚಿತ್ರವೇ ಸರಿ. ಅವರು ಇದನ್ನು ನಿಜವಾಗಿ ಒಂದು ವಿಜಯ ಎಂದು ಭಾವಿಸುವುದಾದರೆ, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿಯವರು ಟಿಪ್ಪಣಿ ಮಾಡಿರುವಂತೆ–ಬಿಜೆಪಿ ನೋಟುರದ್ಧತಿ ದಿನಾಚರಣೆ ಏಕೆ ನಡೆಸುತ್ತಿಲ್ಲ? ಅಥವ ಈ ವರ್ಷದಿಂದ ಅದನ್ನೂ ಆರಂಭಿಸುವ ಧೈರ್ಯವನ್ನು ಈ ಬಹುಮತದ ತೀರ್ಪು ಅವರಿಗೆ ನೀಡಿದೆಯೇ?



"ನೋಟುರದ್ಧತಿ ಬಹಳ ಉತ್ತಮ-ಅರ್ಥವ್ಯವಸ್ಥೆಗೆ ಸಾರ್!"
"ಅದನ್ನು ಇನ್ನೊಮ್ಮೆ ಮಾಡೋಣ!"
ವ್ಯಂಗ್ಯಚಿತ್ರ ಕೃಪೆ: ಅಲೋಕ್ ನಿರಂತರ್



"ನಿಮ್ಮ ಲೈಸೆನ್ಸ್. ಸಕ್ರಮವಾಗಿದೆ"
ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ

'ಪ್ರತಿಯೊಂದು ಉದಾತ್ತ ಧ್ಯೇಯದಲ್ಲೂ ಅದರ ಹುತಾತ್ಮರಿರುತ್ತಾರೆ'?!

ಈ ಬಹುಮತದ ಮತ್ತು ಭಿನ್ನಮತದ ತೀರ್ಪುಗಳನ್ನು ಆಳವಾದ ವಿಶ್ಲೇಷಣೆಗೆ ಒಳಪಡಿಸಿರುವ ಒಬ್ಬ ವಿಶ್ಲೇಷಕರು ಬಹುಮತದ ತೀರ್ಪು ಸರಕಾರದ ತರ್ಕಗಳನ್ನು ಸಮರ್ಥಿಸಲು ರಿಜರ್ವ್ ಬ್ಯಾಂಕನ್ನು ಒಮ್ಮೆ ಮೇಲ್ದರ್ಜೆಗೇರಿಸಿದರೆ, ಕೆಲವೊಮ್ಮೆ ಕೆಳದರ್ಜೆಗಿಳಿಸುವ "ಅನುಕೂಲಸಿಂಧು ಸಂವಿಧಾನಾತ್ಮಕತೆ'ಯನ್ನು ಪ್ರದರ್ಶಿಸುವಂತೆ ಕಾಣುತ್ತದೆ ಎಂದಿದ್ದಾರೆ. ಅದರ ತೀರ್ಪಿನ 259 ಪುಟಗಳಲ್ಲಿ ಬಹುಪಾಲನ್ನು ಸರಕಾರದ ತರ್ಕಗಳನ್ನು ಪುನರುಚ್ಚರಿಸಲು ಮತ್ತು ಅದನ್ನು ಒಪ್ಪಲು ಕಳೆದಿದೆ. ಇದರಿಂದಾಗಿ ಸರಕಾರದ ಮತ್ತು ಆರ್‌ಬಿಐನ ಅಫಿಡವಿಟ್‌ಗಳಲ್ಲಿ ಕಾಣುವ ವಿರೋಧಾಭಾಸ ಬಹುಮತದ ತೀರ್ಪಿನಲ್ಲೂ ಬಿಂಬಿತವಾಗಿದೆ ಎಂದು ಅವರು ಹೇಳುತ್ತಾರೆ(ಗೌತಮ್ ಭಾಟಿಯಾ, ದಿ ವೈರ್, ಜನವರಿ 3).

ನೋಟುರದ್ದತಿ ಕ್ರಮದಿಂದಾಗಿ ಜನರು ಬಹಳಷ್ಟು ಸಂಕಟಗಳಿಗೀಡಾದರು ಎಂಬ ಅರ್ಜಿದಾರರ ತರ್ಕವನ್ನು ತಳ್ಳಿಹಾಕುತ್ತ ಬಹುಮತದ ತೀರ್ಪು 'ಪ್ರತಿಯೊಂದು ಉದಾತ್ತ ಧ್ಯೇಯದಲ್ಲೂ ಅದರ ಹುತಾತ್ಮರಿರುತ್ತಾರೆ' ಎಂಬ ಮಾತನ್ನು ಉಲ್ಲೇಖಿಸುತ್ತದೆ.

ಹಾಗಿದ್ದರೆ, "ಈ ಕ್ರಮದಿಂದಾಗಿ ಪ್ರಾಣ ಕಳಕೊಂಡವರು ನೋಟುರದ್ಧತಿ ಎಂಬ ಮಹಾನ್ ಧರ್ಮದ ಸೇವಾರ್ಥ ಮಹಾನ್ ತ್ಯಾಗಮಾಡಿದರು. ಅವರು ಸತ್ತದ್ದು ಪ್ರಭುತ್ವದ, ಮತ್ತು ಆಡಳಿತದ ವಿಫಲತೆಯಿಂದಲ್ಲ. ಹೀಗೆ ಹೇಳುವಲ್ಲಿ ಬಹುಮತದ ತೀರ್ಪು ಮಾನವ ಜೀವದ ಬಗ್ಗೆ ನಿರ್ದಯತೆ ಮತ್ತು ಉಪೇಕ್ಷೆಯನ್ನಷ್ಟೇ ಪ್ರದರ್ಶಿಸಿಲ್ಲ, ಸತ್ತವರಿಗೆ ಘನತೆಯನ್ನೂ ನಿರಾಕರಿಸುತ್ತದೆ, ಅವರು ಹೇಗೆ ಸತ್ತರು, ಏಕೆ ಸತ್ತರು ಎಂದು ಪ್ರಾಮಾಣಿಕವಾಗಿ ಒಪ್ಪಿಕೊಳ್ಳದೆ ಅವರನ್ನು ಹುತಾತ್ಮಗಿರಿಯ ಚಿಂದಿಯಾದ ಬಾವುಟದಲ್ಲಿ ಸುತ್ತಿಡಲು ಪ್ರಯತ್ನಿಸುತ್ತದೆ. ಈ ಪ್ರಕರಣ ಎಬ್ಬಿಸಿದ ಧೂಳು ಚದುರಿದ ಎಷ್ಟೋ ಕಾಲದ ನಂತರ, ನೋಟುರದ್ದತಿಯೇ ಒಂದು ನೆನಪಾಗಿ ಬಿಟ್ಟ ಎಷ್ಟೋ ಕಾಲದ ನಂತರವೂ ಈ ಸಾಲು ನ್ಯಾಯಾಂಗದ ಚರಿತ್ರೆಯ ಮೇಲೆ ಒಂದು ಅಳಿಸಲಾಗದ ಕಳಂಕವಾಗಿ ಉಳಿಯುತ್ತದೆ" ಎಂದು ಈ ಬಗ್ಗೆ ಟಿಪ್ಪಣಿ ಮಾಡುತ್ತ ಗೌತಮ್ ಭಾಟಿಯ ನೋವಿನಿಂದ ಹೇಳುತ್ತಾರೆ.

ಕನ್ನಡ ನಾಡು ನುಡಿಯ ತಲ್ಲಣಗಳನ್ನು ಕಡೆಗಣಿಸಿರುವ ಸಾಹಿತ್ಯ ಸಮ್ಮೇಳನ: ಸಿಪಿಐ(ಎಂ)

ಕನ್ನಡ ನಾಡು ನುಡಿಯ ಮೇಲೆ ಭಾರತ ಒಕ್ಕೂಟ ಹಾಗೂ ರಾಜ್ಯ ಸರ್ಕಾರಗಳ ಲೂಟಿಕೋರ ಕಾರ್ಪೋರೇಟ್ ಕಂಪನಿಗಳ ಪರ ನೀತಿಗಳಿಂದಾಗಿ ರಾಜ್ಯದಲ್ಲಿ ಉಸಿರು ಕಟ್ಟಿದ ಗಂಭೀರ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಒಟ್ಟಾರೆ ಜನತೆಯ ಜನವಿಚಾರಗಳನ್ನು ಕನ್ನಡ ಸಾಹಿತ್ಯ ಸಮ್ಮೇಳನ ಕಡೆಗಣಿಸಿದೆ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)–ಸಿಪಿಐ(ಎಂ), ಕರ್ನಾಟಕ ರಾಜ್ಯ ಸಮಿತಿ ತಿಳಿಸಿದೆ.

ಹೇಳಿಕೆಯನ್ನು ಬಿಡುಗಡೆಗೊಳಿಸಿರುವ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು. ಬಸವರಾಜ ಅವರು, 'ನೊಬೆಲ್ ಪ್ರಶಸ್ತಿ ಪುರಸ್ಕೃತ ವಿಶ್ವ ಜನ ಕವಿ ಪಾಬ್ಲೋ ನೆರೂದ'ನ ನೋವುಂಡು ಆಕ್ರೋಶಿಸಿದಂತೆ, "ನೋಡಿ ಬೀದಿಯ ಮೇಲೆ ರಕ್ತವಿದೆ! ರಕ್ತವಿದೆ ಬೀದಿಯ ಮೇಲೆ" ಎಂಬಂತಹ ಗಂಭೀರ ಸನ್ನಿವೇಶದಲ್ಲಿ ಹಾವೇರಿ ನಗರದಲ್ಲಿ 86 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆ. ಆದರೆ, ಇಂತಹ ಜ್ವಲಂತ ಪ್ರಶ್ನೆಗಳನ್ನು ಸಾಹಿತ್ಯ ಸಮ್ಮೇಳನ ಒಳಗೊಳ್ಳದಿರುವುದು ವಿಷಾಧಕರ ಎಂದು ತಿಳಿಸಿದ್ದಾರೆ.

ಕೃಷಿ, ಕೈಗಾರಿಕಾ ಬಿಕ್ಕಟ್ಟು, ನೈಸರ್ಗಿಕ ಪ್ರಕೋಪಗಳಿಂದಾಗಿ ಜನತೆ ತತ್ತರಿಸುತ್ತಿದೆ, ಸೌಹಾರ್ದತೆ ಕದಡಿದೆ. ಒಕ್ಕೂಟ ಹಾಗೂ ರಾಜ್ಯ ಸರಕಾರಗಳು ನಮ್ಮ ನುಡಿಯ ಮೇಲೆ ಗಂಭೀರ ಧಾಳಿಗಳನ್ನು ಹರಿಬಿಟ್ಟಿವೆ. ಶಿಕ್ಷಣದ ವ್ಯಾಪಾರೀಕರಣ, ಕೋಮುವಾದೀಕರಣದ ಮೂಲಕ ಸಾರ್ವಜನಿಕ ಶಿಕ್ಷಣ ಹಾಗೂ ಕನ್ನಡ ಮಾಧ್ಯಮ ಶಾಲೆಗಳನ್ನು ಕೊನೆಗೊಳಿಸುವ ಮತ್ತು ರಾಜ್ಯದ ಭವಿಷ್ಯವಾಗಿರುವ ಎಳೆಯ ಮನಸ್ಸುಗಳೊಳಗೆ, ಕರ್ನಾಟಕದ ಸಮಗ್ರತೆಗೆ ಭಂಗ ಉಂಟುಮಾಡುವ ವಿಷವನ್ನು ಪ್ರಕ್ರಿಯೆಗಳು ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಿಂದ ಆರಂಭವಾಗಿವೆ. ಕನ್ನಡ ಭಾಷೆಯನ್ನು ಒಂದು ರಾಷ್ಟ್ರೀಯ ಭಾಷೆಯೆಂದು ಸಂವಿಧಾನ ಒಪ್ಪಿಕೊಂಡಿರುವಾಗ ಕನ್ನಡ ಹಾಗೂ ಅದರ ಸೋದರ ಭಾಷೆಗಳ ಮೇಲೆ ಮತ್ತೊಂದು ರಾಷ್ಟ್ರೀಯ ಭಾಷೆಯಾದ ಹಿಂದಿ ಭಾಷೆಯನ್ನು ಹೇರಲಾಗುತ್ತಿದೆ ಎಂದು ಹೇಳಿದ್ದಾರೆ.

ಕಾರ್ಪೋರೇಟ್ ಕಂಪನಿಗಳಿಗೆ ಕನ್ನಡದ ಅನ್ನದಾತರನ್ನು ನಗ್ನ ಲೂಟಿಗೊಳಪಡಿಸಲು ಮತ್ತು ದೌರ್ಜನ್ಯದ ಮೂಲಕ ಭೂಕಬಳಿಕೆ ನಡೆಸುವುದನ್ನು ಸಿಪಿಐ(ಎಂ) ಪಕ್ಷ ಉಗ್ರವಾಗಿ ಖಂಡಿಸುತ್ತದೆ ಮತ್ತು ಕಳೆದ ಒಂದು ಶತಮಾನದಿಂದ ಗಳಿಸಿದ ನಮ್ಮ ಶ್ರಮಿಕರ ಹಕ್ಕುಗಳನ್ನು ಕಿತ್ತುಕೊಂಡು ಅವರ ಮೇಲೆ ಗುಲಾಮಿತನ ಹೇರುವುದನ್ನು ಪಕ್ಷವು ಸಹಿಸುವುದಿಲ್ಲ.

ನೊಂದು, ನಾಡು–ನುಡಿಯ ದುಸ್ಥಿತಿಯ ಕುರಿತು ತೆರೆದುಕೊಂಡ ಕಾವ್ಯ ಹಾಗೂ ಸಾಹಿತ್ಯವನ್ನು ಮತ್ತು ತೆರೆದುಕೊಂಡ ಬಾಯಿಗಳನ್ನು ಮುಚ್ಚಿಸಲಾಗುತ್ತಿದೆ. ಕೋಮು ದ್ವೇಷವನ್ನೇ ಜೀವನವನ್ನಾಗಿಸುತ್ತಾ, ಬೀದಿಗಿಳಿದ ಜನ ಚಳುವಳಿಗಳ ದಿಕ್ಕು ತಪ್ಪಿಸುವ, ಅವರ ಧ್ವನಿಯನ್ನಡಗಿಸುವ ಕೆಲಸವನ್ನು ದಾರಿ ತಪ್ಪಿದ ಯುವಜನರ ಪ್ರಧಾನ ವೃತ್ತಿಯನ್ನಾಗಿಸಲು ಹೊರಡುತ್ತಿರುವುದು ವಿಪರ್ಯಾಸದಿಂದ ಕೂಡಿದೆ.

ಜಾತಿ ತಾರತಮ್ಯ, ಅಸ್ಪೃಶ್ಯಾಚರಣೆ, ಕೋಮುವಾದ ಕೋರೆ ದಾಡಿಗಳಿಗೆ ಕಾನೂನಿನ ರಕ್ಷಣೆ ನೀಡಿ ಮೊನಚು ಮಾಡಲಾಗಿದೆ. 'ಕುರುಡು ಕಾಂಚಾಣದ ಕ್ರೌರ್ಯದ ಕುಣಿತ' ಕ್ಕೆ ಬೆಂಬಲ ನೀಡುತ್ತಿರುವುದನ್ನು ಸಿಪಿಐ(ಎಂ) ಪಕ್ಷ ಖಂಡಿಸುತ್ತದೆ ಎಂದು ಯು. ಬಸವರಾಜ ಅವರು ವಿವರಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತು ಇಂತಹ ಎಲ್ಲ ಜ್ವಲಂತ ಪ್ರಶ್ನೆಗಳಿಗೆ ಕಿವಿಯಾಗಿ ಸಮ್ಮೇಳನದ ಧ್ವನಿಯಾಗಬೇಕಿತ್ತು. ಕನ್ನಡ ನಾಡು, ನುಡಿಗಾಗಿ ನೈಜ ಕಾಳಜಿಯಿಂದ ಶ್ರಮಿಸುತ್ತಿರುವ ಬಹುತೇಕ ಪ್ರಮುಖ ಧ್ವನಿಗಳನ್ನು ಒಳಗೊಳ್ಳಬೇಕಿತ್ತು. ಕನ್ನಡಕ್ಕೆ ಜಾತಿ ಧರ್ಮಗಳ ತಾರತಮ್ಯವಿಲ್ಲ. ಇದಕ್ಕೆ ಕಳಂಕ ಬಾರದಂತೆ ಕ್ರಮ ವಹಿಸಬೇಕಿತ್ತು ಮತ್ತು ಸಂಕುಚಿತ ರಾಜಕಾರಣದ ಪೊರೆಯನ್ನೊದ್ದಿದೆ ಎಂಬ ಆಪಾದನೆಯಿಂದ ಕನ್ನಡ ಸಾಹಿತ್ಯ ಮುಕ್ತಗೊಳ್ಳಗೊಳ್ಳಬೇಕು ಎಂದು ಸಿಪಿಐ(ಎಂ) ಅಭಿಪ್ರಾಯ ವ್ಯಕ್ತಪಡಿಸಿದೆ.

ಬೀಡಿ ಕಾರ್ಮಿಕರ ಹಕ್ಕೊತ್ತಾಯ ಮಾಸಾಚರಣೆಗೆ ಕರೆ......

ಪುಟ 5 ರಿಂದ

ಅನುಸರಿಸುತ್ತಿರುವ ನೀತಿಯೆ ಕಾರಣ, ಈ ನೀತಿಗಳು ಕಾರ್ಮಿಕರ ವಿರೋಧಿಯಾಗಿದೆ. ಹಾಗಾಗಿ ಕಾರ್ಮಿಕರೆಲ್ಲರು ಸೇರಿ ಐಕ್ಯ ಹೋರಾಟಕ್ಕೆ ಅಣಿನೆರೆಯುವಂತೆ ಕರೆ ನೀಡಿದರು.

ಅಖಿಲ ಭಾರತ ಬೀಡಿ ಕಾರ್ಮಿಕರ ಫೇಡರೆಷನ್‌ಗೆ ಮುಂದಿನ ಅವಧಿಗೆ ಹೊಸ ಸಮಿತಿಯನ್ನು ರಚಿಸಲಾಯಿತು. ಅಧ್ಯಕ್ಷರಾಗಿ ಕಾಂ; ಕೆ.ಪಿ. ಸಹದೇವನ್, ಪ್ರಧಾನ ಕಾರ್ಯದರ್ಶಿಯಾಗಿ ಕಾಂ; ದೇಬಶೀಶ್ ರಾಯ್, ಖಜಾಂಚಿಯಾಗಿ ಕಾಂ; ಬಿಮನ್ ಸನ್ಯಾಲ್ ಅವರು ಅಯ್ಕೆಯಾದರು. 21 ಪದಾಧಿಕಾರಿಗಳು ಹಾಗು 40 ಜನರ ರಾಷ್ಟೀಯ ಸಮಿತಿ ರಚಿಸಲಾಯಿತು. ಕರ್ನಾಟಕದಿಂದ ಕಾಂ.ಜೆ. ಬಾಲಕೃಷ್ಣ ಶೆಟ್ಟಿ, ಕಾಂ. ರಮಣಿ ಅವರು ಉಪಾಧ್ಯಕ್ಷರಾಗಿ, ಕಾಂ. ಸೈಯದ್ ಮುಜೀಬ್ ಅವರು ಕಾರ್ಯಧರ್ಶಿಯಾಗಿ, ರಾಷ್ಟ್ರೀಯ ವರ್ಕಿಂಗ್ ಕಮಿಟಿ ಸದಸ್ಯರಾಗಿ ಕಾಂ. ವಸಂತಾಚಾರಿ, ಕಾಂ.ಬಿ.ಎಂ. ಭಟ್ಟ ಅವರು ಅಯ್ಕೆಯಾದರು.

ಏಪ್ರಿಲ್ 5 ರಂದು ರೈತ–ಕೃಷಿಕೂಲಿಕಾರ–ಕಾರ್ಮಿಕರ ಪಾರ್ಲಿಮೆಂಟ್ ಚಲೋ: ಕೇಂದ್ರ ಸರ್ಕಾರ ನಿರಂತರವಾಗಿ ದುಡಿಯುವ ಜನರ, ರೈತರ, ಕಾರ್ಮಿಕರ ಬದುಕನ್ನು ದುರ್ಭಲಗೊಳಿಸುವ ನೀತಿಗಳನ್ನು ಜಾರಿಗೆ ತರುತ್ತಿದೆ. ಈ ಹಿನ್ನೆಲೆಯಲ್ಲಿ ಅಖಿಲ ಭಾರತ ಕಿಸಾನ್ ಸಭಾ, ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಟನೆ, ಸಿಐಟಿಯು ಜಂಟಿಯಾಗಿ ಜನಪರ ನೀತಿಗಳ ಜಾರಿಗೆ ಅಗ್ರಹಿಸಿ 2023ರ ಏಪ್ರಿಲ್ 5 ರಂದು ಲಕ್ಷಗಟ್ಟಲೆ ಜನರ ಪಾರ್ಲಿಮಂಟ್ ಚಲೋ ಚಳವಳಿ ನಡೆಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದ ಡಾ. ಹೇಮಲತ ಅವರು, ಬೀಡಿ ಕಾರ್ಮಿಕರು ಇದರಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಕರೆ ನೀಡಿದರು.



ಕೃಷಿ ಬಿಕ್ಕಟ್ಟನ್ನು ಇಷ್ಟಪಡುವ ಸಾಮ್ರಾಜ್ಯಶಾಹಿ ಮತ್ತು ಸಾಮ್ರಾಜ್ಯಶಾಹಿಯ ಎದುರು ತಲೆಬಾಗುವ ಸರಕಾರ

ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಆಳ್ವಿಕೆಯ ಆರಂಭವೂ ಬರಗಾಲದೊಂದಿಗೇ, ಅಂತ್ಯವೂ ಬರಗಾಲದೊಂದಿಗೇ ಸಂಭವಿಸಿರುವುದು ಕಾಕತಾಳೀಯವಲ್ಲ. ಬರದ ಜೊತೆಗೆ ಸಾಲ, ಬಡತನ ಮತ್ತು ರೈತಾಪಿಯನ್ನು ಹಿಂಡುವುದು, ಇವುಗಳು ವಸಾಹತುಶಾಹಿ ಆಡಳಿತದ ಸಾಮಾನ್ಯ ಲಕ್ಷಣಗಳಾಗಿದ್ದರಿಂದ ಬ್ರಿಟಿಷ್ ಆಳ್ವಿಕೆಯ ಆರಂಭ ಮತ್ತು ಅಂತ್ಯವು ಬರಗಾಲಗಳ ಮೂಲಕ ಪ್ರಕಟಗೊಂಡ ಕೃಷಿ ಬಿಕ್ಕಟ್ಟುಗಳೊಂದಿಗೆ ಕೂಡಿತ್ತು. ಆದುದರಿಂದ, ಕೃಷಿ ಬಿಕ್ಕಟ್ಟನ್ನು ಮೀರಿ ನಿಲ್ಲಬೇಕಾದರೆ ಮತ್ತು ಆಹಾರ ಸ್ವಾವಲಂಬನೆಯನ್ನು ಸಂರಕ್ಷಿಸಿಕೊಳ್ಳಬೇಕಾದರೆ, ಸರ್ಕಾರವು ಸಾಮ್ರಾಜ್ಯಶಾಹಿಯ ಬೇಡಿಕೆಗಳಿಗೆ ವಿರುದ್ಧವಾಗಿ ರೈತಾಪಿಯನ್ನು ರಕ್ಷಿಸಲೇ ಬೇಕಾಗಿದೆ. ಆದರೆ "ರಾಷ್ಟ್ರೀಯತೆ"ಯ ಬಗ್ಗೆ ಆಡಂಬರದ ಮಾತುಗಳ ಹಿಂದೆ ಸಾಮ್ರಾಜ್ಯಶಾಹಿ ಬೇಡಿಕೆಗಳಿಗೆ ಶರಣಾಗುವ ದಾಸ್ಯ ಮನೋಭಾವದ ಪುಕ್ಕಲು ಸರ್ಕಾರವು ಸಾಮ್ರಾಜ್ಯಶಾಹಿಯ ಹುಕುಂಗಳನ್ನು ಗುಲಾಮನಂತೆ ತಲೆತಗ್ಗಿಸಿ ಪಾಲಿಸುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್ **ಅನು: ಕೆ.ಎಂ.ನಾಗರಾಜ್**

ದಕ್ಷಿಣ ಜಗತ್ತಿನ ದೇಶಗಳು ಕೃಷಿ ಬಿಕ್ಕಟ್ಟುಗಳಿಗೆ ಒಳಗಾಗುವ ಪ್ರಕ್ರಿಯೆಗೂ ಮತ್ತು ಸಾಮ್ರಾಜ್ಯಶಾಹಿಯು ಬಲಗೊಳ್ಳುವ ಪ್ರಕ್ರಿಯೆಗೂ ಒಂದು ನೇರ ಸಂಬಂಧವಿದೆ. ಕೃಷಿ ಬಿಕ್ಕಟ್ಟುಗಳು ಸಾಮ್ರಾಜ್ಯಶಾಹಿಯ ಬಲವರ್ಧನೆಯ ಇನ್ನೊಂದು ಮಗ್ಗುಲು ಎಂಬುದನ್ನು ಸ್ಪಷ್ಟಪಡಿಸುವ ಹಲವು ನಿದರ್ಶನಗಳು ಭಾರತದಲ್ಲಿ ಸಿಗುತ್ತವೆ. ಹೆಚ್ಚುಕಡಿಮೆ ವಸಾಹತುಶಾಹಿಯ ಅವಧಿಯುದ್ದಕ್ಕೂ ಬರಗಾಲಗಳ ರೂಪದಲ್ಲಿ ಪದೇ ಪದೇ ಪ್ರಕಟಗೊಂಡ ಕೃಷಿ ಬಿಕ್ಕಟ್ಟನ್ನು ಭಾರತವು ಅನೇಕ ಸಲ ಕಂಡಿದೆ. ಬಂಗಾಳದ ಕಂದಾಯ ಸಂಗ್ರಹಣೆಯ ಹಕ್ಕನ್ನು ಮೊಘಲ್ ಚಕ್ರವರ್ತಿ ಷಾಆಲಂನಿಂದ 1765ರಲ್ಲಿ ಪಡೆದುಕೊಳ್ಳುವ ಮೂಲಕ ಈಸ್ಟ್‌ಇಂಡಿಯಾ ಕಂಪೆನಿಯು ಭಾರತದಲ್ಲಿ ತನ್ನ ವಸಾಹತುಶಾಹಿ ಆಳ್ವಿಕೆಯನ್ನು ಆರಂಭಿಸಿತು. ನಂತರದ ಐದೇ ಐದು ವರ್ಷಗಳಲ್ಲಿ, ಅಂದರೆ 1770ರಲ್ಲಿ, ಒಂದು ಭಾರೀ ಬರಗಾಲಕ್ಕೆ ಒಳಗಾದ ಬಂಗಾಳವು ಅಪಾರ ಕಷ್ಟನಷ್ಟಗಳನ್ನು ಅನುಭವಿಸಿತು. ವಿಶ್ವದ ಇತಿಹಾಸದಲ್ಲೇ ಅತ್ಯಂತ ಭೀಕರವಾದದ್ದು ಎಂದು ಹೇಳಲಾದ ಈ ಬರಗಾಲದಲ್ಲಿ ಕಂಪೆನಿ ಅಧಿಕಾರಿಗಳ ಪ್ರಕಾರವೇ, ಬಂಗಾಳದ ಒಟ್ಟು 3 ಕೋಟಿ ಜನರ ಪೈಕಿ 1 ಕೋಟಿ ಜನರು ಸಾವಿಗೀಡಾದರು. ಬಂಗಾಳದಲ್ಲಿ 1943–44ರಲ್ಲಿ ಕಾಣಿಸಿಕೊಂಡ ಮತ್ತೊಂದು ಭೀಕರ ಬರಗಾಲದಲ್ಲಿ ಕನಿಷ್ಟ 30 ಲಕ್ಷ ಜನರು ಜೀವ ಕಳೆದುಕೊಂಡರು. ಹೀಗೆ, ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಯ ಆರಂಭ ಮತ್ತು ಅಂತ್ಯವು ಬರಗಾಲಗಳ ಮೂಲಕ ಪ್ರಕಟಗೊಂಡ ಕೃಷಿ ಬಿಕ್ಕಟ್ಟುಗಳೊಂದಿಗೆ ಕೂಡಿತ್ತು.

ಬ್ರಿಟಿಷರ ಆಳ್ವಿಕೆಯ ಆರಂಭದ ಕಾಲದಲ್ಲಿ, ಅತಿ ಹೆಚ್ಚಿನ ಮಟ್ಟದ ಭೂ–ಕಂದಾಯವನ್ನು ವಸೂಲಿ ಮಾಡುತ್ತಿದ್ದ ಕ್ರಮವೇ ಬರ ಉಂಟಾಗಲು ಕಾರಣವಾಗಿತ್ತು. ಬ್ರಿಟಿಷ್ ಆಳ್ವಿಕೆಯ ಅಂತ್ಯವೂ, ತೆರಿಗೆಗಳ ಜೊತೆಗೆ, ದಕ್ಷಿಣ ಏಷ್ಯಾದಲ್ಲಿ ತನ್ನ ಮಿತ್ರ ರಾಷ್ಟ್ರಗಳ ಯುದ್ಧ ವೆಚ್ಚಗಳಿಗೆ ಹಣ ಒದಗಿಸಿದ ಕಾರಣದಿಂದಾಗಿ ಉದ್ಭವಿಸಿದ ಅತಿ ಹೆಚ್ಚಿನ ಮಟ್ಟದ ಕೊರತೆಹಣಕಾಸಿನ ಕ್ರಮಗಳಿಂದಾಗಿ ಹಣದುಬ್ಬರ ಉಂಟಾದ ಸನ್ನಿವೇಶದಲ್ಲಿ ಜನರಿಂದ ಬಲವಂತವಾಗಿ ವಸೂಲಿ ಮಾಡುತ್ತಿದ್ದ ತೆರಿಗೆಗಳು ಸೃಷ್ಟಿಸಿದ ಬರದ ಸನ್ನಿವೇಶದಲ್ಲೇ ಸಂಭವಿಸಿತು. ಬರಗಾಲಕ್ಕೆ ಬಲಿಯಾಗುತ್ತಿದ್ದವರು ಪ್ರಧಾನವಾಗಿ ರೈತರು ಮತ್ತು ಕೃಷಿ ಕಾರ್ಮಿಕರನ್ನೊಳಗೊಂಡ ಗ್ರಾಮೀಣ ಜನರೇ. ಬರದ ಜೊತೆಗೆ ಸಾಲ, ಬಡತನ ಮತ್ತು ರೈತಾಪಿಯನ್ನು ಹಿಂಡುವುದು ಇವುಗಳು ವಸಾಹತುಶಾಹಿ ಆಡಳಿತದ ಸಾಮಾನ್ಯ ಲಕ್ಷಣಗಳಾಗಿದ್ದವು.

ವಸಾಹತುಶಾಹಿ ಆಡಳಿತಗಾರರ ಈ ರೀತಿಯ ಸುಲಿಗೆಯು ಕೇವಲ ಒಂದು ನಿರಂಕುಶ ವಿದ್ಯಮಾನ ಮಾತ್ರವೇ ಅಲ್ಲ. ಭಾರತದಲ್ಲಿ ನಡೆಯುತ್ತಿದ್ದ ಈ ಸುಲಿಗೆಯು ನಿರ್ದಿಷ್ಟವಾಗಿ ಬ್ರಿಟನ್‌ನಲ್ಲಿ ಮತ್ತು ಸಾಮಾನ್ಯವಾಗಿ ಮಹಾನಗರೀಯ ದೇಶಗಳಲ್ಲಿ ಬಂಡವಾಳಶಾಹಿಯ ಅಭಿವೃದ್ಧಿಯೊಂದಿಗೆ ಸಂಬಂಧ ಹೊಂದಿತ್ತು. ಬಂಡವಾಳಶಾಹಿಯು ಅಭಿವೃದ್ಧಿ ಹೊಂದಲು ಕಚ್ಚಾವಸ್ತುಗಳು ಮತ್ತು ಆಹಾರ ಧಾನ್ಯಗಳನ್ನು ಒಳಗೊಂಡಂತೆ ಹಲವು ಹತ್ತು ಪ್ರಾಥಮಿಕ ಸರಕುಗಳ ಅಗತ್ಯವಿದೆ. ಈ ಅಗತ್ಯ ವಸ್ತುಗಳಿಲ್ಲದೆ ಬಂಡವಾಳಶಾಹಿಯು ಅಭಿವೃದ್ಧಿ ಹೊಂದುವುದು ಸಾಧ್ಯವೇ ಇಲ್ಲ. ಅಷ್ಟೇ ಅಲ್ಲ, ಬಂಡವಾಳಶಾಹಿಯು ಅಭಿವೃದ್ಧಿ ಹೊಂದುತ್ತಿರುವ ಈ ದೇಶಗಳಲ್ಲಿ ಕೆಲವು ಆಹಾರ ಧಾನ್ಯಗಳನ್ನು ಮತ್ತು ಹಲವು ಪ್ರಾಥಮಿಕ ಸರಕುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಅಥವಾ ವರ್ಷವಿಡೀ ಬೆಳೆಯುವುದು ಸಾಧ್ಯವಿಲ್ಲ. ಸಾಂದರ್ಭಿಕವಾಗಿ ಹೇಳುವುದಾದರೆ, ವಿಶ್ವದ ಒಟ್ಟು ತೈಲ ನಿಕ್ಷೇಪದಲ್ಲಿ ಕೇವಲ ಶೇ.11 ರಷ್ಟು ಭಾಗವನ್ನು ಮಾತ್ರ ಹೊಂದಿರುವ ಬಂಡವಾಳದ ನೆಲೆ ಎನಿಸಿರುವ ಈ ಸಮಶೀತೋಷ್ಣ ವಲಯದಲ್ಲಿ ದೊರಕುವ ತೈಲದ ಬಗ್ಗೆ ಸಾಕಷ್ಟು ಚರ್ಚೆಗಳಾಗಿವೆ. ಆದರೆ, ಅದೇ ರೀತಿಯಲ್ಲಿ, ಪ್ರಪಂಚದ ಉಳಿದ ಭಾಗಗಳಲ್ಲಿ, ಅದರಲ್ಲೂ ವಿಶೇಷವಾಗಿ ಉಷ್ಣ ವಲಯದ ಮತ್ತು ಅದರ ಹತ್ತಿರದ ಭೂಮಿಯಲ್ಲಿ ಬೆಳೆಯುವ ವಿವಿಧ ರೀತಿಯ ಕೃಷಿ ಸರಕುಗಳ ಮೇಲಿನ ಅವಲಂಬನೆಯ ಅಂಶದ ಬಗ್ಗೆ ಗಮನ ಹರಿದೇ ಇಲ್ಲ.



ವಸಾಹತುಶಾಹಿ ತೆರಿಗೆ ವ್ಯವಸ್ಥೆ

ಹದಿನೆಂಟನೆಯ ಶತಮಾನದ ಉತ್ತರಾರ್ಧ ಮತ್ತು ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ ಸಂಭವಿಸಿದ ಕೈಗಾರಿಕಾಕ್ರಾಂತಿಯ ಮೂಲಕ ಬಂಡವಾಳಶಾಹಿಯು ತನ್ನದೇ ಆದ ಅಸ್ತಿತ್ವ ಪಡೆದುಕೊಂಡಿತು. ಹತ್ತಿಕೈಗಾರಿಕೆಯು ಅದರ ಕೇಂದ್ರ ಸ್ಥಾನದಲ್ಲಿತ್ತು. ಆದರೆ, ಈ ಕ್ರಾಂತಿ ಸಂಭವಿಸಿದ ಬ್ರಿಟನ್ನಿನಲ್ಲಿ ಹತ್ತಿಯನ್ನು ಬೆಳೆವುದು ಸಾಧ್ಯವೇ ಇಲ್ಲ. ಕಚ್ಚಾ ಹತ್ತಿಯನ್ನು ಉಷ್ಣವಲಯದ ಮತ್ತು ಉಪೋಷ್ಣವಲಯದ ಭೂಪ್ರದೇಶಗಳಿಂದ ಆಮದು ಮಾಡಿಕೊಳ್ಳಬೇಕಾಗಿತ್ತು. ಬ್ರಿಟನ್ನಿನ ಮತ್ತು ಇತರ ಯೂರೋಪಿಯನ್ ದೇಶಗಳ ಕೈಗಾರಿಕೆಗಳಿಗೆ ಬೇಕಾಗುವ ಇಂತಹ ಎಲ್ಲ ಕಚ್ಚಾವಸ್ತುಗಳ ಬೇಡಿಕೆಯನ್ನು ಪೂರೈಸಿಕೊಳ್ಳಲು, ಮೊಟ್ಟ ಮೊದಲನೆಯದಾಗಿ, ಸರಕು ಉತ್ಪಾದನಾ ಪದ್ಧತಿಯನ್ನು ಈ ದೇಶಗಳಲ್ಲಿ ಪರಿಚಯಿಸಬೇಕಾಗಿತ್ತು. ನಿಜ ಅರ್ಥದಲ್ಲಿ ಸರಕು ಉತ್ಪಾದನೆಯನ್ನು ಮಾರುಕಟ್ಟೆಯು ಕೊಡುವ ಸಂಕೇತಗಳ ಆಧಾರದ ಮೇಲೆ ಮಾತ್ರ ಕೈಗೊಳ್ಳಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ, ಕುಟುಂಬದ ಅಥವಾ ರಾಜ್ಯದ ಅಥವಾ ರಾಷ್ಟ್ರಮಟ್ಟದ ಆಹಾರ ಸ್ವಾವಲಂಬನೆಯ ಬಗೆಗಿನ ಕಾಳಜಿಗೆ ಅವಕಾಶವೇ ಇಲ್ಲ. ಎರಡನೆಯದಾಗಿ, ಈ ಕೈಗಾರಿಕಾ ದೇಶಗಳಿಗೆ ಬೇಕಾಗುವ ಅಂತಹ ವಸ್ತುಗಳ ಪೂರೈಕೆಯನ್ನು ಸಾಕಷ್ಟು ಪ್ರಮಾಣದಲ್ಲಿ ಪಡೆಯಬೇಕು ಎಂದಾದರೆ, ಅಂತಹ ವಸ್ತುಗಳನ್ನು ಉತ್ಪಾದಿಸುವ ಪ್ರದೇಶಗಳಲ್ಲಿ ಲಭ್ಯವಿರುವ ಸೀಮಿತ ಭೂಮಿಯ ವಿಸ್ತೀರ್ಣವನ್ನು ಗಮನದಲ್ಲಿಟ್ಟುಕೊಂಡು, ಇದೇ ಉತ್ಪನ್ನಗಳಿಗೆ (ಅಥವಾ ಅದೇ ಭೂಮಿಯಲ್ಲಿ ಬೆಳೆದ ಉತ್ಪನ್ನಗಳಿಗೆ) ಇರುವ ಸ್ಥಳೀಯ ಬೇಡಿಕೆಯನ್ನು ಸಂಕೋಚನಗೊಳಿಸಬೇಕಾಗುತ್ತದೆ.

ವಸಾಹತುಶಾಹಿ ತೆರಿಗೆ ವ್ಯವಸ್ಥೆಯು ಈ ದೇಶಗಳಿಗೆ ಅಗತ್ಯವಿದ್ದ ಈ ಎರಡೂ ಉದ್ದೇಶಗಳನ್ನು ಸಾಧಿಸಿತು. ತೆರಿಗೆಯನ್ನು ದವಸ ಧಾನ್ಯಗಳ ರೂಪದಲ್ಲಿ ಪಡೆಯುತ್ತಿದ್ದ ಮೊಘಲ್ ಭಾರತದಲ್ಲಿದ್ದ ಪದ್ಧತಿಯನ್ನು ವಸಾಹತುಶಾಹಿ ಆಳ್ವಿಕೆಯಡಿಯಲ್ಲಿ ನಗದುರೂಪದ ಭೂಕಂದಾಯ ಪದ್ಧತಿಗೆ ಬದಲಾಯಿಸಿದ ಮತ್ತು ನಂತರದ ದಿನಗಳಲ್ಲಿ ಭೂಕಂದಾಯವನ್ನು ನಿಗದಿತ ಅವಧಿಯೊಳಗೆ ಕಟ್ಟುನಿಟ್ಟಾಗಿ ವಸೂಲಿ ಮಾಡುತ್ತಿದ್ದ ಕ್ರಮದಿಂದಾಗಿ, ರೈತಾಪಿಯು ಸಕಾಲದಲ್ಲಿ ತೆರಿಗೆಕಟ್ಟಲು ವ್ಯಾಪಾರಿಗಳಿಂದ ಸಾಲ ಪಡೆಯುವುದು ಅನಿವಾರ್ಯವಾಯಿತು. ಪ್ರತಿಯಾಗಿ, ಈ ವ್ಯಾಪಾರಿಗಳು ಮುಂಗಡ ಸಾಲ ಕೊಡುವಾಗ, ರೈತರು ಇಂತದ್ದೇ ಪೈರನ್ನು ಬೆಳೆಯುವಂತೆ ಮತ್ತು ಅದನ್ನು ಮೊದಲೇ ನಿರ್ಧರಿಸಿದ ಬೆಲೆಗೆ ಮಾರುವುದಾಗಿ ಕರಾರು ಮಾಡಿಕೊಳ್ಳುವಂತೆ ಪಟ್ಟುಹಿಡಿಯುತ್ತಿದ್ದರು. ಅಂದರೆ, ಸ್ವತಃ ವ್ಯಾಪಾರಿಗಳು ಮಾರುಕಟ್ಟೆಯ ಸಂಕೇತಗಳಿಗೆ ರೈತರು ಸ್ಪಂದಿಸುವಂತೆ ನೋಡಿಕೊಳ್ಳುತ್ತಿದ್ದರು. ಈ ರೀತಿಯಲ್ಲಿ ಸರಕು ಉತ್ಪಾದನೆಯನ್ನು ರೈತ ಕೃಷಿಯಲ್ಲಿ ನೇರವಾಗಿ ಅಲ್ಲದಿದ್ದರೂ, ಪರೋಕ್ಷ ರೀತಿಯಲ್ಲಿ ಪರಿಚಯಿಸಲಾಯಿತು. ಅದೇ ಸಮಯದಲ್ಲಿ, ರೈತಾಪಿಯ ಮೇಲೆ ಭಾರಿ ಪ್ರಮಾಣದ ತೆರಿಗೆಗಳನ್ನು ಹೇರಿದ ಕ್ರಮ ಮತ್ತು ಅದರೊಂದಿಗೆ ಬ್ರಿಟನ್ ಮತ್ತು ಇತರ ದೇಶಗಳಿಂದ ಯಂತ್ರ ತಯಾರಿಕೆಯ ಸರಕುಗಳನ್ನು ಆಮದು ಮಾಡಿಕೊಳ್ಳುತ್ತಿದ್ದ ಕ್ರಮದ ಪರಿಣಾಮವಾಗಿ ಉಂಟಾದ ಅಪ–ಕೈಗಾರೀಕರಣವು(ಇದ್ದ ಕೈಗಾರಿಕೆಗಳ ನಾಶ) ದುಡಿಯುವ ಜನರ ಆದಾಯವನ್ನು ಕುಗ್ಗಿಸಿತು. ಈ ರೀತಿಯಲ್ಲಿ ಬ್ರಿಟನ್ ಮತ್ತು ಇತರ ದೇಶಗಳಿಗೆ ಬೇಕಾಗಿದ್ದ ಸರಕುಗಳನ್ನು ದೊರಕಿಸಿಕೊಳ್ಳಲು ಅನುವಾಗುವಂತೆ ರೈತಾಪಿಯ ಬೇಡಿಕೆಯನ್ನು ಸಂಕೋಚನಗೊಳಿಸಲಾಯಿತು. ಹೀಗೆ ಸಾಮ್ರಾಜ್ಯಶಾಹಿಯ ಎರಡೂ ಉದ್ದೇಶಗಳೂ ವಸಾಹತುಶಾಹಿ ತೆರಿಗೆ ವ್ಯವಸ್ಥೆಯ ಮೂಲಕ ನೆರವೇರಿದವು. ಈ ತೆರಿಗೆ ವ್ಯವಸ್ಥೆಯು ಬ್ರಿಟನ್ ಮತ್ತು ಇತರ ದೇಶಗಳು ಬಯಸಿದ ಸರಕುಗಳನ್ನು ದೊರೆಕಿಸಿತು ಎಂಬುದಷ್ಟೇ ಅಲ್ಲ, ಅವುಗಳನ್ನು ಸುಮಾರಾಗಿ ಪುಕ್ಕಟೆಯಾಗೇ ಒದಗಿಸಿತು.

ವಸಾಹತುಶಾಹಿಯ ಅಂತ್ಯದೊಂದಿಗೆ ಈ ವ್ಯವಸ್ಥೆ ಕೊನೆಗೊಂಡಿತು. ಮೇಲಾಗಿ ಸ್ವತಂತ್ರ ಭಾರತವು ರೂಪಿಸಿದ ನಿಯಂತ್ರಣ ನೀತಿಗಳ ಅರ್ಥವ್ಯವಸ್ಥೆಯು ವಸಾಹತುಶಾಹಿಯ ಒಂದು ಲಕ್ಷಣವೇ ಆಗಿದ್ದ ನಿರಂತರ ಕೃಷಿ ಬಿಕ್ಕಟ್ಟನ್ನು ನಿವಾರಿಸಿತು. ಕೆಲವೇ ಮಂದಿಯ ಬಳಿ ಇದ್ದ ಭೂ ಹಿಡುವಳಿಯ ಪರಿಸ್ಥಿತಿ ಕೊನೆಗೊಳ್ಳಲಿಲ್ಲ. ಜಮೀನ್ದಾರಿಕೆ ಮುಂದುವರಿಯಿತು. ಪ್ರಷ್ಯಾದ ಜಂಕರ್‌ಗಳ ರೀತಿಯಲ್ಲಿ ಭೂಮಾಲೀಕರು ಬಂಡವಾಳಶಾಹಿ ಭೂಮಾಲೀಕರಾಗಿ ಬದಲಾದರು. ರೈತಾಪಿಯ ಶೋಷಣೆ ಹಾಗೆಯೇ ಉಳಿಯಿತು. ಆದರೆ, ಕೃಷಿ ಬಿಕ್ಕಟ್ಟು ವಿನಾಶಕಾರಿ ಬರಗಾಲಗಳ ರೂಪದಲ್ಲಾಗಲಿ ಅಥವಾ ನಿತ್ರಾಣಗೊಳಿಸುವ ಸಾಲಗಳ ರೂಪದಲ್ಲಾಗಲಿ, ಪಟ್ಟಣಗಳಿಗೆ ಸಾಮೂಹಿಕ ವಲಸೆಯ ರೂಪದಲ್ಲಾಗಲಿ, ಅಥವಾ ಸಾಮೂಹಿಕ ಆತ್ಮಹತ್ಯೆಗಳ ರೂಪದಲ್ಲಾಗಲಿ, ರೈತರ ಕೃಷಿಯ ಗುಣಲಕ್ಷಣವಾಗಿ ಪ್ರಕಟಗೊಳ್ಳುವುದು ನಿಂತು ಹೋಯಿತು.

ನವ–ಉದಾರಿಗಳ ಉದ್ದೇಶ ಸಾಧನೆ

ಆದಾಗ್ಯೂ, ಭಾರತದ ಹಿರಿ–ಬೂರ್ಜ್ವಾಗಳು ಜಾಗತೀಕರಣಗೊಂಡ ಹಣಕಾಸು ಬಂಡವಾಳದೊಂದಿಗೆ ಕೈಜೋಡಿಸಿ, ಅರ್ಥವ್ಯವಸ್ಥೆಯನ್ನು ಹಣಕಾಸು ಬಂಡವಾಳದ ಆಧಿಪತ್ಯಕ್ಕೆ ಒಳಪಡಿಸುವ ನವ ಉದಾರವಾದಿ ಆರ್ಥಿಕ ನೀತಿಗಳನ್ನು ಅಳವಡಿಸಿಕೊಂಡ ನಂತರ, ಪರಿಸ್ಥಿತಿ ಬದಲಾಗತೊಡಗಿತು. ಈಗ ದೇಶದ ಹಿರಿ–ಬೂರ್ಜ್ವಾಗಳ ಸಹಯೋಗದೊಂದಿಗೆ ಅರ್ಥವ್ಯವಸ್ಥೆಯಲ್ಲಿ ಮಹಾನಗರೀಯ ಪ್ರಾಬಲ್ಯವು ಮರಳಿದೆ. ಕೃಷಿ ಬಿಕ್ಕಟ್ಟುಗಳೂ ಸಹ ಮರಳಿವೆ. ಕೃಷಿ ಬಿಕ್ಕಟ್ಟುಗಳು ಈಗ ಬರಗಾಲದ ರೂಪದಲ್ಲಿ ಪ್ರಕಟಗೊಳ್ಳುತ್ತಿಲ್ಲ. ರೈತಾಪಿಯ ಹೆಚ್ಚುತ್ತಿರುವ ಬಡತನ, ಸಾಮೂಹಿಕ ಆತ್ಮಹತ್ಯೆಗಳಿಗೆ ಕಾರಣವಾಗುತ್ತಿರುವ ಸಾಲದ ಹೊರೆ ಮತ್ತು ಅತ್ಯಲ್ಪ ಪ್ರಮಾಣದ ಉದ್ಯೋಗಗಳನ್ನು ಹುಡುಕಿಕೊಂಡು ಪಟ್ಟಣಗಳಿಗೆ ಹೋಗುವ ವಲಸೆ ಇವುಗಳು ಈಗ ಕೃಷಿ ಬಿಕ್ಕಟ್ಟುಗಳಾಗಿ ಪ್ರಕಟಗೊಳ್ಳುತ್ತಿವೆ. ಈ ಎಲ್ಲ ಸಮಸ್ಯೆಗಳೂ ಭಾರತದ ಕೃಷಿಯ ಲಾಭದಾಯಕತೆಯ ಕುಸಿತದಿಂದ ಉದ್ಭವಿಸಿವೆ. ಲಾಭದಾಯಕತೆಯ ಈ ಕುಸಿತವು ಅದೆಷ್ಟು ತೀಕ್ಷ್ಣವಾಗಿದೆ ಎಂದರೆ, ರೈತ–ಕೃಷಿಯನ್ನು ಹೆಚ್ಚು ಕಡಿಮೆ ಕಾರ್ಯಸಾಧ್ಯವಾಗದಂತೆ ಮಾಡುವ ಮಟ್ಟಿಗೆ. ಜೊತೆಗೆ, ಶಿಕ್ಷಣ ಮತ್ತು ಆರೋಗ್ಯದಂತಹ ಅಗತ್ಯ ಸೇವೆಗಳ ಖಾಸಗೀಕರಣದಿಂದಾಗಿ ಈ ಸೇವೆಗಳು ಹೆಚ್ಚು ದುಬಾರಿಯಾಗಿವೆ. ಹಾಗಾಗಿ, ರೈತಾಪಿಯ ಹಿಂಡುವಿಕೆಯು ಅಧಿಕಗೊಂಡಿದೆ.

ಕಿರುಉತ್ಪಾದನೆ ಮತ್ತು ರೈತಕೃಷಿಯನ್ನು ಅತಿಕ್ರಮಿಸುವ ದೊಡ್ಡ ಬಂಡವಾಳದ ಆಕಾಂಕ್ಷೆಯ ಹೊರತಾಗಿಯೂ, ರೈತಕೃಷಿಯ ಬಗ್ಗೆ ತಮ್ಮ ನೀತಿಯನ್ನು ಬದಲಾಯಿಸಿಕೊಳ್ಳುವ ಕಾರಣವೆಂದರೆ, ಈ ಹಿಂದೆ ಉಲ್ಲೇಖಿಸಿದ ಅವಳಿ ಉದ್ದೇಶಗಳನ್ನು ಸಾಕಾರಗೊಳಿಸಿಕೊಳ್ಳುವುದೇ ಆಗಿದೆ. ಈ ಉದ್ದೇಶಗಳೆಂದರೆ: ರೈತರನ್ನು ಸರಕು ಉತ್ಪಾದನೆಯ ವ್ಯಾಪ್ತಿಗೆ ಅಧಿಕೃತವಾಗಿ ಸೆಳೆಯುವುದು ಮತ್ತು ಬಂಡವಾಳಶಾಹಿ ದೇಶಗಳಿಗೆ ಬೇಕಾಗುವ ಸರಕುಗಳನ್ನು ಲಭ್ಯವಾಗುವಂತೆ ಮಾಡಲು ನಮ್ಮ ಅರ್ಥವ್ಯವಸ್ಥೆಯ ಮೇಲೆ ಬೇಡಿಕೆಯ ಸಂಕೋಚನವನ್ನು (demand compression) ಹೇರುವುದು. ಬೇಡಿಕೆಯನ್ನು ಸಂಕುಚಿತಗೊಳಿಸುವುದನ್ನು ಈಗ ಐಎಂಎಫ್ ವಿಧಿಸಿದ ವಿತ್ತೀಯ ಮಿತವ್ಯಯ ಮತ್ತು ಬಿಗಿ ಹಣಕಾಸು ನೀತಿಯ ಕ್ರಮಗಳ ಮೂಲಕ ಜಾರಿಗೊಳಿಸಲಾಗಿದೆ. ಆದರೂ ಈ ಬಂಡವಾಳಶಾಹಿ ದೇಶಗಳಿಗೆ ಅಗತ್ಯವಿರುವ ಉಷ್ಣವಲಯದ ಮತ್ತು ಉಪೋಷ್ಣ ವಲಯದ ಸರಕುಗಳು ಅವು ವಸಾಹತುಶಾಹಿ ಕಾಲದಲ್ಲಿ ಲಭಿಸುತ್ತಿದ್ದ ರೀತಿಯಲ್ಲಿ ಬಿಟ್ಟಿಯಾಗಿ ಲಭಿಸುವುದಿಲ್ಲ (ವಸಾಹತುಶಾಹಿಯ ನಿರ್ಗಮನದ ನಂತರವೂ, ಅಸಮಾನ ವಿನಿಮಯ,

ಪುಟ 15 ಕ್ಕೆ

U.S. AFRICA LEADERS SUMMIT
WASHINGTON, D.C. | 2022

ಆಫ್ರಿಕಾ ಇಂದು ಹಲವಾರು (ಅ)ಮಾನವೀಯ ಬಿಕ್ಕಟ್ಟುಗಳ ಆಗರವಾಗಿದೆ. ಈಗಲೂ ಪಾಶ್ಚಿಮಾತ್ಯ ಕಾರ್ಪೊರೇಟುಗಳ ನಿಯಂತ್ರಣದಲ್ಲಿ ಈ ಖಂಡದ ಸಂಪನ್ಮೂಲಗಳಿರುವುದು ಮತ್ತು ಹಾಗಾಗಿ ಅಭಿವೃದ್ಧಿಗೆ ಸಂಪನ್ಮೂಲ ಲಭ್ಯವಿಲ್ಲದಿರುವುದು, ಆಫ್ರಿಕನ್ ದೇಶಗಳ ಸಾಲದ ಹೊರೆ ಮತ್ತು ಮೂಲಸೌಕರ್ಯಗಳ ತೀವ್ರ ಕೊರತೆಗಳು ಈ ಸಮಸ್ಯೆಗಳ ಮೂಲ ಎಂಬುದು ಸ್ಪಷ್ಟ. ಈ ನಡುವೆ ಚೀನಾ ಆಫ್ರಿಕಾದ ಅಭಿವೃದ್ಧಿಯಲ್ಲಿ ಭಾರೀ ಹೂಡಿಕೆ ಮಾಡಿದೆ. ಇದನ್ನು ಯು.ಎಸ್ ಆತಂಕದಿಂದ ನೋಡುತ್ತಿದೆ. ಅಭಿವೃದ್ಧಿಗೆ ನೆರವಿನಲ್ಲಿ ಯು.ಎಸ್ ಗೆ ಚೀನಾದ ಜತೆಗೆ ಸ್ಪರ್ಧೆ ಸಾಧ್ಯವಾಗುತ್ತಿಲ್ಲ, ಅದು ಬೇಕಾಗಿಯೂ ಇಲ್ಲ. ಬದಲಾಗಿ ಅದು ಆಫ್ರಿಕಾದಲ್ಲಿ ಮಿಲಿಟರಿ ದೃಷ್ಟಿಯಿಂದ ಮಧ್ಯಪ್ರವೇಶ ಮಾಡಲು ನಿರ್ಧರಿಸಿದಂತಿದೆ. ಈ ಹಿನ್ನೆಲೆಯಲ್ಲಿ ಡಿಸೆಂಬರ್ 2022ರ ಎರಡನೆಯ ವಾರದಲ್ಲಿ 49 ಆಫ್ರಿಕನ್ ದೇಶಗಳ ಯು.ಎಸ್–ಆಫ್ರಿಕನ್ ಶೃಂಗಸಭೆ ಏರ್ಪಡಿಸಲಾಗಿತ್ತು. ಈ ಶೃಂಗಸಭೆಯಲ್ಲಿ ಆಫ್ರಿಕನ್ ದೇಶಗಳಿಗೆ 'ಭದ್ರತೆ ಒದಗಿಸುವುದ'ರ ಮೇಲೆ ಒತ್ತು ಇತ್ತು. ಜಿಹಾದ್, ಭಯೋತ್ಪಾದನೆಗಳನ್ನು ಅದು ಆಫ್ರಿಕಾದಲ್ಲಿ ಮಿಲಿಟರಿ ಮಧ್ಯಪ್ರವೇಶಕ್ಕೆ ನೆಪವಾಗಿ ಬಳಸಲು ಸಂಚು ಮಾಡುತ್ತಿದೆ. ಚೀನಾ ಆಫ್ರಿಕಾದಲ್ಲಿ ಬೆಳೆಸಿರುವ ಘನಿಷ್ಠ ಆರ್ಥಿಕ–ರಾಜಕೀಯ ಸಂಬಂಧಗಳನ್ನು ಹರಿಯಲು ಹೊಂಚು ಹಾಕುತ್ತಿದೆ. ಚೀನಾದ ಜತೆ ಸಹಕರಿಸುತ್ತಿರುವ ಸರಕಾರಗಳನ್ನು ಉರುಳಿಸಲು ಬದಲಾಯಿಸಲು ಅಥವಾ ಬೆದರಿಸಲು ತನ್ನ ಮಿಲಿಟರಿ ಬಲ ಬಳಸಲು ಹವಣಿಸುತ್ತಿದೆ. ಆಫ್ರಿಕಾದ ಸಂಪನ್ಮೂಲದ ನಿಯಂತ್ರಣಕ್ಕೆ ತಡೆಯಾಗಬಹುದಾದ ಚೀನಾದ ಸವಾಲನ್ನು ಮಿಲಿಟರಿಯಾಗಿ ಎದುರಿಸಲು ಪ್ರಯತ್ನಿಸುತ್ತಿದೆ. ಚೀನಾದ ವಿರುದ್ಧ ಆಫ್ರಿಕಾದಲ್ಲೂ ನವ ಶೀತಲ ಸಮರವನ್ನು ಸಾರಿದೆ.

ಜಿಹಾದ್, ಭಯೋತ್ಪಾದನೆಯ ನೆಪದಲ್ಲಿ ಆಫ್ರಿಕಾದಲ್ಲೂ ನವ ಶೀತಲ ಸಮರ

ಜಗದ ಸುತ್ತ

ವಸಂತರಾಜ ಎನ್.ಕೆ.

'ಬೊಕೊ ಹರಾಮ್' ('ಪಾಶ್ಚಿಮಾತ್ಯ ನಾಗರಿಕತೆ ನಿಷಿದ್ಧ') ಈಶಾನ್ಯ ನೈಜೀರಿಯಾ ಮತ್ತು ನೆರೆಯ ಚಾಡ್, ನೈಗರ್, ಕಾಮರೂನ್, ಮಾಲಿ ಗಳಲ್ಲಿ ನೆಲೆಯಿರುವ ಭಯೋತ್ಪಾದಕ ಗುಂಪು. ಬೊಕೊ ಹರಾಮ್ ಈ ಪ್ರದೇಶದಲ್ಲಿ ಸರಕಾರಿ ಪೋಲೀಸು/ಮಿಲಿಟರಿ ಪಡೆಗಳು ಮತ್ತು ನಾಗರಿಕರ ಮೇಲೆ ಭಯೋತ್ಪಾದಕ ದಾಳಿಗೆ ಹೆಸರಾಗಿದೆ. ಇದರ ಭಯೋತ್ಪಾದನೆಯಿಂದಾಗಿ ಆಹಾರ ಉತ್ಪಾದನೆ, ವಿತರಣೆಗೆ ತೀವ್ರ ಅಡಚಣೆಯಾಗಿದ್ದು ಸಾಮೂಹಿಕ ಹಸಿವು, ನಿರಾಶ್ರಿತರ ಸಮಸ್ಯೆಯನ್ನು ಅದು ಉಲ್ಬಣಗೊಳಿಸಿದೆ. ನೈಜೀರಿಯಾದ ಮಿಲಿಟರಿ ಬೊಕೊ ಹರಾಮ್ ದಮನಕ್ಕೆ ಕೈಗೊಂಡ ಕಟು ಕ್ರಮಗಳು ನಾಗರಿಕರ ಮಾನವ ಹಕ್ಕುಗಳ ತೀವ್ರ ಉಲ್ಲಂಘನೆಗೆ ಕಾರಣವಾಗಿವೆ. ಈ ದಮನದಿಂದ ಅದು ಎರಡು ಬಣಗಳಾಗಿ ಒಡೆದಿದ್ದು ಒಂದು ಬಣ ಇಸ್ಲಾಮಿಕ್ ಸ್ಟೇಟ್ ನೊಂದಿಗೆ ಗುರುತಿಸಿಕೊಂಡು ಅದರ ಪಶ್ಚಿಮ ಆಫ್ರಿಕಾ ಘಟಕವೆಂದು ಘೋಷಿಸಿಕೊಂಡಿದೆ. ಈ ದೇಶಗಳ ಸರಕಾರಗಳನ್ನು ತೀವ್ರ ಆಂತರಿಕ ಬಿಕ್ಕಟ್ಟು ಬಾಧಿಸುತ್ತಿದ್ದು ಬೊಕೊ ಹರಾಮ್ ನ್ನು ನಿಯಂತ್ರಿಸಲು ಸಮರ್ಥವಾಗಿಲ್ಲ. ಯು.ಎಸ್ ರಕ್ಷಣಾ ಇಲಾಖೆಯ ವರದಿಯೊಂದು ಇಸ್ಲಾಮಿಕ್ ಗುಂಪುಗಳ ಹಿಂಸಾಚಾರದ ಪ್ರಕರಣಗಳು 2012ರಿಂದ ಮೂರು ಪಟ್ಟು, 2019ರಿಂದ ಎರಡು ಪಟ್ಟು ಹೆಚ್ಚಿದೆಯೆಂದಿದೆ. ಈ ಗುಂಪುಗಳ ನೆಲೆಗಳ ಮೇಲೆ ಯು.ಎಸ್ ಆಫ್ರಿಕನ್ ಕಮಾಂಡ್ ಆಯಾ ಪ್ರದೇಶಧ ಸರಕಾರಗಳ ಜತೆ ಯಾವುದೇ ಒಪ್ಪಂದವಿಲ್ಲದೆ ಏಕಪಕ್ಷೀಯ ವೈಮಾನಿಕ ದಾಳಿಗಳನ್ನು ಮಾಡಲಾರಂಭಿಸಿದೆ. ಈ ದಾಳಿಗಳೂ ಭಾರೀ ಸಾವು–ನೋವುಗಳಿಗೆ ಕಾರಣವಾಗಿದೆ. ಇವುಗಳಲ್ಲಿ ಅಫ್ಘಾನಿಸ್ತಾನದಲ್ಲಿ ಆದಂತೆ ಸಾವು–ನೋವುಗಳಿಗೆ ಗುರಿಯಾದವರು ಹಿಂಸಾತ್ಮಕ ಗುಂಪುಗಳ ಸದಸ್ಯರೋ ನಾಗರಿಕರೋ ಎಂಬುದು ಸ್ಪಷ್ಟವಿಲ್ಲ. ಈ ದಾಳಿಗಳ ನಂತರ ಈ ಗುಂಪುಗಳ ಹಿಂಸಾಚಾರ ಸದಸ್ಯ ಬಲ ಜಾಸ್ತಿಯಾಗಿದೆಯೇ ವಿನಾ ಕಡಿಮೆಯಾದದ್ದು ಕಂಡು ಬಂದಿಲ್ಲ.

ಆಫ್ರಿಕಾ ಇಂದು ಹಲವಾರು (ಅ)ಮಾನವೀಯ ಬಿಕ್ಕಟ್ಟುಗಳ ಆಗರವಾಗಿದೆ. ಈ ಖಂಡ ಜಗತ್ತಿನ ಶೇ.18 ಜನಸಂಖ್ಯೆ ಹೊಂದಿದೆ. ಆದರೆ ಜಗತ್ತಿನ ದಾಖಲಾದ ಮಾನವೀಯ ಬಿಕ್ಕಟ್ಟುಗಳ ಮುಕ್ಕಾಲು ಭಾಗ ಸಂಭವಿಸುವುದು ಇಲ್ಲಿ. ಈ ಬಿಕ್ಕಟ್ಟುಗಳು ವ್ಯಾಪಕ ಸಾಮೂಹಿಕ ಹಸಿವು–ಸಾವುಗಳಿಂದ ಭೀಕರ ಆಂತರಿಕ ಯುದ್ಧಗಳವರೆಗೆ ವ್ಯಾಪಿಸಿವೆ. ವಿಕ್ಟೋರಿಯಾ ಸರೋವರ ಮುಂತಾದವು ಇರುವ ? ಕಾಂಗೋ, ಉಗಾಂಡಾ, ರಾವಾಂಡಾ, ಬುರುಂಡಿ, ತಾಂಜಾನಿಯ ಇತ್ಯಾದಿ ದೇಶಗಳಿರುವ 'ಮಹಾ ಸರೋವರಗಳ ಪ್ರದೇಶ' ವೆಂದು ಕರೆಯಲಾಗುವ ಪ್ರದೇಶದಲ್ಲಿ ನಡೆಯುವ ಯುದ್ಧ ಮತ್ತು ಆಂತರಿಕ ಯುದ್ಧಗಳಲ್ಲಿ 60 ಲಕ್ಷ ಜನ ಸತ್ತಿದ್ದಾರೆ. 2021ರಲ್ಲಿ ಆಫ್ರಿಕಾದ ಐವರಲ್ಲಿ ಒಬ್ಬರು ಹಸಿದಿದ್ದು ಸಾಮೂಹಿಕ ಹಸಿವು ಕಂಡು ಬಂದಿದೆ. ತೀವ್ರ ಸಾಮಾಜಿಕ ಅಸಮಾನತೆ, ಅನಕ್ಷರತೆ, ಅನಭಿವೃದ್ಧಿ ಆಫ್ರಿಕಾವನ್ನು ಬಾಧಿಸುತ್ತಿದೆ. ಈಗಾಗಲೇ ವಸಾಹತುಶಾಹಿ ಲೂಟಿಯಿಂದ ಜರ್ಝರಿತವಾಗಿರುವ ಆರ್ಥಿಕದಿಂದಾಗಿ ವ್ಯಾಪಕವಾಗಿರುವ ಇವೆಲ್ಲ ಸಮಸ್ಯೆಗಳನ್ನು ಇಂತಹ ಭೀಕರ ಯುದ್ಧ–ಅಂತರ್ಯುದ್ಧಗಳು ಹೆಚ್ಚಿಸುತ್ತಿವೆ.

ಆಫ್ರಿಕಾದ ಗಂಭೀರ ಸಮಸ್ಯೆಗಳ ಮೂಲಕಾರಣವೇನು?

ಈ ಎಲ್ಲ ಗಂಭೀರ ಸಮಸ್ಯೆಗಳ ಮೂಲ ಹುಡುಕಿ ಪರಿಹಾರ ಕಂಡುಕೊಳ್ಳಲು ಆಫ್ರಿಕನ್ ಒಕ್ಕೂಟವು ಮೇ 2022ರಲ್ಲಿ ಆಫ್ರಿಕನ್ ಮಾನವೀಯ ಏಜೆನ್ಸಿ (ಒಜಿಊಂ) ಎಂಬ ಸಂಘಟನೆಯನ್ನು ಹುಟ್ಟು ಹಾಕಿದೆ. ಈ ಸಮಸ್ಯೆಗಳ ಮೂಲ ಹುಡುಕುವುದು ಕಷ್ಟವೇನಲ್ಲ. ಆಫ್ರಿಕಾ ಖಂಡದಿಂದ ಸಂಪನ್ಮೂಲಗಳನ್ನು ವಸಾಹತುಶಾಹಿ ಕೊಳ್ಳೆ ಹೊಡೆದಿರುವುದು ಮತ್ತು ಈಗಲೂ ಪಾಶ್ಚಿಮಾತ್ಯ ಕಾರ್ಪೊರೇಟುಗಳ ನಿಯಂತ್ರಣದಲ್ಲಿ ಈ ಖಂಡದ ಸಂಪನ್ಮೂಲಗಳಿರುವುದು ಮತ್ತು ಹಾಗಾಗಿ ಅಭಿವೃದ್ಧಿಗೆ ಸಂಪನ್ಮೂಲ ಲಭ್ಯವಿಲ್ಲದಿರುವುದು, ಆಫ್ರಿಕನ್ ದೇಶಗಳ ಸಾಲದ ಹೊರೆ ಮತ್ತು ಮೂಲಸೌಕರ್ಯಗಳ ತೀವ್ರ ಕೊರತೆಗಳು ಈ ಸಮಸ್ಯೆಗಳ ಮೂಲ ಎಂಬುದು ಸ್ಪಷ್ಟ. ವ್ಯಾಪಾರ ಮತ್ತು ಅಭಿವೃದ್ಧಿಯ ಕುರಿತು ವಿಶ್ವಸಂಸ್ಥೆಯ ಸಮ್ಮೇಳನದ (ಗಓಅಖಿಚಿಆ) ವರದಿಯೊಂದು ದೊಡ್ಡ ಪ್ರಮಾಣದಲ್ಲಿ ಆಫ್ರಿಕಾ ಬಂಡವಾಳವನ್ನು ಕಳೆದುಕೊಳ್ಳುತ್ತಿದೆಯೆಂದು ಹೇಳಿದೆ. ಇದರಲ್ಲಿ 88.6 ಶತಕೋಟಿ ಡಾಲರು ಬಂಡವಾಳ ಪಲಾಯನ ಮತ್ತು ಸರಕುಪಟ್ಟಿಯಲ್ಲಿ ದರದ ಗೋಲ್ ಮಾಲ್ ನಿಂದ ವಾರ್ಷಿಕ 50 ಶತಕೋಟಿ ಡಾಲರುಗಳು ಸೇರಿದೆ. ಆ ವರದಿಯು, 7 ಆಫ್ರಿಕನ್ ದೇಶಗಳು ಸಾಲದ ಹೊರೆಯಲ್ಲಿ ಕುಸಿದಿವೆ 16 ದೇಶಗಳು ಆ ಹಾದಿಯಲ್ಲಿವೆಯೆಂದಿದೆ. ಒಜಿಊಂ ಈ ಮೂಲಕಾರಣಗಳ ಪತ್ತೆ ಹಚ್ಚಿದರೂ ಈ ಸಂಪನ್ಮೂಲದ ಲೂಟಿ ತಡೆದು ಅದನ್ನು ಅಭಿವೃದ್ಧಿಗೆ ಪಡೆಯುವ ಸಾಧ್ಯತೆ ಬಹಳ ಕಡಿಮೆ. ವಿಶ್ವಸಂಸ್ಥೆ ಆಫ್ರಿಕಾಕ್ಕೆ ಸುಸ್ಥಿರ ಅಭಿವೃದ್ಧಿಯ ಪಾಠ ಹೇಳಬಹುದು, ಹೇಳುತ್ತಿದೆ ಕೂಡಾ. ಆದರೆ ಸಂಪನ್ಮೂಲ ಹೊಂಚದೆ ಹೂಡದೆ, ಅಸಮಾನತೆ, ಬಡತನ ಅನಭಿವೃದ್ಧಿ ನಿರ್ಮೂಲನ ಮಾಡದೆ, ಜಿಹಾದ್, ಭಯೋತ್ಪಾದನೆ ಅಂತರ್ಯುದ್ಧಗಳಂಥಹ ಗಂಭೀರ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯೂವಿಲ್ಲ.

ಈ ನಡುವೆ ಚೀನಾ ಆಫ್ರಿಕಾದ ಅಭಿವೃದ್ಧಿಯಲ್ಲಿ ಭಾರೀ ಹೂಡಿಕೆ ಮಾಡಿದೆ. ಇದನ್ನು ಯು.ಎಸ್ ಸರಕಾರ ಮತ್ತು ಕೆಲವು 'ಅಂತರಾಷ್ಟ್ರೀಯ ಸಂಘಟನೆ'ಗಳು 'ಬೊಗಳೆ' ಮತ್ತು 'ಸಾಲದ ಕೂಪಕ್ಕೆ ತಳ್ಳುವಂತಹುದು' ಎಂದು ಹೇಳಿವೆ. ಕೆಲವು ಇನ್ನೂ ಮುಂದಕ್ಕೆ ಹೋಗಿ ಇದನ್ನು 'ನವ ವಸಾಹತುವಾದ' ಮಾದರಿಯೆಂದೂ ಕರೆದಿವೆ! ಆದರೆ '2010ರ ನಂತರ ಸ್ಥಾಪಿಸಲಾದ ವಿದ್ಯುತ್ ಗ್ರಿಡ್ ಮತ್ತು ಮೂಲ ಸೌಕರ್ಯ ಪ್ರಾಜೆಕ್ಟ್ ಗಳಲ್ಲಿ ಮೂರನೆಯ ಒಂದು ಪಾಲು ಚೀನಾದ ಸಾರ್ವಜನಿಕ ಕಂಫನಿಗಳ ಹಣಕಾಸು ಮತ್ತು ತಾಂತ್ರಿಕ ನೆರವಿನಿಂದ ರಚಿಸಿದ್ದು. ಈ ಪ್ರಾಜೆಕ್ಟುಗಳಲ್ಲಿ ಕೆಲಸ ಮಾಡುವ ಶೇ.89ರಷ್ಟು ಅಂದರೆ 3 ಲಕ್ಷ ಉದ್ಯೋಗಿಗಳು ಆಫ್ರಿಕನ್ನರು" ಎಂದು ಖಾಸಗಿ ಅಮೆರಿಕನ್ ಆರ್ಥಿಕ ವಿಶ್ಲೇಷಕ ಕಂಪನಿ ಮೆಕೆನ್ಸೀ ದಾಖಲಿಸಿದೆ. ಯಾವುದೇ ವಿದೇಶೀ ನೆರವಿನಲ್ಲಿ ಇರುವ ಸಮಸ್ಯೆಗಳು ಚೀನಾದ ಸಹಕಾರ/ನೆರವುಗಳಲ್ಲಿ ಇರಬಹುದು. ಜಿ–7 ದೇಶಗಳ ಪ್ರಭಾವದಲ್ಲಿರುವ ಒ.ಇ.ಸಿ.ಡಿ ಅಭಿವೃದ್ಧಿ ಸಂಬಂಧಿ ಸಂಘಟನೆ ಸಹ ಆಫ್ರಿಕಾದ ಅಭಿವೃದ್ಧಿಯಲ್ಲಿ ಬೇರೆ ಯಾವುದೇ ದೇಶ ಅಥವಾ ಜಾಗತಿಕ ಸಂಘಟನೆಗಿಂತ ಹೆಚ್ಚಿನ ನಿಜವಾದ ಹೂಡಿಕೆಯನ್ನು ಚೀನಾ ಮಾಡಿದೆಯೆಂದು ಮೆಕೆನ್ಸೀ ವರದಿಯಲ್ಲಿ ಹೇಳಿದೆ. ಹೆಚ್ಚಿನ ಆಫ್ರಿಕನ್ ದೇಶಗಳಿಗೆ ಚೀನಾ ಅತಿ ದೊಡ್ಡ ವಹಿವಾಟು ಪಾಲುದಾರನಾಗಿ ಹೊಮ್ಮಿದೆ. ಚೀನಾದ ಈ ಪ್ರಯತ್ನ 1950–60ರ ದಶಕದಲ್ಲಿ ಆಗ ತಾನೇ ಸ್ವತಂತ್ರವಾದ ಮೂರನೆಯ ಜಗತ್ತಿನ ದೇಶಗಳಿಗೆ ಸೋವಿಯೆಟ್ ಒಕ್ಕೂಟದ ನೆರವಿನ ಮಾದರಿಯಲ್ಲಿದೆ.



ಆಫ್ರಿಕಾಕ್ಕೆ ಭದ್ರತೆ ಒದಗಿಸಲು ಶೃಂಗಸಭೆ

ಇದನ್ನು ಯು.ಎಸ್ ಆತಂಕದಿಂದ ನೋಡುತ್ತಿದೆ. ಅಭಿವೃದ್ಧಿಗೆ ನೆರವಿನಲ್ಲಿ ಯು.ಎಸ್ ಗೆ ಚೀನಾದ ಜತೆಗೆ ಸ್ಪರ್ಧೆ ಸಾಧ್ಯವಾಗುತ್ತಿಲ್ಲ, ಅದು ಬೇಕಾಗಿಯೂ ಇಲ್ಲ. ಬದಲಾಗಿ ಅದು ಆಫ್ರಿಕಾದಲ್ಲಿ ಮಿಲಿಟರಿ ದೃಷ್ಟಿಯಿಂದ ಮಧ್ಯಪ್ರವೇಶ ಮಾಡಲು ನಿರ್ಧರಿಸಿದಂತಿದೆ. ಈ ಹಿನ್ನೆಲೆಯಲ್ಲಿ ಡಿಸೆಂಬರ್ 2022ರ ಎರಡನೆಯ ವಾರದಲ್ಲಿ 49 ಆಫ್ರಿಕನ್ ದೇಶಗಳ ಯು.ಎಸ್–ಆಫ್ರಿಕನ್ ಶೃಂಗಸಭೆ ಏರ್ಪಡಿಸಲಾಗಿತ್ತು. ಈ ಶೃಂಗಸಭೆಯಲ್ಲಿ ಆಫ್ರಿಕನ್ ದೇಶಗಳಿಗೆ 'ಭದ್ರತೆ ಒದಗಿಸುವುದ'ರ ಮೇಲೆ ಒತ್ತು ಇತ್ತು. ಆಫ್ರಿಕಾದಲ್ಲಿ ಜಿಹಾದ್, ಭಯೋತ್ಪಾದನೆ, ಅಂತರ್ಯುದ್ಧಗಳು ಹೆಚ್ಚಿರುವುದರಿಂದ ಯು.ಎಸ್ ತನ್ನ ಪಡೆಗಳ ಮೂಲಕ 'ಭದ್ರತೆ' ಒದಗಿಸುವಲ್ಲಿ ನೆರವು ನೀಡುವುದಾಗಿ ಹೇಳಿತು. ಜಿಹಾದ್, ಭಯೋತ್ಪಾದಕ ಗುಂಪುಗಳನ್ನು ಮಟ್ಟ ಹಾಕಲು ಶಸ್ತ್ರಾಸ್ತ್ರ ಸರಬರಾಜು, ತರಬೇತಿ, ವೈಮಾನಿಕ ದಾಳಿಗಳು ಮೂಲಕ ನೆರವು ನೀಡುವುದಾಗಿ ಹೇಳಿದೆ.

ಆದರೆ ಯು.ಎಸ್ ಆಗಲಿ ಅದರ ಮಿತ್ರ ಯುರೋಕೂಟ ಆಗಲಿ ಆಫ್ರಿಕಾದಲ್ಲಿ 'ಭದ್ರತೆ ಒದಗಿಸುವ' ನೆಪದಲ್ಲಿ ಮಧ್ಯಪ್ರವೇಶ ಮಾಡುತ್ತಿರುವುದು ಮೊದಲನೆಯ ಬಾರಿ ಅಲ್ಲ. ಆದ್ದರಿಂದ ಹಿಂದಿನ ಇಂತಹ ಪ್ರಯತ್ನಗಳ ಪರಿಣಾಮಗಳನ್ನು ಪರಿಶೀಲಿಸಬೇಕು. 1993ರಲ್ಲಿ ಸೋಮಾಲಿಯಾದ ಭಯೋತ್ಪಾದಕ ಗುಂಪುಗಳನ್ನು ಮಟ್ಟ ಹಾಕುವುದರಲ್ಲಿ ಯು,ಎಸ್ ಕಾರ್ಯಾಚರಣೆ ವಿಫಲವಾಗಿತ್ತು. 2001ರ ನಂತರದ 'ಭಯೋತ್ಪಾದನೆಯ ವಿರುದ್ಧ ನಿರಂತರ ಯುದ್ಧ'ದ ನೆಪದಲ್ಲಿ ಅಲ್–ಕೈದಾ, ಐಸಿಸ್ ಸೇರಿದಂತೆ ಇಸ್ಲಾಮಿಕ್ ಭಯೋತ್ಪಾದಕ ಗುಂಪುಗಳನ್ನು ಮಟ್ಟ ಹಾಕಲು ಸರಕಾರಗಳಿಗೆ ಶಸ್ತ್ರಾಸ್ತ್ರ ಸರಬರಾಜು, ತರಬೇತಿ, ವೈಮಾನಿಕ ದಾಳಿಗಳ ಮೂಲಕ ನೆರವು ನೀಡಿದ್ದವು. ಇವುಗಳ ಒಟ್ಟು ಪರಿಣಾಮ ಎರಡು ಬಗೆಯವು. ಒಂದೋ ಯು.ಎಸ್ ಮಿಲಿಟರಿ–ರಾಜಕೀಯ ನೆರವು ಪಡೆದ ಕೆಲವು ಸರ್ವಾಧಿಕಾರಿಗಳ ನಿರಂಕುಶ ಆಡಳಿತ ಗಟ್ಟಿಗೊಂಡಿತು. ಈ ಸರ್ವಾಧಿಕಾರಿಗಳು 'ಭಯೋತ್ಪಾದಕ ಗುಂಪುಗಳನ್ನು ಮಟ್ಟ' ಹಾಕುವ ನೆಪದಲ್ಲಿ ನೈಜ ಪ್ರಜಾಸತ್ತಾತ್ಮಕ ವಿರೋಧಿಗಳನ್ನು ಮಟ್ಟ ಹಾಕಿದರು. ಇಲ್ಲವೆ ಅರಾಜಕತೆ ಆವರಿಸಿತು. ಮೊದಲನೆಯ ಪರಿಣಾಮಕ್ಕೆ ನೈಜರ್ ನ ನಿರಂಕುಶ ಸರ್ವಾಧಿಕಾರಿ ಮಹಮದೌ ಇಸ್ಸಾವುಫೌ ಉದಾಹರಣೆ. ಮಾಲಿ, ಬರ್ಕಿನ್ ಫಾಸೊ ದಲ್ಲಿ ಜಿಹಾದಿ ಗುಂಪುಗಳ ದಮನ ವಿಫಲವಾಯಿತು. ಆದರೆ ಅಲ್ಲಿ ಮಿಲಿಟರಿ ಕ್ಷಿಪ್ರಕ್ರಾಂತಿ ನಡೆದು ಮಿಲಿಟರಿ ಸರ್ವಾಧಿಕಾರಿಗಳು ಅಧಿಕಾರ ಕಸಿದುಕೊಂಡರು. ಎರಡೂ ಬಗೆಯಲ್ಲೂ ನಾಗರಿಕರ ಮಾನವ ಹಕ್ಕುಗಳ ದಮನ ತಾರಕಕ್ಕೇರಿತು. ಜಿಹಾದಿ, ಭಯೋತ್ಪಾದಕ ಗುಂಪುಗಳ ಬಲ ಹೆಚ್ಚುತ್ತಲೇ ಹೋದವು. ಲಿಬ್ಯಾದ ಗದ್ದಾಫಿ ಉತ್ತಮ ಜನಪರ ಆಡಳಿತ ದ ವಿರುದ್ಧ ಯು.ಎಸ್ ಮಿಲಿಟರಿ ಮಧ್ಯಪ್ರವೇಶ ಗದ್ದಾಫಿ ಪತನದಲ್ಲಿ ಕೊನೆಗೊಂಡಿತು. ಗದ್ದಾಫಿ ವಿರುದ್ಧ ಯು.ಎಸ್. ಸೃಷ್ಟಿಸಿದ ಭಯೋತ್ಪಾದಕ ಗುಂಪುಗಳನ್ನು ಅದಕ್ಕೆ ಇನ್ನೂ ನಿಯಂತ್ರಿಸಲು ಸಾಧ್ಯವಾಗಿಲ್ಲ. ಅರಾಜಕತೆ ತಾಂಡವವಾಡುತ್ತಿದೆ. ಭಯೋತ್ಪಾದಕ ಗುಂಪುಗಳ ಪ್ರಕರಣಗಳು ಮೂರು ಪಟ್ಟು ಹೆಚ್ಚಿರುವ ಕುರಿತು ಈಗಿನ ಯು.ಎಸ್ ವರದಿಗಳೇ ಇಡೀ ಆಫ್ರಿಕಾದಲ್ಲೇ ಹಿಂದಿನ 'ಭದ್ರತಾ ನೆರವಿನ' ವೈಫಲ್ಯವನ್ನು ಸಾರಿ ಹೇಳುತ್ತದೆ. ಲಿಬ್ಯಾ ಉದಾಹರಣೆ ಯು.ಎಸ್ ಪ್ರಾಮಾಣಿಕತೆಯ ಮೇಲೆನೇ ಪ್ರಶ್ನೆ ಚಿಹ್ನೆ ಇಡುತ್ತದೆ.

ಚೀನಾದ ವಿರುದ್ಧ ನವ ಶೀತಲ ಸಮರ

ಯು.ಎಸ್ ಮಿಲಿಟರಿ ನೆರವು ಸರ್ವಾಧಿಕಾರಿಗಳ ಜೇಬು ಸೇರಿದೆ. ಇಲ್ಲವೆ ಮಿಲಿಟರಿ ಕಂಪನಿಗಳನ್ನು, ಕಾಂಟ್ರಾಕ್ಟರುಗಳನ್ನು ಕೊಬ್ಬಿಸಿದೆ. ಆಫ್ರಿಕಾದಲ್ಲಿ ಹಿಂಸಾಚಾರ, ಭಯೋತ್ಪಾದನೆ ನಿಗ್ರಹದಲ್ಲಿ ವಿಫಲವಾಗಿವೆ. ಏಕೆಂದರೆ ಇದರ ಮೂಲಕಾರಣ ಉಗ್ರ ಧಾರ್ಮಿಕತೆ ಅಲ್ಲ. ಅಸಮಾನತೆ, ಬಡತನ, ಅನಭಿವೃದ್ಧಿ. ಹೆಚ್ಚಿನ ಭಯೋತ್ಪಾದಕ ಗುಂಪುಗಳ ಸದಸ್ಯರು, ನಾಯಕರು ಸ್ವತಃ ಬಡತನ, ಹಸಿವು, ಹತಾಶೆಯಿಂದ ತಪ್ಪಿಸಿಕೊಳ್ಳಲು ಸರಕು–

ಹರ್ಯಾಣದ ಕ್ರೀಡಾ ಸಚಿವರ ಲೈಂಗಿಕ ಕಿರುಕುಳದ ಪ್ರಕರಣದಲ್ಲಿ ನ್ಯಾಯಯುತ ತನಿಖೆಗೆ....... ಪುಟ 11 ರಿಂದ

ತನ್ನ ಪ್ರಭಾವವನ್ನು ಬಳಸಿ ದೂರುದಾರರ ಚಾರಿತ್ರ್ಯದ ಬಗ್ಗೆ ತನಿಖೆಗೆ ಎಸ್‌ಐಟಿ ನೇಮಿಸಬೇಕೆಂದು ರಾಜ್ಯ ಡಿಜಿಪಿಯನ್ನು ಕೇಳಿದ್ದಾರೆ. ಇದು ಪೀಡಿತರನ್ನೇ ದೂಷಿಸುವ ಎಂದಿನ ತಂತ್ರವಾಗಿದೆ. ಅಲ್ಲದೆ ಪ್ರತಿ ದಿನ ಒಂದಿಲ್ಲೊಂದು ರೀತಿಯಲ್ಲಿ ಆಕೆಗೆ ಕಿರುಕುಳ ಕೊಡಲು ಸರಕಾರೀ ಯಂತ್ರವನ್ನು ಬಳಸಿಕೊಳ್ಳುತ್ತಿದ್ದಾರೆ. ಪೋಲೀಸ್ ಪತ್ತೇದಾರರಿಗೆ ಆಕೆಯನ್ನು ಹಿಂಬಾಲಿಸುವಂತೆ ಹೇಳಲಾಗಿದೆ. ದೂರುದಾರರ ದೂರು 'ನಂಬುವಂತದ್ದಲ್ಲ' ಎಂದು ರಾಜ್ಯ ಮಹಿಳಾ ಆಯೋಗ ಕೇವಲ ಮಂತ್ರಿಯ ಮಾತನ್ನು ಆಧರಿಸಿ, ಮತ್ತು ದೂರುದಾರರನ್ನು ವಿಚಾರಿಸದೆಯೇ ಹಣೆಪಟ್ಟಿ ಹಚ್ಚಿದೆ ಎಂಬ ಸಂಗತಿಯನ್ನು ಜಗ್ಮತಿಯವರು ಪತ್ರದಲ್ಲಿ ಐಒಎ ಅಧ್ಯಕ್ಷೆಯ ಗಮನಕ್ಕೆ ತಂದಿದ್ದಾರೆ.

ನಮ್ಮ ಕ್ರೀಡಾಪಟುಗಳು ತಮ್ಮ ಕ್ರೀಡೆಯಲ್ಲಿ ಉತ್ತಮ ಪ್ರದರ್ಶನ ನೀಡುವುದಲ್ಲದೆ ಸುಲಿಗೆ ಪ್ರವೃತ್ತಿಯ ಪುರುಷರ ಕೈಯಿಂದ ಕಿರುಕುಳದಿಂದ ತಮ್ಮನ್ನು ತಾವು ಸುರಕ್ಷಿತವಾಗಿರಿಸಿಕೊಳ್ಳುವ ದುಪ್ಪಟ್ಟು ಹೊರೆಯನ್ನು ಹೊತ್ತಿದ್ದಾರೆ ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ. ಕ್ರೀಡಾ ಆಡಳಿತ ಮತ್ತು ಸರ್ಕಾರಗಳ ರಕ್ಷಣೆಯ ಸರಿಯಾದ ಮತ್ತು ಜವಾಬ್ದಾರಿಯುತ ಕಾರ್ಯನಿರ್ವಹಣೆಯನ್ನು ನಾವು ಖಚಿತಪಡಿಸಿದರೆ, ಇಂತಹ ಕಷ್ಟಕರ ಸಂದರ್ಭಗಳಿಂದ ನಮ್ಮ ಮಹಿಳಾ ಆಟಗಾರರನ್ನು ನಾವು ಹೆಚ್ಚಿನ ಮಟ್ಟಿಗೆ ಉಳಿಸಬಹುದು. ದುರದೃಷ್ಟವಶಾತ್, ಈಗ ಪರಿಸ್ಥಿತಿ ಹಾಗಿಲ್ಲ, ನಮ್ಮ ಮಹಿಳಾ ಕ್ರೀಡಾಪಟುಗಳು ಇದಕ್ಕಾಗಿ ದೊಡ್ಡ ಬೆಲೆ ತೆರಬೇಕಾಗಿದೆ ಎಂದು ಜಗ್ಮತಿಯವರು ತಮ್ಮ ಬಹಿರಂಗ ಪತ್ರದಲ್ಲಿ ಹೇಳಿದ್ದಾರೆ.

"ಈ ನಿರ್ದಿಷ್ಟ ಪ್ರಕರಣವು ಕೇವಲ ಒಬ್ಬ ಕ್ರೀಡಾಪಟುವಿಗೆ ಸಂಬಂಧಿಸಿಲ್ಲ, ಬದಲಿಗೆ ನಮ್ಮ ದೇಶದ ಇಡೀ ಕ್ರೀಡಾ ವ್ಯವಸ್ಥೆಯ ಕಾರ್ಯನಿರ್ವಹಣೆಯ ಪ್ರತಿಬಿಂಬವಾಗಿದೆ. ಐಒಎ ಅಧ್ಯಕ್ಷೆಯಾಗಿ ಮತ್ತು ಪ್ರತಿಷ್ಠಿತ ಮಹಿಳಾ ಕ್ರೀಡಾಪಟುವಾಗಿ, ಈ ಪ್ರಕರಣದಲ್ಲಿ ನ್ಯಾಯಯುತ ತನಿಖೆ ಮತ್ತು ಸಂತ್ರಸ್ತೆಗೆ ನ್ಯಾಯ ಸಿಗುವಂತೆ ಖಚಿತಪಡಿಸಲು ಆರೋಪಿಯನ್ನು ಎಲ್ಲಾ ಸರ್ಕಾರಿ ಸ್ಥಾನಗಳಿಂದ ತಕ್ಷಣವೇ ವಜಾಗೊಳಿಸಬೇಕೆಂದು ಒತ್ತಾಯಿಸಲು ನಿಮ್ಮ ಮಧ್ಯಪ್ರವೇಶವನ್ನು ಕೋರುತ್ತೇನೆ. ಇದು, ಐಒಎ ಭಾರತದ ಕ್ರೀಡಾಪಟುಗಳ ಕ್ರೀಡಾ ಸಂಬಂಧಿತ ಅಗತ್ಯಗಳನ್ನು ಪೂರೈಸಲು ಬದ್ಧವಾಗಿದೆ, ಅವರ ಮಾನಸಿಕ, ದೈಹಿಕ ಮತ್ತು ಸಾಮಾಜಿಕ ಯೋಗಕ್ಷೇಮವನ್ನು ಖಚಿತಪಡಿಸಿಕೊಳ್ಳಲು ಕೂಡ ಅಷ್ಟೇ ಬದ್ಧವಾಗಿದೆ ಎಂಬ ಬಹಳ ಮುಖ್ಯವಾದ ಸಂದೇಶವನ್ನು ಕಳುಹಿಸುತ್ತದೆ. ಕಾನೂನಿನ ಅವಶ್ಯಕತೆಯಂತೆ ಎಲ್ಲಾ ಕ್ರೀಡಾ ಕಚೇರಿಗಳು ಮತ್ತು ಸಂಸ್ಥೆಗಳಲ್ಲಿ ಲೈಂಗಿಕ ಕಿರುಕುಳ ವಿರೋಧಿ ಸಮಿತಿಗಳ ಸರಿಯಾದ ರಚನೆ ಮತ್ತು ಆ ಕುರಿತು ಪ್ರಕಟಣೆಯನ್ನು ಖಚಿತಪಡಿಸಬೇಕು ಎಂದು ನಾನು ನಿಮ್ಮನ್ನು ವಿನಂತಿಸುತ್ತೇನೆ. ಇದು ಅಂತಹ ಪ್ರಕರಣಗಳಲ್ಲಿ ದೂರುಗಳನ್ನು ದಾಖಲಿಸುವ ವ್ಯವಸ್ಥೆಯನ್ನು ಸುಗಮಗೊಳಿಸುತ್ತದೆ. ಮತ್ತು ಕ್ರೀಡಾ ಇಲಾಖೆಗಳಲ್ಲಿ ಕೆಲಸ ಮಾಡುವ ಮಹಿಳಾ ಕ್ರೀಡಾಪಟುಗಳು ಮತ್ತು ಇತರ ಮಹಿಳೆಯರು ಈ ನಿರ್ದಿಷ್ಟ ಪ್ರಕರಣದಲ್ಲಿ, ಆರೋಪಿಯ ವಿರುದ್ಧ ಎಫ್‌ಐಆರ್ ದಾಖಲಿಸಲು ಕೂಡ ಅಲ್ಲಿಂದಿಲ್ಲಿಗೆ ಅಲೆದಾಡುವ ಪಾಡು ಪಡುವುದನ್ನು ತಪ್ಪಿಸಬಹುದು. ಈ ಪ್ರಕರಣದಲ್ಲಿ ಸಂತ್ರಸ್ತೆ ತಮ್ಮ ದೂರಿನೊಂದಿಗೆ ಹರಿಯಾಣ ಅಥ್ಲೆಟಿಕ್ ಅಸೋಸಿಯೇಷನ್ ಅಧ್ಯಕ್ಷರನ್ನು ಸಂಪರ್ಕಿಸಲು ಪ್ರಯತ್ನಿಸಿದಾಗ, ಆಕೆ ರಾಜಕೀಯ ಉದ್ದೇಶಗಳನ್ನು ಹೊಂದಿದ್ದಾರೆಂದು ಆರೋಪಿಸಲಾಯಿತು" ಎಂದು ತಮ್ಮ ಪತ್ರದಲ್ಲಿ ಮುಂದುವರೆದು ಹೇಳಿರುವ ಜಗ್ಮತಿ ಸಂಗ್ವಾನ್ ನ್ಯಾಯಕ್ಕಾಗಿ ಐಒಎ ಅಧ್ಯಕ್ಷೆಯಿಂದ ಬೆಂಬಲವನ್ನು ನಿರೀಕ್ಷಿಸುವುದಾಗಿ ಹೇಳಿದ್ದಾರೆ.

ಕೃಷಿ ಬಿಕ್ಕಟ್ಟನ್ನು ಇಷ್ಟಪಡುವ ಸಾಮ್ರಾಜ್ಯಶಾಹಿ...

ಪುಟ 13 ರಿಂದ

ಪೇಟೆಂಟ್‌ಗಳಿಗೆ ಪಾವತಿ ಮತ್ತು ಇತರ ಕೆಲವು ವಿಧಾನಗಳ ಮೂಲಕ "ಸೋರಿಕೆ"ಯ ಅಂಶವು ಸೀಮಿತ ಪ್ರಮಾಣದಲ್ಲಿ ಮುಂದುವರಿಯುತ್ತದೆ). ಆದರೂ, ಈ ದೇಶಗಳು ತಮಗಾಗಲಿ ಅಥವಾ ಅಂಚಿನಲ್ಲಿರುವ ದೇಶಗಳಿಗಾಗಲಿ ಹಣದುಬ್ಬರ ತಟ್ಟದ ರೀತಿಯಲ್ಲಿ ತಮಗೆ ಪೂರೈಕೆಗಳು ಸಾಕಷ್ಟು ಲಭ್ಯವಾಗುವಂತೆ ನೋಡಿಕೊಳ್ಳುತ್ತವೆ.

ಭಾರತದಂತಹ ದೇಶಗಳು ಮಾರುಕಟ್ಟೆಯ ಅಪ್ಪಣೆಗೆ ಅನುಗುಣವಾಗಿ ಉತ್ಪಾದಿಸುವ ಸರಕು ಉತ್ಪಾದನಾ ವಿಧಾನವನ್ನು (commodity production) ಜಾರಿಗೊಳಿಸುವಂತೆ ಈ ದೇಶಗಳು ನೋಡಿಕೊಳ್ಳುತ್ತವೆ. ಆದರೆ, ಈ ಸರಕು ಉತ್ಪಾದನಾ ವಿಧಾನವನ್ನು ಅನುಸರಿಸಬೇಕು ಎಂದಾದರೆ, ದೇಶದ ಆಹಾರ ಸ್ವಾವಲಂಬನೆಯಂತಹ ಎಲ್ಲಾ ಪರಿಗಣನೆಗಳನ್ನು (ಆದಾಯ ಮತ್ತು ಕೊಳ್ಳುವ ಶಕ್ತಿಯು ಕೆಳ ಮಟ್ಟದಲ್ಲಿದ್ದರೂ ಸಹ) ತ್ಯಜಿಸಬೇಕಾಗುತ್ತದೆ. ವಸಾಹತುಶಾಹಿ ಕಾಲಾನಂತರದಲ್ಲಿ ಉಂಟಾದ ಒಂದು ಪ್ರಮುಖ ಬದಲಾವಣೆ ಎಂದರೆ, ಮೆಟ್ರೋಪಾಲಿಟನ್ ದೇಶಗಳು ಆಹಾರ ಧಾನ್ಯಗಳ ಹೆಚ್ಚುವರಿ ಉತ್ಪಾದಕರಾಗಿ ಮಾರ್ಪಟ್ಟಿವೆ. ಆದ್ದರಿಂದ, ಅವರ ದೃಷ್ಟಿಯಲ್ಲಿ, ಭಾರತದಂತಹ ಅಂಚಿನ ದೇಶಗಳು ತಮ್ಮ ಆಹಾರ ಧಾನ್ಯಗಳ ಮೇಲಿನ ಸ್ವಾವಲಂಬನೆಯನ್ನು ತುರ್ತಾಗಿ ತ್ಯಜಿಸಬೇಕಾಗಿದೆ. ವಾಣಿಜ್ಯ ಬೆಳೆಗಳಿಗೆ ಕೊಡುತ್ತಿದ್ದ ಸರ್ಕಾರದ ಬೆಂಬಲ ಬೆಲೆ ನೀತಿಯನ್ನು ಭಾರತ ಈಗಾಗಲೇ ಕೈಬಿಟ್ಟಿದೆ. ಆದರೆ. ಆಹಾರ ಧಾನ್ಯಗಳ ವಿಷಯದಲ್ಲಿ ಬೆಂಬಲ ಮತ್ತು ಖರೀದಿ ಬೆಲೆಗಳ ಕಾರ್ಯವಿಧಾನ ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಪೋಷಿಸುವ ಉದ್ದೇಶದ ಖರೀದಿ ಕಾರ್ಯಾಚರಣೆಗಳು ವಿಶ್ವ ವ್ಯಾಪಾರ ಸಂಘಟನೆಯ ಒತ್ತಡಗಳ ಹೊರತಾಗಿಯೂ ಇನ್ನೂ ಉಳಿದಿವೆ, ಏಕೆಂದರೆ, ಇಂತಹ ಒತ್ತಡಗಳಿಗೆ ಮಣಿಯುವ ಸಾಹಸವನ್ನು ಇದುವರೆಗೆ ಯಾವ ಸರ್ಕಾರವೂ ಮಾಡಿಲ್ಲ.

'ರಾಷ್ಟ್ರವಾದ'ದ ಮರೆಯಲ್ಲಿ

ಗಮನವನ್ನು ಬೆರೆಡೆಗೆ ತಿರುಗಿಸುವ ಹಿಂದುತ್ವದ ಚರ್ಚೆಯ ಮುಸುಕಿನಲ್ಲಿ ಮತ್ತು ಕೊರೊನಾ ಸಾಂಕ್ರಾಮಿಕ ಪರಿಸ್ಥಿತಿಯ ಲಾಭ ಪಡೆದು, ಈ ಮೆಟ್ರೋಪಾಲಿಟನ್ ಕಾರ್ಯಸೂಚಿಯನ್ನು ಪೂರ್ಣವಾಗಿ ಕಾರ್ಯಗತಗೊಳಿಸಬಹುದು ಎಂದು ಮೋದಿ ಸರ್ಕಾರ ಭಾವಿಸಿತ್ತು. ಮೋದಿ ಸರ್ಕಾರದ ಮೂರು ಕುಖ್ಯಾತ ಕೃಷಿ ಕಾನೂನುಗಳು ಈ ಉದ್ದೇಶವನ್ನು ನಿಖರವಾಗಿ ಹೊಂದಿದ್ದವು. ಆಹಾರ ಧಾನ್ಯಗಳಿಗೆ ಕೊಡುವ ಬೆಂಬಲ ಬೆಲೆ ವ್ಯವಸ್ಥೆಯನ್ನು ವಿಸರ್ಜಿಸುವುದು ಮತ್ತು ರೈತರ ಸ್ಥಿತಿ-ಗತಿಗಳನ್ನು ಸುಧಾರಿಸುವ ಹೆಸರಿನಲ್ಲಿ ಕೃಷಿಯ ಕಾರ್ಪೊರೇಟೀಕರಣಕ್ಕೆ ದಾರಿ ಮಾಡಿಕೊಡುವುದು ಈ ಕಾನೂನುಗಳ ಉದ್ದೇಶವಾಗಿತ್ತು! ಆದರೆ, ರೈತರ ದೃಢ ಹೋರಾಟವು ಈ ಯೋಜನೆಯನ್ನು ವಿಫಲಗೊಳಿಸಿತು.

ಸರ್ಕಾರದ ಈ ಹಿಮ್ಮೆಟ್ಟುವಿಕೆಯು ತಾತ್ಕಾಲಿಕವಾದುದು. ನವ-ಉದಾರವಾದಿ ನೀತಿಗಳಿಗೆ ಬದ್ಧವಾಗಿರುವ ಮೋದಿ ಸರ್ಕಾರವು, ಆಹಾರ-ಧಾನ್ಯ ಮಾರುಕಟ್ಟೆಯೂ ಸೇರಿದಂತೆ ಮಾರುಕಟ್ಟೆಗಳಲ್ಲಿ ಸರ್ಕಾರದ ಎಲ್ಲಾ ರೀತಿಯ ಮಧ್ಯಪ್ರವೇಶವನ್ನು ತೆಗೆದುಹಾಕುವ ನವ-ಉದಾರವಾದಿ ಕಾರ್ಯಸೂಚಿಗೆ ಬದ್ಧವಾಗಿದೆ. ಆದ್ದರಿಂದ, ಸೂಕ್ತ ಅವಕಾಶ ಸಿಕ್ಕಾಗ ಅದು ಮತ್ತೊಮ್ಮೆ ಅದೇ ಕ್ರಮಗಳಿಗೆ ಹಿಂತಿರುಗುತ್ತದೆ. "ರಾಷ್ಟ್ರವಾದ"ಎಂದು ಅದು ಆಡುವ ಆಡಂಬರದ ಮಾತುಗಳ ಹಿಂದೆ ಸಾಮ್ರಾಜ್ಯಶಾಹಿ ಬೇಡಿಕೆಗಳಿಗೆ ಶರಣಾಗುವ ದಾಸ್ಯ ಮನೋಭಾವವಿದೆ. ಧೈರ್ಯಗೇಡಿ ಸರ್ಕಾರವು ಸಾಮ್ರಾಜ್ಯಶಾಹಿಯ ಹುಕುಂಗಳನ್ನು ಗುಲಾಮನಂತೆ ತಲೆತಗ್ಗಿಸಿ ಪಾಲಿಸುತ್ತದೆ. ನವ ಉದಾರಿ ನೀತಿಗಳ ಅನುಷ್ಠಾನವು ದೇಶದಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯನ್ನು ಕಡಿಮೆ ಮಾಡುವುದಲ್ಲದೆ, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಕೊನೆಗೊಳಿಸುತ್ತದೆ. ಅಲ್ಲದೆ, ಧಾನ್ಯಗಳನ್ನು ಆಮದು ಮಾಡಿಕೊಳ್ಳುವ ದೇಶವು ಒಂದು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಅರ್ಥಪೂರ್ಣವಾಗಿ ನಡೆಸಲಾಗದು. ಭಾರತದಂತಹ ದೇಶಗಳು ತಮ್ಮ ಆಹಾರ ಧಾನ್ಯಗಳ ಸ್ವಾವಲಂಬನೆಯನ್ನು ತ್ಯಜಿಸಿ ಅವುಗಳನ್ನು ಆಮದು ಮಾಡಿಕೊಂಡರೆ ಏನಾಗುತ್ತದೆ ಎಂಬುದಕ್ಕೆ ಆಫ್ರಿಕಾದ ಕೆಲವು ದೇಶಗಳು ಉದಾಹರಣೆಯಾಗುತ್ತವೆ. ಆಹಾರ ಧಾನ್ಯಗಳ ಸ್ವಾವಲಂಬನೆಯನ್ನು ತ್ಯಜಿಸಿ ಆಮದುಗಳನ್ನೇ ಅವಲಂಬಿಸಿದ ಆಫ್ರಿಕಾದ ಹಲವು ದೇಶಗಳು ಈಗ ಬರ ಪರಿಸ್ಥಿತಿಗೆ ಸಿಲುಕಿವೆ. ಉಕ್ರೇನ್ ಯುದ್ಧದ ಹಿನ್ನೆಲೆಯಲ್ಲಿ ಜಾಗತಿಕ ಆಹಾರಧಾನ್ಯ ಪೂರೈಕೆಯು ಅಸ್ತ-ವ್ಯಸ್ತಗೊಂಡಿದೆ.

ಆದುದರಿಂದ, ಕೃಷಿ ಬಿಕ್ಕಟ್ಟನ್ನು ಮೀರಿ ನಿಲ್ಲಬೇಕಾದರೆ ಮತ್ತು ಆಹಾರ ಸ್ವಾವಲಂಬನೆಯನ್ನು ಸಂರಕ್ಷಿಸಿಕೊಳ್ಳಬೇಕಾದರೆ, ಸರ್ಕಾರವು ಸಾಮ್ರಾಜ್ಯಶಾಹಿಯ ಬೇಡಿಕೆಗಳಿಗೆ ವಿರುದ್ಧವಾಗಿ ರೈತಾಪಿಯನ್ನು ರಕ್ಷಿಸಲೇಬೇಕಾಗಿದೆ.

ಮಾನವ ಕಳ್ಳಸಾಗಾಣಿಕೆ ಇತ್ಯಾದಿ ಅಪರಾಧಗಳ ಗ್ಯಾಂಗ್ ಕಟ್ಟಿಕೊಂಡವರು.

ಈ ಗ್ಯಾಂಗುಗಳನ್ನು ದೇಶೀಯ ರಾಜಕಾರಣಿಗಳು, ಯು.ಎಸ್ ಮತ್ತಿತರ ವಿದೇಶೀ ಶಕ್ತಿಗಳು ತಮ್ಮ ಬೇಳೆ ಬೇಯಿಸಿಕೊಳ್ಳಲು ಬಳಸಿಕೊಂಡು ಅವು ಬೆಳೆದಿವೆ. ಬಡತನ, ಹಸಿವು, ಹತಾಶೆಯಿಂದ ತಪ್ಪಿಸಿಕೊಳ್ಳಲು ಜನ ಅದಕ್ಕೆ ಸೇರುತ್ತಾರೆ. ಅವುಗಳ ದಮನಕ್ಕೆ ಬೀಳುವ ಬಾಂಬುಗಳು, ಹತ್ಯಾರುಗಳ ಬಲಿಪಶುಗಳ ಬಂಧು-ಮಿತ್ರರ 'ಸೇಡು' ಈ ಗ್ಯಾಂಗುಗಳನ್ನು ಇನ್ನಷ್ಟು ಬಲಗೊಳಿಸುತ್ತವೆ, ದುರ್ಬಲಗೊಳಿಸುವುದಿಲ್ಲ.

ಇವೆಲ್ಲ ಯು.ಎಸ್ ಸರಕಾರಕ್ಕೆ ಗೊತ್ತಿಲ್ಲವೆಂದಲ್ಲ. ಜಿಹಾದ್, ಭಯೋತ್ಪಾದನೆ ಗಳನ್ನು ಅದು ಆಫ್ರಿಕಾದಲ್ಲಿ ಮಿಲಿಟರಿ ಮಧ್ಯಪ್ರವೇಶಕ್ಕೆ ನೆಪವಾಗಿ ಬಳಸಲು ಸಂಚು ಮಾಡುತ್ತಿದೆ. ಚೀನಾ ಆಫ್ರಿಕಾದಲ್ಲಿ ಬೆಳೆಸಿರುವ ಘನಿಷ್ಠ ಆರ್ಥಿಕ-ರಾಜಕೀಯ ಸಂಬಂಧಗಳನ್ನು ಹರಿಯಲು ಹೊಂಚು ಹಾಕುತ್ತಿದೆ. ಚೀನಾದ ಜತೆ ಸಹಕರಿಸುತ್ತಿರುವ ಸರಕಾರಗಳನ್ನು ಉರುಳಿಸಲು ಬದಲಾಯಿಸಲು ಅಥವಾ ಬೆದರಿಸಲು ತನ್ನ ಮಿಲಿಟರಿ ಬಲ ಬಳಸಲು ಹವಣಿಸುತ್ತಿದೆ. ಆಫ್ರಿಕಾದ ಸಂಪನ್ಮೂಲದ ನಿಯಂತ್ರಣಕ್ಕೆ ತಡೆಯಾಗಬಹುದಾದ ಚೀನಾದ ಸವಾಲನ್ನು ಮಿಲಿಟರಿಯಾಗಿ ಎದುರಿಸಲು ಪ್ರಯತ್ನಿಸುತ್ತಿದೆ. ಚೀನಾದ ವಿರುದ್ಧ ಆಫ್ರಿಕಾದಲ್ಲೂ ನವ ಶೀತಲ ಸಮರವನ್ನು ಸಾರಿದೆ.

"ಧೀರ ಟಿಪ್ಪುವಿನ ಲಾವಣಿಗಳು" ಜನಸಾಹಿತ್ಯ...... ಪುಟ 16 ರಿಂದ

ಲಾವಣಿಗಳ ಚರಿತ್ರೆ, ಮಹತ್ವ ಮತ್ತು ಟಿಪ್ಪು ಸುಲ್ತಾನನ ಸುತ್ತ ವಿವಾದಗಳ ಕುರಿತು ದೀರ್ಘವಾದ ಉಪಯುಕ್ತವಾದ ಪ್ರಸ್ತಾವನೆ ಬರೆದಿದ್ದಾರೆ. ಅದನ್ನು ಹಾಗೆ ಉಳಿಸಿಕೊಳ್ಳಲಾಗಿದೆ.

"ಜನಪದ ನಿರೂಪಣೆ ಟಿಪ್ಪುವನ್ನು ಕಂಡ ರೀತಿ ಹೇಗಿದೆ ಎಂಬುದು ಸಹಜವಾಗಿಯೇ ಕುತೂಹಲಕಾರಿಯಾದುದು.. .. ಟಿಪುವಿನ ಇತಿಹಾಸವನ್ನು ಗಮನಿಸುವಾಗ ಈ ಲಾವಣಿಗಳನ್ನು ನಿರ್ಲಕ್ಷಿಸಲು ಸಾಧ್ಯವೇ ಇಲ್ಲ. ಆಶ್ಚರ್ಯವೆಂದರೆ, ಲಿಖಿತ ಇತಿಹಾಸದಲ್ಲಿ ಖಳನಾಯಕನೆಂದು ಚಿತ್ರಿತವಾಗಿರುವ ಟಿಪ್ಪು ಇಲ್ಲಿಯವರೆಗೆ ಲಭ್ಯವಿರುವ ಜನಪದ ಸಾಹಿತ್ಯದಲ್ಲಿ ಹಾಗೂ ಕಂಪನಿ ನಾಟಕಗಳಲ್ಲಿ ಜನಾನುರಾಗಿಯೆಂದೂ ರಾಷ್ಟ್ರವೀರನೆಂದೂ ವಿಜೃಂಭಿಸಿರುವುದು... ..ಇಲ್ಲಿನ ಲಾವಣಿಗಳನ್ನು ಗಮನಿಸಿದಾಗ ತಟ್ಟನೆ ನಮಗೆ ಗೋಚರಿಸುವ ಅಂಶವೆಂದರೆ, ಯಾವ ಲಾವಣಿಯೂ ಟಿಪ್ಪುವನ್ನು ಮತಾಂಧ, ಹಿಂದೂ ದ್ವೇಷಿ ಎಂದು ವರ್ಣಿಸದೇ ಇರುವುದು".

ಎನ್ನುವ ಅವರ ಮಾತು ಮನನಯೋಗ್ಯ.

ಇದಲ್ಲದೆ ಖ್ಯಾತ ಸಾಂಸ್ಕೃತಿಕ ಚಿಂತಕ, ಜಾನಪದ ವಿದ್ವಾಂಸ ಪ್ರೊ. ಪುರುಷೋತ್ತಮ ಬಿಳಿಮಲೆ ಅವರು ಈ ಆವೃತ್ತಿಗಾಗಿಯೇ ಮುನ್ನುಡಿಯೊಂದನ್ನು ಬರೆದಿದ್ದಾರೆ. "ಮೌಖಿಕ ಇತಿಹಾಸ, ಲಾವಣಿಗಳು ಮತ್ತು ಟಿಪ್ಪು ಸುಲ್ತಾನ್" ಎಂಬ ಶೀರ್ಷಿಕೆಯಲ್ಲಿ ಅವರು ಬರೆದ ಮುನ್ನುಡಿ ಈ ಎರಡನೆಯ ಆವೃತ್ತಿಯ ಮೆರುಗನ್ನು ಹೆಚ್ಚಿಸಿದೆ. ಅವರ ಮುನ್ನುಡಿ ಈ ಲಾವಣಿಗಳನ್ನು ಅರಿಯಲು ಸಹಾಯಕವಾಗುವುದಲ್ಲದೆ ಟಿಪ್ಪು ಸುಲ್ತಾನನ ಕುರಿತ ಚರ್ಚೆಯನ್ನು ನಡೆಸಬೇಕಾದ ಸರಿಯಾದ ಕಣ್ಣೋಟವನ್ನು ಮುಂದಿಡುತ್ತದೆ.

"ಸಾಮಾನ್ಯವಾಗಿ ಜನರಿಗೆ ಹತ್ತಿರವಾಗಿ ಬದುಕಿದ್ದವರ ಕುರಿತು ಮಾತ್ರ ಜನಪದ ಸಾಹಿತ್ಯ ಹುಟ್ಟಿಕೊಳ್ಳುತ್ತದೆ. ಇತಿಹಾಸದ ಪ್ರಮುಖ ಘಟನೆಗಳಲ್ಲಿ ಭಾಗಿಯಾದವರು, ಅಥವಾ ಅದಕ್ಕೆ ಸಾಕ್ಷಿಯಾದವರು, ತಮ್ಮ ನೆನಪುಗಳನ್ನು ಮೌಖಿಕ ರೂಪದಲ್ಲಿ ದಾಖಲಿಸಿಕೊಳ್ಳುತ್ತಾರೆ. ಲಾವಣಿಗಳು ಅಂಥ ಪ್ರಮುಖ ದಾಖಲೆಗಳು. ಅವು ಆ ಕಾಲಘಟ್ಟದಲ್ಲಿ ಬದುಕಿದ್ದ ಜನರ ಮನದಾಳದಲ್ಲಿ ಹುದುಗಿದ್ದ ವೈಯಕ್ತಿಕ ಅನುಭವಗಳನ್ನು ಹಾಡಿನ ಮೂಲಕ ಜನರಿಗೆ ತಿಳಿಸಿಹೇಳುತ್ತವೆ... .. ಲಾವಣಿ ಬರೆದವನಿಗೆ ಅಥವಾ ಲಾವಣಿ ಹಾಡುವವನಿಗೆ ಲಾವಣಿಯಲ್ಲಿ ಕಂಡರಿಸಲಾದ ನಾಯಕನ ಬಗ್ಗೆ ನೋಡಿ, ಕೇಳಿ, ನೇರವಾಗಿ ಗೊತ್ತಿರುತ್ತದೆ. ಇತಿಹಾಸದ ವ್ಯಕ್ತಿಯೊಬ್ಬ ಜನಸಾಮಾನ್ಯರೊಡನೆ ಸಂಪರ್ಕ ಸಾಧಿಸದೇ ಇದ್ದರೆ ಅವನ ಬಗ್ಗೆ ಲಾವಣಿಗಳು ಹುಟ್ಟುವುದಿಲ್ಲ.. .. ಇಂಥ ನೆನಪುಗಳನ್ನು ಒರೆಸಿ ಹಾಕುವ ಪ್ರಯತ್ನಗಳು ನಡೆಯುತ್ತಿರುವಾಗ, ಟಿಪ್ಪುವಿನ ಲಾವಣಿಗಳು ಮತ್ತೆ ಪ್ರಕಟವಾಗಿ ಓದುಗರಿಗೆ ದೊರೆಯುತ್ತಿರುವುದು ಸಂತೋಷದ ವಿಚಾರ."

ಎಂಬ ಅವರ ಮಾತುಗಳು ಮಾರ್ಮಿಕವಾಗಿವೆ.

ಲಿಂಗದೇವರು ಪ್ರಸ್ತಾವನೆಯಲ್ಲಿ ಬರೆದಂತೆ ಪ್ರೊ.ರಹಮತ್ ತರೀಕೆರೆ ಅವರು ಈ ಕೃತಿಯ ಮೊದಲ ಆವೃತ್ತಿಯ ಪ್ರಕಟಣೆಗೇನೇ ಒತ್ತಡ ಹಾಕಿದವರು.

"ಇಲ್ಲಿ ಟಿಪ್ಪುವನ್ನು ತಮ್ಮ ಊರುಮನೆಯ ವ್ಯಕ್ತಿ, ಕುಟುಂಬದ ಸದಸ್ಯ ಎಂಬ ಬಾವಣೆಕೆಯಿಂದ ಚರಿತ್ರೆಯನ್ನು ನೋಡುವ ಜನಪದ ಕಥನವಿದೆ. ಇಲ್ಲಿನ ಲಾವಣಿಗಳು ಇಂತಹ ಸಾಮುದಾಯಿಕ ದೃಷ್ಟಿಕೋನದ ನಿರೂಪಣೆಗಳಾಗಿವೆ. ಜನಪದರು ಯಾವಾಗಲೂ ಯುದ್ಧವನ್ನು ಗೆದ್ದ ಸಾಮ್ರಾಟರ ಬಗ್ಗೆ ಕಥಿಸುವುದಿಲ್ಲ. ದೊಡ್ಡ ಶಕ್ತಿಯೊಂದಕ್ಕೆ ಅಂಜದೆ ಮುಖಾಮುಖಿಯಾಗಿ ದುರಂತ ಸಾವನ್ನು ಕಂಡ ಕೆಚ್ಚೆದೆಯವರನ್ನು ಕುರಿತು ಹಾಡುವರು. ಈ ಲಾವಣಿಗಳಲ್ಲಿ ಬಿದ್ದವರ ನೋವಿಗೆ ಮಿಡಿಯುವ ಅಂತಃಕರಣವಿದೆ. ಗತವನ್ನು ವರ್ತಮಾನಕ್ಕೆ ತಂದು ಸಮಕಾಲೀನಗೊಳಿಸುವ ಪ್ರಜ್ಞೆಯೂ ಇದೆ. ಧರ್ಮಾತೀತವಾಗಿ ಬದುಕನ್ನು ನೋಡುವ ಜಾತ್ಯತೀತತೆಯೂ ಇದೆ."

ಎಂಬಿತ್ಯಾದಿ ವಿಶಿಷ್ಟ ಒಳನೋಟಗಳಿರುವ ಬೆನ್ನುಡಿಯನ್ನು ರಹಮತ್ ತರೀಕೆರೆ ಬರೆದಿದ್ದಾರೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE January 9-15, 2023 Price: Rs. 10/- Date of Publication: 6 January 2023 RNI No. KARKAN /2006/17926 Posted on 10-01-2023
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2

"ಅಸಮಾನತೆಯನ್ನು ಸೃಷ್ಟಿಸಿದ್ದು ದೇವರಲ್ಲ, ಬಂಡವಾಳಶಾಹಿಗಳು"–ಡಾ. ರಾಜೇಂದ್ರ ಚೆನ್ನಿ



"ಅಸಮಾನತೆಯ ನೆಲೆಗಳು: ಅಭಿವೃದ್ಧಿ ಮತ್ತು ಸೌಹಾರ್ದ ಪ್ರಶ್ನೆಗಳು" ರಾಜ್ಯ ಮಟ್ಟದ ವಿಚಾರ ಸಂಕಿರಣ.

"ಅಸಮಾನತೆಯನ್ನು ಸೃಷ್ಟಿಸಿದ್ದು ದೇವರಲ್ಲ, ಬಂಡವಾಳಶಾಹಿಗಳು ಸೃಷ್ಟಿಸಿದ್ದು. ಈ ಅಸಮಾನತೆಯನ್ನು ಮುಂದುವರೆಸಿಕೊಂಡು ಹೋಗಲು ರೈತ, ಕಾರ್ಮಿಕರು ಮತ್ತು ಆದಿವಾಸಿಗಳು ಜನ ಸಾಮಾನ್ಯರ ಮೇಲೆ ಬಂಡಳವಾಳಿಗರ ಪರವಾದ ಸರಕಾರಗಳು ತೀವ್ರತರ ದಾಳಿ ನಡೆಸುತ್ತಿವೆ. ಈ ಹುನ್ನಾರಗಳನ್ನು ಹಿಮ್ಮೆಟ್ಟಿಸಲು ನಿರಂತರ ಚರ್ಚೆ, ಸಂಘಟಿತ ಹೋರಾಟ ಅಗತ್ಯ" ಎಂದು ನಿವೃತ್ತ ಪ್ರಾಧ್ಯಾಪಕರು ಹಾಗೂ ಬರಹಗಾರರಾದ ಡಾ. ರಾಜೇಂದ್ರ ಚೆನ್ನಿ ಅವರು ಹೇಳಿದರು.

ಸಿಐಟಿಯು 17ನೇ ಅಖಿಲ ಭಾರತ ಸಮ್ಮೇಳನದ ಅಂಗವಾಗಿ ಧಾರವಾಡ ಜಿಲ್ಲಾ ಸ್ವಾಗತ ಸಮಿತಿ ಡಿಸೆಂಬರ್–18ರಂದು ಧಾರವಾಡದ ಆಲೂರು ವೆಂಕಟರಾವ್ ಸಭಾಭವನದಲ್ಲಿ ನಡೆಸಿದ "ಅಸಮಾನತೆಯ ನೆಲೆಗಳು: ಅಭಿವೃದ್ಧಿ ಮತ್ತು ಸೌಹಾರ್ದ ಪ್ರಶ್ನೆಗಳು" ವಿಷಯದ ಕುರಿತ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಘನತೆಯ ಬದುಕು ಕಟ್ಟಿಕೊಡುವುದೇ ಅಭಿವೃದ್ಧಿ:

ಮೊದಲ ಗೋಷ್ಠಿಯಲ್ಲಿ "ಅಭಿವೃದ್ಧಿ ಪರಿಕಲ್ಪನೆ–ಅಸಮಾನತೆ" ಕುರಿತು ಮಾತನಾಡಿದ ನಿವೃತ್ತ ಪ್ರಾಧ್ಯಾಪಕರು ಮತ್ತು ಬರಹಗಾರರಾದ ಡಾ. ಟಿ.ಆರ್. ಚಂದ್ರಶೇಖರ ಅವರು "ವರಮಾನ, ಜಿಡಿಪಿ ಏರಿಕೆಯೇ ಅಭಿವೃದ್ಧಿ ಎಂದು ಪರಿಭಾವಿಸಲಾಗುತ್ತಿದೆ. ವರಮಾನ, ಜಿಡಿಪಿ ಏರಿಕೆ ಇವು ಅಭಿವೃದ್ಧಿಯ ಸಾಧನಗಳು. ಜನತೆಗೆ ಆರೋಗ್ಯ, ಶಿಕ್ಷಣ, ಸೌಹಾರ್ದತಾ ವಾತಾವರಣ ಕಲ್ಪಿಸುವುದರೊಂದಿಗೆ ಜನತೆಗೆ ಘನತೆಯ ಬದುಕು ಕಟ್ಟಿಕೊಡುವುದೇ ನಿಜವಾದ ಅಭಿವೃದ್ಧಿ" ಎಂದರು.

"ಉದ್ಯೋಗ ಶಿಕ್ಷಣ–ಅಭಿವೃದ್ಧಿ" ವಿಷಯ ಕುರಿತು ಮಾತನಾಡಿದ ಹೊಸತು ಪತ್ರಿಕೆಯ ಸಂಪಾದಕ ಡಾ. ಸಿದ್ದನಗೌಡ ಪಾಟೀಲರು "ಈ ದೇಶ ನಡೆಸುವವರು ಅದಾನಿ, ಅಂಬಾನಿ, ಮೋದಿ ಅಲ್ಲ, ಈ ದೇಶದ ದುಡಿಯುವ ಜನ. ಒಂದು ಕುಟುಂಬದ ಮಾಸಿಕ ಖರ್ಚು ವೈಜ್ಞಾನಿಕವಾಗಿ ಹೇಳುವುದಾದರೆ 31 ಸಾವಿರ. ಇವರಿಗೆ ಕನಿಷ್ಠ ವೇತನವನ್ನು ನೀಡಲು ಸರಕಾರಗಳಿಗೆ ಆಗುತ್ತಿಲ್ಲ. ಬದಲಾಗಿ ಅದಾನಿ, ಅಂಬಾನಿಯಂತವರಿಗೆ ದೇಶವನ್ನು ಲೂಟಿಮಾಡಲು ಅವಕಾಶ ಮಾಡಿಕೊಡಲಾಗುತ್ತಿದೆ. ಕಾರ್ಮಿಕ ವರ್ಗ ರಾಜಕೀಯವಾಗಿ ಜಾಗೃತರಾಗಬೇಕು" ಎಂದರು.

ಕೋಮುವಾದದ ಸೃಷ್ಟಿ ಇತಿಹಾಸದ ವಿಕೃತಿಯ ವ್ಯಾಖ್ಯಾನದಲ್ಲಿಯೇ ಅಡಗಿದೆ:

ಸಮಾರೋಪ ಸಮಾರಂಭದಲ್ಲಿ "ಸೌಹಾರ್ದ ಪರಂಪರೆ ಮತ್ತು ಜನತೆಯ ಬದುಕು" ವಿಷಯ ಕುರಿತು ಮಾತನಾಡಿದ ನಿವೃತ್ತ ಪ್ರಾಧ್ಯಾಪಕ ಡಾ. ಶಿವಾನಂದ ಶೆಟ್ಟರ "ಇಲ್ಲಿಯವರೆಗೆ ಟಿಪ್ಪು ಸುಲ್ತಾನನನ್ನು "ಮೈಸೂರ ಹುಲಿ" ಎನ್ನುತ್ತಿದ್ದರು. ಈಗ ರಸ್ತೆಯಲ್ಲಿ ಆತ ಕೋಮುವಾದಿಯೆಂದು ಗಲಾಟೆ ಮಾಡಲಾಗುತ್ತಿದೆ. ಕೋಮುವಾದ ಕೆರಳಿಸಲೆಂದೆ, ಕೋಮು ಐಕ್ಯತೆ ಹಾಳುಗೆಡವಲೆಂದೆ ಇತಿಹಾಸದ ವಿಕೃತ ವ್ಯಾಖ್ಯಾನ ಮಾಡಲಾಗುತ್ತಿದೆ. ಈ ನೆಲದಲ್ಲಿ ಅತ್ಯಂತ ಗಾಡವಾದ ಭವ್ಯವಾದ ಸೌಹಾರ್ದ ಪರಂಪರೆ ಇದೆ. ಇದನ್ನು ಉಳಿಸಿ ಬೆಳೆಸುವ ಕೆಲಸ ಅಂತ್ಯಂತ ತುರ್ತಾಗಿದೆ ಎಂದರು.

ಮಹೇಶ ಪತ್ತಾರ

ಸಮಾರೋಪ ಮಾತುಗಳನ್ನಾಡಿದ ಸಿಐಟಿಯು ರಾಜ್ಯ ಉಪಾಧ್ಯಕ್ಷ ಡಾ. ಕೆ. ಪ್ರಕಾಶ್ "ಸ್ವಾತಂತ್ರ್ಯ ಹೋರಾಟ ತೀವ್ರಗೊಳ್ಳಲು ಅಂದಿನ ಕಾರ್ಮಿಕರ ಹೋರಾಟ ಪ್ರಮುಖ ಪಾತ್ರವಹಿಸಿದೆ. ಸ್ವಾತಂತ್ರ್ಯ ನಂತರ ಹೋರಾಟದಿಂದ ಪಡೆದುಕೊಂಡ ಹಕ್ಕುಗಳನ್ನು ಕಳೆದುಕೊಳ್ಳುವ ಪರಸ್ಥಿತಿ ನಿರ್ಮಾಣವಾಗಿದೆ. ದೇಶದ 75 ವರ್ಷಗಳಲ್ಲಿ 121 ದೇಶಗಳಲ್ಲಿ ಭಾರತ ಜಾಗತಿಕ ಹಸಿವಿನ ಸೂಚಾಂಕದಲ್ಲಿ 84ನೇ ಸ್ಥಾನಕ್ಕೇಳಿದಿದೆ. ಸ್ವಾತಂತ್ರ್ಯೋತ್ಸವದ ಆಶೋತ್ತರಗಳು, ಇತ್ತೀಚಿಗೆ ದೆಹಲಿ ಗಡಿಯಲ್ಲಿ ನಡೆದ ಐತಿಹಾಸಿಕ ಹೋರಾಟ ಅದರ ಮಹತ್ವವನ್ನು ಯುವಜನರು ಅರ್ಥಮಾಡಿಕೊಳ್ಳಲು ಸಾಧ್ಯವಾಗಬೇಕು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ. ಮಹಾಂತೇಶ ಮಹತ್ವದ ಸಂದರ್ಭದಲ್ಲಿ ನಡೆಯುತ್ತಿರುವ ಸಿಐಟಿಯು ಸಮ್ಮೇಳನದ ಸಂದೇಶಗಳನ್ನು ಜನರತ್ತ ಒಯ್ಯಲು ರಾಜ್ಯಾಧ್ಯಂತ ಹಲವು ವೈವಿಧ್ಯಮಯ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಸಮ್ಮೇಳನ ಯಶಸ್ವಿಗಾಗಿ ಕಾರ್ಮಿಕರು ಜನಸಾಮಾನ್ಯರು ಸಹಾಯ ಸಹಕಾರ ನೀಡಬೇಕೆಂದು ವಿನಂತಿಸಿದರು.

ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾದ ಸಾಹಿತಿ ನಿವೃತ್ತ ಅಧಿಕಾರಿ ಡಾ. ಸದಾಶಿವ ಮರ್ಜಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸ್ವಾಗತ ಸಮಿತಿಯ ಅಧ್ಯಕ್ಷರು ಹಿರಿಯ ಕಾರ್ಮಿಕ ಮುಖಂಡರಾದ ಎಂ.ಬಿ.ಕಟ್ಟಿ ಸ್ವಾಗತಿಸಿದರು. ವೇದಿಕೆಯಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತು, ಸಿಐಟಿಯು ಮುಖಂಡರಾದ ತಿಲಕ ಗೌಡ, ಬಿ.ಐ. ಈಳಿಗೇರ, ಆನಂದ ಅರ್ಚಕ, ಬಸವಣ್ಣೆಪ್ಪ ನೀರಲಗಿ, ಸುನಂದಾ ಚಿಗರಿ, ಮಹೇಶ ಪತ್ತಾರ ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಅಕ್ಕಮಹಾದೇವಿ ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಸಂಗೀತ ವಿಭಾಗದ ಮುಖ್ಯಸ್ಥೆ ಡಾ. ಜ್ಯೋತಿಲಕ್ಷ್ಮೀ ಡಿ.ಪಿ. ಹಾಗೂ ಸಂಗಡಿಗರು ವಚನ ಗಾಯನ, ತತ್ವಪದಗಳನ್ನು ಪ್ರಸ್ತುತಪಡಿಸಿದರು.

ಹಿರಿಯ ವಕೀಲರಾದ ಪ್ರಕಾಶ ಉಡಿಕೇರಿ, ಮಹದಾಯಿ ಹೋರಾಟಗಾರ ಅಮೃತ ಇಜಾರಿ, ಅಭಿಯಂತರರಾದ ಶಾಂತವೇರಿ ಬೆಟಗೇರಿ, ಮುಖಂಡರಾದ ಬಸವರಾಜ ಪೂಜಾರ, ಗುರುಸಿದ್ದಪ್ಪ ಅಂಬಿಗೇರ, ಫಕ್ಕೀರವ್ವ ತೆಂಬದಮನಿ, ಮಹೇಶ ಹುಲಗೋಡ, ಸಾವಿತ್ರಿ ಸಬ್ನಿಸ್, ನಿವೃತ್ತ ಪ್ರಾಧ್ಯಪಕರಾದ ಡಾ. ದುರ್ಗಾದಾಸ್ ಕೆ.ಆರ್., ಕೆವಿಜಿಇಎ ಮುಖಂಡ ರವೀಂದ್ರ ಪತ್ತಾರ, ಪತ್ರಕರ್ತ ಡಾ. ವೆಂಕನಗೌಡ ಪಾಟೀಲ, ನಿವೃತ್ತ ಮುಖ್ಯೋಪಾಧ್ಯಾಯ ಎಸ್.ಎಸ್. ಸೌದಾಗರ್ ಮುಖಂಡರಾದ ಬಿ.ಎನ್. ಪೂಜಾರಿ, ಎ. ಎಂ. ಖಾನ್, ಎಲ್.ಎಸ್. ನಾಯಕ್, ಡಾ. ರಾಘವೇಂದ್ರ ಪಾಟೀಲ ಮುಂತಾದವರು ಉಪಸ್ಥಿತರಿದ್ದರು.

ಹಿರಿಯ ಕಾರ್ಮಿಕ ಮುಖಂಡರಿಗೆ ಸನ್ಮಾನ:

ಇದೇ ಸಂದರ್ಭದಲ್ಲಿ ಈ ಭಾಗದಲ್ಲಿ ಕಾರ್ಮಿಕ ಮುಖಂಡರಾಗಿ, ಸಾಮಾಜಿಕ ಹೋರಾಟಗಾರರಾಗಿ ಸೇವೆ ಸಲ್ಲಿಸಿದ ಹಿರಿಯ ಮುಖಂಡರಾದ ಎಂ.ಕೆ. ದೇಶಪಾಂಡೆ, ವಿ.ಎನ್. ಹಳಕಟ್ಟಿ, ಎಂ.ಬಿ.ಕಟ್ಟಿ, ಜಿ.ಎಸ್. ಬ್ಯಾಡಗಿ, ಆರ್.ಎಚ್.ಐ, ಬಿ.ಎಸ್.ಸೊಪ್ಪಿನ, ಸಿ.ಜೆ. ಕರಡೆನ್ನವರ, ಸಿ.ಎ, ಖರಾಡೆ, ವಿಠ್ಠಲ ಕಮ್ಮಾರ, ಎಂ.ಎಚ್. ಮುಲ್ಲಾ, ಅಕ್ರಮ ಖಾನ್, ಜಿ.ಎಂ. ವೈಧ್ಯ, ಹಾಸೀಮ್ ಧಾರವಾಡ, ಆರ್.ಎಸ್. ಭೋಸ್ಲೆ, ವಿ.ಎಂ. ಜೋಶಿ, ಬಾಲಾಜಿ ಸಂಪಗಾಂವಕರ್ ಅವರನ್ನು ಸನ್ಮಾನಿಸಲಾಯಿತು.


ಪದವಿ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ದೆ:

ಸಿಐಟಿಯು 17ನೇ ಅಖಿಲ ಭಾರತ ಸಮ್ಮೇಳನ ಅಂಗವಾಗಿ ಧಾರವಾಡ ಜಿಲ್ಲಾ ಸ್ವಾಗತ ಸಮಿತಿ "ಕರ್ನಾಟಕ ಸೌಹಾರ್ದತೆ ಮತ್ತು ಸಹಬಾಳ್ವೆ ಗಟ್ಟಿಗೊಳಿಸುವಲ್ಲಿ ಯುವಜನರ ಪಾತ್ರ" ವಿಷಯದ ಕುರಿತು ಪದವಿ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ದೆ ಏರ್ಪಡಿಸಿತ್ತು. 20 ಪದವಿ ಮಹಾವಿದ್ಯಾಲಯಗಳಿಂದ 141 ವಿದ್ಯಾರ್ಥಿ, ವಿದ್ಯಾರ್ಥಿನೀಯರು ಭಾಗವಹಿಸಿ ಪ್ರಬಂಧ ಬರೆದಿದ್ದರು. ಅವರಲ್ಲಿ ಪ್ರಥಮ ಸ್ಥಾನ ಧಾರವಾಡ ಕರ್ನಾಟಕ ಕಾಲೇಜಿನ ಆಕಾಶ ದಾಮಸನೂರ, ದ್ವಿತಿಯ ಸ್ಥಾನವನ್ನು ಅಣ್ಣಿಗೇರಿ ಅಮೃತೇಶ್ವರ ಕಾಲೇಜಿನ ತೇಜಶ್ವಿನಿ ಗಡ್ಡಿ, ತೃತೀಯ ಸ್ಥಾನವನ್ನು ಧಾರವಾಡದ ಶಿವಾಜಿ ಕಾಲೇಜಿನ ದೀಪಾ ಮಾದರ, ಸಾಮಾಧಾನಕರ ಬಹುಮಾನವನ್ನು ರೂಪಾ ಪವಾರ, ಹರೀಶ ಜೈನ ಪಡೆದರು. ದಿ॥ ಗುರುಬಸಪ್ಪ ಬಿದರಿ ಶಿಕ್ಷಣ ಸಮಿತಿ, ತಾರಿಹಾಳ ನಗದು ಬಹುಮಾನ ಮತ್ತು ಪ್ರಮಾಣ ಪತ್ರವನ್ನು ರಾಜ್ಯ ಮಟ್ಟದ ವಿಚಾರ ಸಂಕಿರಣ ಸಮಾರೋಪ ಸಮಾರಂಭದಲ್ಲಿ ಉದ್ಯಮಿ ಕೃಷಿಕರು ಆಗಿರುವ ನಾಗಪ್ಪ ಬಿದರಿ ವಿತರಿಸಿದರು.



"ಧೀರ ಟಿಪ್ಪುವಿನ ಲಾವಣಿಗಳು" ಜನಸಾಹಿತ್ಯ ಸಮ್ಮೇಳನದಲ್ಲಿ ಬಿಡುಗಡೆ

"ಇತಿಹಾಸದ ವ್ಯಕ್ತಿಯೊಬ್ಬ ಜನಸಾಮಾನ್ಯರೊಡನೆ ಸಂಪರ್ಕ ಸಾಧಿಸದೇ ಇದ್ದರೆ ಅವನ ಬಗ್ಗೆ ಲಾವಣಿಗಳು ಹುಟ್ಟುವುದಿಲ್ಲ.."



ಖಾಸಾ ದಂಡಿನ ಶ್ರೇಷ್ಠ ಮುಖಂಡರ ಮೋಸವು ಸುಲ್ತಾನರಿಗೆ ಅರಿವಾಯ್ತು। ಮಸಲತ್
ಮಾಡಿದ ಮೀರಸಾದಕನಿಗೆ ದೇಶ ದ್ರೋಹಿ ಎಂಬ್ಹೆಸರಾಯ್ತು॥
ಹರಾಮಕೋರರ ಕರಾಮತ್ ಅರಿತನು ಟೀಪುಸುಲ್ತಾನನು ನಿಮಿಷದಲಿ।
ಅರೇ ಹಮಾರ ನಮಕ್ ಹರಾಮ ಕರೆಸೋ ತಾನಂದ ಮನಸಿನಲಿ॥
ಸ್ವರಾಜ್ಯ ರಕ್ಷಣೆಗೋಸ್ಕರ ಸುಲ್ತಾನ ರಣಾಗ್ರ ಹೊರಟನು ರೋಷದಲಿ।
ಫಿರಂಗಿ ಸೋಲ್ಜರ ತರಂಗ ಮಧ್ಯದಿ ಸುರಂಗ ಬಿಟ್ಟನು ತ್ವರಿತದಲಿ॥
ಇವು ಟಿಪ್ಪು ಸುಲ್ತಾನ್ ಲಾವಣಿಯ ಕೆಲವು ಸಾಲುಗಳು.

ಟಿಪ್ಪು ಸುಲ್ತಾನ್ ಕರ್ನಾಟಕದ ಇತಿಹಾಸದಲ್ಲಿ ಒಂದು ವಿಶಿಷ್ಟ ವ್ಯಕ್ತಿ. ಆದರೆ ಅವನ ವಿಶಿಷ್ಟ ವ್ಯಕ್ತಿತ್ವ, ವಿಶಿಷ್ಟ ಚಾರಿತ್ರಿಕ ಪಾತ್ರದ ಬದಲಾಗಿ, ವಿವಾದಾಸ್ಪದ ವ್ಯಕ್ತಿಯಾಗಿ ಟಿಪ್ಪು ಚರ್ಚಿಸಲ್ಪಡುತ್ತಾನೆ. ಆತನ ಬಗ್ಗೆ ವಿವಾದಗಳನ್ನು ಬದಿಗಿಟ್ಟು, ಆಗಿನ ಮೈಸೂರಿನ ಜನ, ಅವನ ಪ್ರಜೆಗಳು ಟಿಪ್ಪುವನ್ನು ಯಾವ ರೀತಿ ನೋಡುತ್ತಿದ್ದರು. ಆತನನ್ನು, ಆತನ ಆಡಳಿತವನ್ನು, ಆತನ ಬದುಕನ್ನು ನೇರವಾಗಿ ನೋಡಿದ ಅವರ ಅನಿಸಿಕೆ ಏನಿತ್ತು ಎಂಬುದು ಕುತೂಹಲಕಾರವಾಗಬಲ್ಲದು.

ಅದೇ "ಧೀರ ಟಿಪ್ಪುವಿನ ಲಾವಣಿಗಳು" ಪುಸ್ತಕದ ಮುಖ್ಯ ವಸ್ತು. ಟಿಪ್ಪು ಸುಲ್ತಾನನ ಕುರಿತು ವ್ಯಾಪಕವಾಗಿ ಜನಜನಿತವಾಗಿದ್ದ ಜಾನಪದ ಹಾಡುಗಳ ಪ್ರಕಾರವಾದ 'ಲಾವಣಿ'ಗಳ ಸಂಗ್ರಹವಿದು. ಖ್ಯಾತ ಸಾಹಿತಿ, ವಿದ್ವಾಂಸ ಲಿಂಗದೇವರು ಹಳೆಮನೆ ಅವರು ಸಂಪಾದಿಸಿ 2003ರಲ್ಲಿ ಪ್ರಕಟಿಸಿದ ಕೃತಿಯಿದು. ಈಗ ಕ್ರಿಯಾ ಮಾಧ್ಯಮ ಎರಡನೆಯ ಆವೃತ್ತಿಯನ್ನು ಪ್ರಕಟಿಸುತ್ತಿದೆ. ಈ ಪುಸ್ತಕ ಜನವರಿ 8 ರಂದು ಬೆಂಗಳೂರಿನಲ್ಲಿ ನಡೆದ 'ಜನಸಾಹಿತ್ಯ ಸಮ್ಮೇಳನ'ದಲ್ಲಿ "ಬಿಡುಗಡೆಯಾಯಿತು.

ಟಿಪ್ಪು ಸುಲ್ತಾನನ ಕುರಿತ ಆರು ಲಾವಣಿಗಳನ್ನು ಸಂಗ್ರಹಿಸಿದ್ದಲ್ಲದೆ ಲಿಂಗದೇವರು ಈ

ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**